29 November 2025 Saturday SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಸಂತೃಪ್ತಿ ಎನ್ನುವುದೇ ಜೀವನದಲ್ಲಿ ತರುವ ನೆಮ್ಮದಿ!
ಯಾವುದೇ ವಿಷಯದಲ್ಲಿ ನಮಗೆ ಪೂರ್ಣ ಪ್ರಮಾಣದ ತೃಪ್ತಿ ಸಿಕ್ಕರೆ ಅದು ಸಂತೃಪ್ತಿಯೆನಿಸುತ್ತದೆ!
ಸ್ನೇಹಾ ಆನಂದ್

**ಒಂದೊಳ್ಳೆ ಮಾತು**

ನೀವು ನಿದ್ರಿಸುವಾಗ ಕಾಣುವುದು ಕನಸಲ್ಲ
ನಿಮ್ಮನ್ನು ನಿದ್ರಿಸದಂತೆ ಕಾಡುವುದೇ ನಿಜವಾದ ಕನಸು.
ಮೈಲಾರ ಸಾವಿತ್ರಿಬಾಯಿ

info.varthaman@gmail.com

9742504916

ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 43 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

# ವಿಕಸಿತ ಭಾರತಕ್ಕೆ ಮೋದಿ 'ನವಸಂಕಲ್ಪ'

## ಉಡುಪಿಯಲ್ಲಿ ಶ್ರೀಕೃಷ್ಣನ ದರ್ಶನ ಪಡೆದು ಪ್ರಧಾನಿ ನರೇಂದ್ರ ಮೋದಿ ಘೋಷಣೆ

**ಉಡುಪಿ:** ಉಡುಪಿಯಲ್ಲಿ ಶ್ರೀಕೃಷ್ಣ ದರ್ಶನ ಪಡೆದ ನಂತರ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನವಸಂಕಲ್ಪ ಮಾಡಿದರು. ದೇಶದ ಅಭಿವೃದ್ಧಿಗೆ 9 ಸೂತ್ರಗಳನ್ನು ಪಠಿಸಿದರು.

ಶ್ರೀಕೃಷ್ಣನ ದರ್ಶನ ಪಡೆದ ಮೋದಿ ಅವರು ಶುಕ್ರವಾರ ಲಕ್ಷ ಕಂಠ ಗೀತಾ ಪಠಣ ಕಾರ್ಯಕ್ರಮದಲ್ಲಿ ಮಾತನಾಡಿ, ಎಲ್ಲರೂ ಈ ಒಂಬತ್ತು ಸಂಕಲ್ಪ ಮಾಡಿ. ವರ್ತಮಾನ ಮತ್ತು ಭವಿಷ್ಯಕ್ಕೆ ಇವು ಅಗತ್ಯ ಎಂದು ತಿಳಿಸಿದರು.

ಮೊದಲ ಮೂರು ಸಂಕಲ್ಪ ಪರಿಸರಕ್ಕೆ ಸಂಬಂಧಿಸಿದ್ದು. 'ಜಲ ಸಂರಕ್ಷಣೆ'. ನೀರಿಲ್ಲದೆ ಜೀವನ ಇಲ್ಲ, ಹಾಗಾಗಿ ಪ್ರತಿ ಹನಿ ನೀರನ್ನೂ ಉಳಿಸಿ. ಎರಡನೇದು ಮರ ಬೆಳೆಸುವುದು, ತಾಯಿಯ ಹೆಸರಲ್ಲಿ ಒಂದು ಮರ ಅಭಿಯಾನ ಆರಂಭಿಸಿ. ಮೂರನೇ ಸಂಕಲ್ಪ–ಪ್ರತಿಯೊಬ್ಬರೂ ಒಂದೊಂದು ಗಿಡ ನೆಟ್ಟರೆ ದೇಶ ಹಸಿರಾಗಲಿದೆ.

**ಸಂಕಲ್ಪ–4:** ನೈಸರ್ಗಿಕ ಕೃಷಿ. ಕೆಮಿಕಲ್ ಹಾಕಿ ಮಣ್ಣು ಹಾಳು ಮಾಡೋ ಬದಲು, ನೈಸರ್ಗಿಕ ಕೃಷಿಗೆ ಒತ್ತು ಕೊಡಿ. ವೋಕಲ್–ಲೋಕಲ್ ಮಂತ್ರ ನಮ್ಮದಾಗಲಿದೆ.

**ಸಂಕಲ್ಪ–5:** 'ಸ್ವದೇಶಿ ವಸ್ತುಗಳ ಬಳಕೆ' ಒತ್ತು ಕೊಡಿ. ಇದರಿಂದ ನಮ್ಮ ದುಡ್ಡು ನಮ್ಮಲ್ಲೇ ಇರುತ್ತದೆ. ಹೀಗಾದರೆ 'ಬಡವರ ಬದುಕು ಬದಲಾವಣೆ' ಆಗಲು ಸಾಧ್ಯ. ಬಡವರು ಉದ್ಧಾರ ಆದರೆ, ದೇಶ ತಾನಾಗೇ ಮೇಲೆ ಬರುತ್ತದೆ ಎಂದು ತಿಳಿಸಿದರು.

**ಸಂಕಲ್ಪ–6:** ಆರೋಗ್ಯಪೂರ್ಣ

ಪುಟ 2ಕ್ಕೆ



### ಸ್ವರ್ಣಲೇಪಿತ ಕನಕನ ಕಿಂಡಿ ಅನಾವರಣ

**ಉಡುಪಿ:** ಸ್ವರ್ಣಲೇಪಿತ ಕನಕನ ಕಿಂಡಿಯನ್ನು ಪ್ರಧಾನಿ ಮೋದಿ ಶುಕ್ರವಾರ ಅನಾವರಣಗೊಳಿಸಿದರು. ಬಳಿಕ ಕನಕನ ಕಿಂಡಿಯಿಂದ ಉಡುಪಿ ಕೃಷ್ಣನನ್ನು ಕಣ್ತುಂಬಿಕೊಂಡರು. ನಂತರ ಕೃಷ್ಣ ಮಠದ ಎದುರಲ್ಲಿರುವ ಮಧ್ವ ಸರೋವರಕ್ಕೆ ಭೇಟಿ ನೀಡಿ

ಪುಟ 2ಕ್ಕೆ

### ಭಾರತ ಭಾಗ್ಯ ವಿಧಾತ ಬಿರುದು ಪ್ರದಾನ

**ಉಡುಪಿ:** ಉಡುಪಿಯ ಶ್ರೀಕೃಷ್ಣ ಮಠದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಭಾರತ ಭಾಗ್ಯ ವಿಧಾತ ಬಿರುದು ನೀಡಿ ಸನ್ಮಾನಿಸಲಾಯಿತು. ಪರ್ಯಾಯ ಪುತ್ತಿಗೆ ಮಠಾಧೀಶ

ಪುಟ 2ಕ್ಕೆ




### ಭಗವದ್ಗೀತೆಯ 15ನೇ ಅಧ್ಯಾಯ ಪಠಿಸಿದ ಮೋದಿ

**ಉಡುಪಿ:** ಲಕ್ಷಕಂಠ ಗೀತಾ ಪಠಣ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಮೋದಿಯವರು, ಭಗವದ್ಗೀತೆಯ 15ನೇ ಅಧ್ಯಾಯವನ್ನು ಪಠಿಸಿದರು.

ಕೃಷ್ಣಾನೂರು ಉಡುಪಿಗೆ ಶುಕ್ರವಾರ ಪ್ರಧಾನಿ ನರೇಂದ್ರ ಮೋದಿ ಭೇಟಿ ನೀಡಿದ್ದರು. ಉಡುಪಿಯ ಶ್ರೀಕೃಷ್ಣ ಮಠದ ಪರ್ಯಾಯ ಪುತ್ತಿಗೆ ಮಠಾಧೀಶ ಸುಗುಣೇಂದ್ರ

ಪುಟ 2ಕ್ಕೆ



### ಮೋದಿ ರೋಡ್ ಶೋ: ಹೂಮಳೆ ಸುರಿಸಿ ಸ್ವಾಗತ

ಉಡುಪಿ: ದೇಶದ ಪ್ರಧಾನಿಯಾದ ಬಳಿಕ ಮೊದಲ ಬಾರಿಗೆ ಉಡುಪಿಗೆ ಆಗಮಿದ ನರೇಂದ್ರ ಮೋದಿ ಅವರನ್ನು ಜನರು ಹೂಮಳೆ ಸುರಿಸಿ ಅದ್ದೂರಿಯಾಗಿ ಸ್ವಾಗತಿಸಿದರು. ನವದೆಹಲಿಯಿಂದ ವಿಶೇಷ ವಿಮಾನದಲ್ಲಿ ಮಂಗಳೂರಿಗೆ ಆಗಮಿಸಿದ ಮೋದಿ ಅವರು, ಅಲ್ಲಿಂದ ಸೇನಾ ಹೆಲಿಕಾಪ್ಟರ್ ನಲ್ಲಿ ಉಡುಪಿಯ ಹೆಲಿಪ್ಯಾಡ್ ಗೆ ಬಂದಿಳಿದರು. ಅಲ್ಲಿಂದ ರೋಡ್ ಶೋ ನಡೆಸಿದರು. ದಾರಿಯುದ್ದಕ್ಕೂ ಲಕ್ಷಾಂತರ ಮಂದಿ ಹೂಮಳೆ ಸುರಿಸಿ ಸ್ವಾಗತ ಕೋರಿದರು. ಮೋದಿಯವರು ಅಭಿಮಾನಿಗಳತ್ತ ಕೈ ಬೀಸಿ ಸಾಗಿದರು. ರಸ್ತೆಯ ಇಕ್ಕೆಲಗಳಲ್ಲಿ ಸಾವಿರಾರು ಮಂದಿ ನಿಂತು ಜೈಘೋಷ ಹಾಕಿದರು. ಬೆಳಗ್ಗೆ 10.25ಕ್ಕೆ ಭಾರತೀಯ ವಾಯುಪಡೆ ವಿಮಾನದಲ್ಲಿ ಮಂಗಳೂರು ವಿಮಾನ ನಿಲ್ದಾಣಕ್ಕೆ ಆಗಮಿಸಿದ ಪ್ರಧಾನಿ ಮೋದಿ ಅವರನ್ನು ರಾಜ್ಯ ಸರ್ಕಾರದ ಪರವಾಗಿ ಸಚಿವ ದಿನೇಶ್ ಗುಂಡೂರಾವ್ ಸ್ವಾಗತಿಸಿದರು. ಮಧ್ಯಾಹ್ನ 3.15ಕ್ಕೆ ಉಡುಪಿಯಿಂದ ಸೇನಾ ಹೆಲಿಕಾಪ್ಟರ್ ನಲ್ಲಿ ಪರ್ತಗಾಳಿ ಮಠದ ಗುರುಪರಂಪರೆಯ 550ನೇ ವರ್ಷಾಚರಣೆಯಲ್ಲಿ ಭಾಗವಹಿಸಲು ಗೋವಾಕ್ಕೆ ತೆರಳಿದರು. ಅಲ್ಲಿ ಕಂಚಿನಿಂದ ಮಾಡಲಾದ ಪ್ರಭು ಶ್ರೀರಾಮನ 77 ಅಡಿ ಎತ್ತರದ ಪ್ರತಿಮೆಯನ್ನು ಅನಾವರಣಗೊಳಿಸಲಿದ್ದಾರೆ.





## ಮೋದಿಜೀ, ಮೌನವಾಗಿರಲು ಹೇಗೆ ಸಾಧ್ಯ?: ರಾಹುಲ್

**ರಾಷ್ಟ್ರ ರಾಜಧಾನಿಯಲ್ಲಿ ಆರೋಗ್ಯ ತುರ್ತುಸ್ಥಿತಿ: ರಾಹುಲ್ ಗಾಂಧಿ ವಾಗ್ದಾಳಿ**

**ನವದೆಹಲಿ:** ಮೋದಿಜೀ, ದೇಶದ ಮಕ್ಕಳು ನಮ್ಮ ಮುಂದೆ ಉಸಿರು ಕಟ್ಟುತ್ತಿದ್ದಾರೆ. ನೀವು ಹೇಗೆ ಮೌನವಾಗಿರಲು ಸಾಧ್ಯ? ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಪ್ರಶ್ನಿಸಿದ್ದಾರೆ.



ರಾಷ್ಟ್ರ ರಾಜಧಾನಿಯಲ್ಲಿನ ವಾಯು ಮಾಲಿನ್ಯದ ವಿಷಯದ ಬಗ್ಗೆ ಸಂಸತ್ತಿನಲ್ಲಿ ವಿವರವಾದ ಚರ್ಚೆಗೆ ಒತ್ತಾಯಿಸಿರುವ ರಾಹುಲ್ ಗಾಂಧಿ ಅವರು, ಈ ಆರೋಗ್ಯ ತುರ್ತುಸ್ಥಿತಿ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರ ಮೌನದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ವಾಯುಮಾಲಿನ್ಯ ಸಮಸ್ಯೆ ನಿವಾರಣೆಗೆ ಸೂಕ್ತ ಕ್ರಮಕ್ಕೆ ಒತ್ತಾಯಿಸಿರುವ ಅವರು, ಮೋದಿ ಸರ್ಕಾರ ಈ ವಿಷಯದ ಬಗ್ಗೆ ನಿರ್ಲಕ್ಷ್ಯ ವಹಿಸಿದೆ ಎಂದು ಆರೋಪಿಸಿದ್ದಾರೆ. ತಮ್ಮ ನಿವಾಸದಲ್ಲಿ ಕೆಲವು ತಾಯಂದಿರನ್ನು ಭೇಟಿಯಾಗಿರುವ ರಾಹುಲ್ ಗಾಂಧಿ, ಅವರೊಂದಿಗೆ ಸಂಭಾಷಣೆ ನಡೆಸಿರುವ ವಿಡಿಯೋವೊಂದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ.

ನಾನು ಭೇಟಿಯಾದ ಪ್ರತಿಯೊಬ್ಬ ತಾಯಿಯೂ ನನಗೆ ಇದೇ ಮಾತನ್ನು ಹೇಳುತ್ತಿದ್ದಾರೆ. ಅವರ ಮಗು ವಿಷಕಾರಿ ಗಾಳಿಯನ್ನು ಸೇವಿಸುತ್ತಾ ಬೆಳೆಯುತ್ತಿದೆ. ಅವರು ಹೆದರುತ್ತಿದ್ದಾರೆ ಮತ್ತು ಕೋಪಗೊಂಡಿದ್ದಾರೆ. ಮೋದಿ ಜೀ, ಭಾರತದ ಮಕ್ಕಳು ನಮ್ಮ ಮುಂದೆ ಉಸಿರು ಕಟ್ಟುತ್ತಿದ್ದಾರೆ. ನಿಮ್ಮ ಸರ್ಕಾರ ಯಾಕೆ ಯಾವುದೇ ತುರ್ತು, ಯೋಜನೆ, ಹೊಣೆಗಾರಿಕೆಯನ್ನು ತೋರಿಸುತ್ತಿಲ್ಲ? ಎಂದು ಪ್ರಶ್ನಿಸಿದ್ದಾರೆ.

ವಾಯು ಮಾಲಿನ್ಯದ ಕುರಿತು ಸಂಸತ್ತಿನಲ್ಲಿ ವಿವರವಾದ ಚರ್ಚೆ ನಡೆಯಬೇಕಾಗಿದೆ. ಈ ಆರೋಗ್ಯ ತುರ್ತು ಪರಿಸ್ಥಿತಿಯನ್ನು ನಿಭಾಯಿಸಲು ಕಠಿಣ ಯೋಜನೆ ಅಗತ್ಯವಿದೆ. ನಮ್ಮ ಮಕ್ಕಳು ಶುದ್ಧ ಗಾಳಿಗೆ ಅರ್ಹರು.

## ದಾಳಿ: ಮತ್ತೊಂದು ವ್ಯಾಘ್ರ ಸೆರೆ

**ಮೈಸೂರು:** ಇಬ್ಬರು ರೈತರ ಮೇಲೆ ದಾಳಿ ಮಾಡಲು ಯತ್ನಿಸಿದ್ದ ಹುಲಿಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಸೆರೆ ಹಿಡಿದಿದ್ದಾರೆ. ಹುಣಸೂರು ತಾಲೂಕಿನ ಹನಗೋಡು ಹೋಬಳಿ ಗುರುಪುರ ಬಳಿಯ ನಾಗರಹೊಳೆ ರಾಷ್ಟ್ರೀಯ ಉದ್ಯಾನದ ಕಾಡಂಚಿನ ಪ್ರದೇಶದಲ್ಲಿರುವ ಗೌಡನಕಟ್ಟೆ ಗ್ರಾಮದ ಜಮೀನಿನಲ್ಲಿ ಹುಲಿ ಸೆರೆ ಸಿಕ್ಕಿದೆ.

ಹುಲಿ ಸೆರೆ ಹಿಡಿಯುವಂತೆ ಗ್ರಾಮಸ್ಥರು ಪ್ರತಿಭಟನೆ ನಡೆಸಿದ್ದರು. ಹೀಗಾಗಿ ರಾತ್ರಿ ಇಡೀ ಕಾರ್ಯಾಚರಣೆ ನಡೆಸಿದ ಅರಣ್ಯ ಇಲಾಖೆ ಸಿಬ್ಬಂದಿ ಶುಕ್ರವಾರ ಮುಂಜಾನೆ ತಡರಾತ್ರಿ ತಾಯಿ ಹುಲಿ ಸೆರೆ ಹಿಡಿದಿದ್ದಾರೆ. ಇದರಿಂದ ಗ್ರಾಮಸ್ಥರು ನಿಟ್ಟುಸಿರು ಬಿಟ್ಟಿದ್ದಾರೆ. ಮರಿ ಹುಲಿಗಳಿಗಾಗಿ ಕಾರ್ಯಾಚರಣೆ ಮುಂದುವರೆದಿದೆ.

ಗ್ರಾಮದ ಹೊರವಲಯದ ಹೊಲದ ಮಧ್ಯದಲ್ಲಿ ಅಡಗಿ ಕುಳಿತಿದ್ದ ಹುಲಿಗೆ ಅರವಳಿಕೆ ನೀಡಿ ಸೆರೆ ಹಿಡಿಯಲಾಗಿದೆ. ಪ್ರಾಥಮಿಕ ಚಿಕಿತ್ಸೆ ನೀಡಿ ಸುರಕ್ಷಿತ ಸ್ಥಳಕ್ಕೆ ರವಾನೆ ಮಾಡಲು ಅರಣ್ಯ ಇಲಾಖೆ ಚಿಂತಿಸಿದೆ. ಮರಿ ಹುಲಿಗಳಿರುವ ಸಾಧ್ಯತೆ ಹಿನ್ನೆಲೆಯಲ್ಲಿ ನಾಲ್ಕು ಆನೆಗಳೊಂದಿಗೆ ಅರಣ್ಯ ಇಲಾಖೆ ಟಾಸ್ಕ್ ಫೋರ್ಸ್ ಸಿಬ್ಬಂದಿಯಿಂದ ಕಾರ್ಯಾಚರಣೆ ಮುಂದುವರೆಸಿದೆ.



### ಇಬ್ಬರು ರೈತರ ಮೇಲೆ ದಾಳಿ

**ಮೈಸೂರು:** ಹುಣಸೂರು ತಾಲ್ಲೂಕಿನ ಗೌಡನಕಟ್ಟೆ ಗ್ರಾಮದಲ್ಲಿ ಇಬ್ಬರು ರೈತರ ಮೇಲೆ ಹುಲಿ ದಾಳಿ ನಡೆಸಿದೆ. ಅದೃಷ್ಟವಶಾತ್ ರೈತರು ಪಾರಾಗಿದ್ದಾರೆ. ಗೌಡನಕಟ್ಟೆಯ ರೈತ ಪ್ರಕಾಶ್ ಹಾಗೂ ಸ್ವಾಮಿ ಹುಲಿ ದಾಳಿಯಿಂದ ಪಾರಗಿದ್ದಾರೆ. ಹುಲಿ ಘರ್ಜಿಸುತ್ತಾ ದಾಳಿಗೆ ಬಂದಾಗ ಜೋರಾಗಿ ರೈತರು ಕಿರುಚಿಕೊಂಡಿದ್ದಾರೆ. ಅಕ್ಕ ಪಕ್ಕದಲ್ಲಿದ್ದ ರೈತರು ಸಹ ಜೋರಾಗಿ ಕೂಗಿಕೊಂಡಿದ್ದರಿಂದ ಹುಲಿ ಓಡಿ

## ಯಾವುದೇ ವಿಚಾರಕ್ಕೂ ಆತುರಪಡಲ್ಲ

**ನನಗೇನೂ ಬೇಡ: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಚ್ಚರಿಯ ಹೇಳಿಕೆ**

**ಬೆಂಗಳೂರು:** ನಾನು ಯಾವುದೇ ವಿಚಾರಕ್ಕೂ ಆತುರಪಡಲು ಬಯಸುವುದಿಲ್ಲ. ನನಗೇನೂ ಬೇಡ. ಪಕ್ಷದ ಹೈಕಮಾಂಡ್ ಸಿಎಂ ಹುದ್ದೆಯ ಬಗ್ಗೆ ನಿರ್ಧಾರ ತೆಗೆದುಕೊಳ್ಳುತ್ತದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಚ್ಚರಿಯ ಹೇಳಿಕೆ ನೀಡಿದ್ದಾರೆ.

ಅಧಿಕಾರಕ್ಕಾಗಿ ಬಣ ಬಡಿದಾಟಗಳ ನಡುವೆ ಒಕ್ಕಲಿಗ ಸಮುದಾಯದ ನಂಜಾವಧೂತ ಸ್ವಾಮೀಜಿ ಅವರೊಂದಿಗಿನ ಭೇಟಿ ಬಗ್ಗೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಶಿವಕುಮಾರ್, ಕಾಂಗ್ರೆಸ್ ನನ್ನ ಸಮುದಾಯ. ರಾಜ್ಯದ ಎಲ್ಲಾ ಸಮುದಾಯಗಳನ್ನು ಸಮಾನವಾಗಿ ನೋಡುವುದಾಗಿ ಹೇಳಿದರು.

ನಾನು ಯಾವುದಕ್ಕೂ ಆತುರಪಡುತ್ತಿಲ್ಲ. ನನ್ನ ಪಕ್ಷ ನಿರ್ಧಾರ ತೆಗೆದುಕೊಳ್ಳುತ್ತದೆ. ನಾನು ಯಾವುದೇ ಒಂದು ಸಮುದಾಯಕ್ಕೆ ಸೇರಿಲ್ಲ. ಕಾಂಗ್ರೆಸ್ ನನ್ನ ಸಮುದಾಯ. ಸಮಾಜದ ಎಲ್ಲಾ ವರ್ಗಗಳನ್ನು ನಾನು ಪ್ರೀತಿಸುತ್ತೇನೆ

ಪುಟ 2ಕ್ಕೆ



### ಸಿಎಂ ಜೊತೆಗೆ ದೆಹಲಿಗೆ!

ಖಂಡಿತವಾಗಿಯೂ ದೆಹಲಿಗೆ ಹೋಗುತ್ತೇನೆ. ಅದು ನಮ್ಮ ದೇವಾಲಯ. ಕಾಂಗ್ರೆಸ್‌ಗೆ ದೀರ್ಘ ಇತಿಹಾಸವಿದೆ. ದೆಹಲಿ ಯಾವಾಗಲೂ ನಮಗೆ ಮಾರ್ಗದರ್ಶನ ನೀಡುತ್ತದೆ. ಪಕ್ಷದ ನಾಯಕರು ಮತ್ತು ಮುಖ್ಯಮಂತ್ರಿಯನ್ನು ಕರೆದಾಗ, ನಾನು ಸಿಎಂ ಜೊತೆಯಲ್ಲಿಯೇ ಅಲ್ಲಿಗೆ ಹೋಗುತ್ತೇವೆ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.

ಮುಖ್ಯಮಂತ್ರಿ ಹುದ್ದೆಯ ಬಗ್ಗೆ ನಿರ್ಧಾರ ತೆಗೆದುಕೊಳ್ಳಲು ಕಾಂಗ್ರೆಸ್ ಹೈಕಮಾಂಡ್ ಜೊತೆ ಸಭೆ ನಡೆಯಲಿದೆ ಎಂಬ ವದಂತಿಗಳಿದ್ದರೂ ಸಂಸತ್ತಿನ ಚಳಿಗಾಲದ ಅಧಿವೇಶನಕ್ಕೂ ಮುನ್ನ ಕರ್ನಾಟಕದ ರೈತ ಸಮಸ್ಯೆಗಳನ್ನು ಇಟ್ಟುಕೊಳ್ಳಲು

ಪುಟ 2ಕ್ಕೆ

## ಒಪ್ಪಂದ ಆಗಿಲ್ಲವೆಂದು ಪ್ರಮಾಣ ಮಾಡಲಿ: ಎಚ್.ವಿಶ್ವನಾಥ್ ಸವಾಲು

**ಮೈಸೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರ ಹಸ್ತಾಂತರದ ಒಪ್ಪಂದ ಆಗಿಲ್ಲವೆಂದು ಚಾಮುಂಡಿಬೆಟ್ಟದಲ್ಲಿ ಚಾಮುಂಡೇಶ್ವರಿ ಸನ್ನಿಧಿಗೆ ಬಂದು ಪ್ರಮಾಣ ಮಾಡಲಿ ಎಂದು ವಿಧಾನಪರಿಷತ್ ಸದಸ್ಯ ಎ.ಎಚ್.ವಿಶ್ವನಾಥ್ ಸವಾಲು ಹಾಕಿದರು.



ನಗರದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನೇ ಐದು ವರ್ಷವೂ ಮುಖ್ಯಮಂತ್ರಿ ಆಗಿರುತ್ತೇನೆ ಎಂದು ತಾಯಿ ಚಾಮುಂಡಿ ಮುಂದೆ ಹೇಳಲಿ ಎಂದು ಆಗ್ರಹಿಸಿದರು. ಡಿ.ಕೆ.ಶಿವಕುಮಾರ್ ಮೂಲ ಕಾಂಗ್ರೆಸ್ಸಿಗ. ಪಕ್ಷ ಅಧಿಕಾರಕ್ಕೆ ತರುವಲ್ಲಿ ಅವರ ಶ್ರಮ ಹೆಚ್ಚಿದೆ. ಸಿದ್ದರಾಮಯ್ಯ ಅಧಿಕಾರ ಹಸ್ತಾಂತರ ಮಾಡಲೇಬೇಕು ಎಂದರು. ಪಕ್ಷಗಳ ನಡುವಿನ ಸಂಘರ್ಷ ಸಾಮಾನ್ಯ. ಆದರೆ, ಜಾತಿ ಸಂಘರ್ಷ ಅಪಾಯಕಾರಿ.

## ಗೊಂದಲಗಳಿಗೆ ಹೈಕಮಾಂಡ್ ಶೀಘ್ರ ತೆರೆ: ಬಿ.ಕೆ.ಹರಿಪ್ರಸಾದ್

**ಬೆಂಗಳೂರು:** ರಾಜ್ಯದಲ್ಲಿ ಆಗುತ್ತಿರುವ ಎಲ್ಲ ಬೆಳವಣಿಗೆಗಳ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಗಮನಕ್ಕೆ ಬಂದಿದೆ. ಆದಷ್ಟು ಬೇಗ ಎಲ್ಲ ಗೊಂದಲಗಳಿಗೆ ಹೈಕಮಾಂಡ್ ತೆರೆ ಎಳೆಯಲಿದೆ ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ತಿಳಿಸಿದರು.



ಸುದ್ದಿಗಾರರ ಜೊತೆ ಶುಕ್ರವಾರ ಮಾತನಾಡಿ, ಯಾವುದೇ ಲಾಬಿಗಳು ಇಲ್ಲ. ಮಾಧ್ಯಮಗಳಲ್ಲಿ ಮಾತ್ರ ಅವೆಲ್ಲ ಇರುವುದು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಂಸತ್ತಿನ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಪರಿಹಾರ ಹುಡುಕಲಿದ್ದಾರೆ ಎಂದು ತಿಳಿಸಿದರು.

ಸ್ವಾಮೀಜಿಗಳ ಸಹಿತ ಅನೇಕರು ಡಿ.ಕೆ.ಶಿವಕುಮಾರ್ ಇಲ್ಲವೇ ಸಿದ್ದರಾಮಯ್ಯ ಪರ ಮಾತನಾಡುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ನರೇಂದ್ರ ಮೋದಿ ಜೊತೆಗೆ ನಿಂತವರು, ಬಿಜೆಪಿಗೆ ಬೆಂಬಲ ನೀಡಿದವರು ಕಾಂಗ್ರೆಸ್ ಪಕ್ಷಕ್ಕೆ ಉಪದೇಶ ನೀಡುತ್ತಿರುವುದು ಸ್ವಾಗತಾರ್ಹ ಎಂದು ವ್ಯಂಗ್ಯವಾಡಿದರು.

## ಕುರ್ಚಿ ಕಿತ್ತಾಟದಿಂದ ಅಭಿವೃದ್ಧಿ ಕುಂಠಿತ: ಯದುವೀರ ಒಡೆಯರ್

**ಮಡಿಕೇರಿ:** ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿ.ಕೆ ಶಿವಕುಮಾರ್ ನಡುವೆ ಸಿಎಂ ಕುರ್ಚಿಗಾಗಿ ನಡೆಯುತ್ತಿರುವ ಕಿತ್ತಾಟದಿಂದ ರಾಜ್ಯದ ಅಭಿವೃದ್ಧಿಗೆ ಹಿನ್ನಡೆಯಾಗಿದೆ ಎಂದು ಸಂಸದ ಯದುವೀರ ಒಡೆಯರ್ ಟೀಕಿಸಿದರು.



ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಇಬ್ಬರ ನಡುವಿನ ಕುರ್ಚಿ ಕಿತ್ತಾಟದಿಂದ ರಾಜ್ಯದಲ್ಲಿ ಅಭಿವೃದ್ಧಿ ಕುಂಠಿತವಾಗುತ್ತಿದೆ. ಕಾಂಗ್ರೆಸ್‌ನ ಆತಂರಿಕ ವಿಚಾರದ ಬಗ್ಗೆ ನಮಗೆ ಯಾವುದೇ ಕಾಳಜಿ ಇಲ್ಲವೆಂದು ಕಾಂಗ್ರೆಸ್ ನಾಯಕರೇ ಹೇಳಿದ್ದಾರೆಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯದ ಜನ ಅವರನ್ನ ಆಡಳಿತ ಪಕ್ಷವಾಗಿ ಆಯ್ಕೆ ಮಾಡಿದ್ದಾರೆ. ಜನರ ಪರವಾಗಿ ಆಡಳಿತ ನಡೆಸುವುದು ಅವರ ಆದ್ಯ ಕರ್ತವ್ಯವಾಗಿದೆ. ಜನರ ಹಿತಕ್ಕಾಗಿ ಕೆಲಸ ಮಾಡುವುದು ಮೊದಲ ಕರ್ತವ್ಯ. ಅದನ್ನ ಮಾಡಲಿ

ಪುಟ 2ಕ್ಕೆ

## ಯಾರ ಮುಂದೆಯೂ ತಲೆಬಾಗಲ್ಲ

**ಉಗ್ರ ಚಟುವಟಿಕೆ ಬೆಂಬಲಿತ ದೇಶಗಳ ವಿರುದ್ಧ ಮೋದಿ ಗುಡುಗು**

**ಉಡುಪಿ:** ದೇಶದ ಮೇಲೆ ಭಯೋತ್ಪಾದಕ ದಾಳಿ ನಡೆದ ಸಂದರ್ಭದಲ್ಲಿ ಹಿಂದಿನ ಸರ್ಕಾರಗಳು ಉಗ್ರರ ಬೆಂಬಲಿತ ರಾಷ್ಟ್ರಗಳಿಗೆ ತಕ್ಕ ಪ್ರತಿಕ್ರಿಯೆ ನೀಡಲು ಹಿಂಜರಿಯುತ್ತಿದ್ದವು. ಆದರೆ ಈಗ ನವ ಭಾರತ ತನ್ನ ಜನರನ್ನು ರಕ್ಷಿಸಲು ಬದ್ಧವಾಗಿದೆ. ಯಾರ ಮುಂದೆಯೂ ತಲೆ ಬಾಗುವುದಿಲ್ಲ ಅಥವಾ ಹಿಂಜರಿಯುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಗುಡುಗಿದರು.



ಉಡುಪಿಯಲ್ಲಿ ಶುಕ್ರವಾರ ಮಾತನಾಡಿದ ಪ್ರಧಾನಿ ಮೋದಿ, ಹಿಂದಿನ ಸರ್ಕಾರಗಳು ಭಯೋತ್ಪಾದಕ ದಾಳಿಯ ನಂತರ ಸುಮ್ಮನೆ ಕುಳಿತುಕೊಳ್ಳುತ್ತಿದ್ದವು. ಆದರೆ ನವ ಭಾರತ ತನ್ನ ಜನರನ್ನು ರಕ್ಷಿಸಲು ಬದ್ಧವಾಗಿದೆ ಮತ್ತು ಯಾರ ಮುಂದೆಯೂ ತಲೆಬಾಗುವುದಿಲ್ಲ ಅಥವಾ ಹಿಂಜರಿಯುವುದಿಲ್ಲ ಎಂದರು.

ನಮಗೆ ಶಾಂತಿ ಸ್ಥಾಪನೆಯೂ ಗೊತ್ತು. ರಕ್ಷಣೆಯೂ ಗೊತ್ತು. ಸತ್ಯಕ್ಕಾಗಿ ಶ್ರಮಿಸಲು ಹಾಗೂ ದೌರ್ಜನ್ಯ ಎಸಗುವವರನ್ನು ಹತ್ತಿಕ್ಕುವ ಅಗತ್ಯವನ್ನು ಗೀತೆ ನಮಗೆ ಕಲಿಸುತ್ತದೆ. ನಾವು ವಸುಧೈವ ಕುಟುಂಬದಲ್ಲಿ ನಂಬಿಕೆ ಇಟ್ಟಿದ್ದೇವೆ ಮತ್ತು 'ಧರ್ಮೋ ರಕ್ಷತಿ ರಕ್ಷಿತಃ' ಎಂದು ಪಠಿಸುತ್ತೇವೆ ಇದೇ ಸಂದರ್ಭದಲ್ಲಿ ಹೇಳಿದರು.

ಕಳೆದ ಏಪ್ರಿಲ್‌ನಲ್ಲಿ ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್ ಭಯೋತ್ಪಾದಕ ದಾಳಿಯನ್ನು ನೆನಪಿಸಿಕೊಂಡ ಮೋದಿ, ಮೃತರಲ್ಲಿ ಕರ್ನಾಟಕದ ಜನರು ಸಹ ಸೇರಿದ್ದಾರೆ. ಪಹಲ್ಗಾಮ್ ದಾಳಿಯ ನಂತರ ಪಾಕಿಸ್ತಾನದ ಭಯೋತ್ಪಾದಕ ನೆಲೆಗಳ ಮೇಲೆ ನಿಖರವಾದ ದಾಳಿಗಳನ್ನು ನಡೆಸಿದ ಭಾರತದ ಮಿಲಿಟರಿ ಕಾರ್ಯಾಚರಣೆ ಆಪರೇಷನ್ ಸಿಂಧೂರ್ ಸಮಯದಲ್ಲಿ ನಮ್ಮ ಸರ್ಕಾರದ ದೃಢಸಂಕಲ್ಪವನ್ನು ಇಡೀ ದೇಶ ನೋಡಿದೆ ಎಂದರು.

ಪುಟ 2ಕ್ಕೆ

## ಬೆಂಬಲ ಬೆಲೆ ಹೆಚ್ಚಳಕ್ಕೆ ಮೋದಿಗೆ ಮನವಿ

*** ರೈತರ ಸಂಕಷ್ಟ ವಿವರಿಸಿ ಪ್ರಧಾನಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರ**

**ಮಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೃಷಿ ಬೆಂಬಲ ಬೆಲೆ ಹೆಚ್ಚಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಪತ್ರ ಬರೆದಿದ್ದಾರೆ. ಸಚಿವ ದಿನೇಶ್ ಗುಂಡೂರಾವ್ ಅವರು ಮುಖ್ಯಮಂತ್ರಿ ಪರವಾಗಿ ಶುಕ್ರವಾರ ಪ್ರಧಾನಿಗೆ ಮನವಿ ಪತ್ರ ಸಲ್ಲಿಸಿದರು.

ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನರೇಂದ್ರ ಮೋದಿ ಅವರು ಶುಕ್ರವಾರ ಆಗಮಿಸಿದ ವೇಳೆ ಮನವಿ ಪತ್ರ ಸಲ್ಲಿಸಿದರು. ನಂತರ ಮಾಧ್ಯಮಗಳ ಜೊತೆ ಮಾತನಾಡಿದ ದಿನೇಶ್ ಗುಂಡೂರಾವ್ ಅವರು, ಪ್ರಧಾನಿ ಮೋದಿ ಅವರಿಗೆ ಮುಖ್ಯಮಂತ್ರಿ ಮನವಿ ಪತ್ರವನ್ನು ತಲುಪಿಸಲಾಗಿದೆ. ರೈತರ ಬೆಳೆಗಳಿಗೆ ಬೆಂಬಲ ಬೆಲೆಯಿಲ್ಲದೆ ತೀವ್ರ ಸಂಕಷ್ಟಕ್ಕೆ ಗುರಿಯಾಗಿರುವುದನ್ನು ತಿಳಿಸಿ, ಬೆಂಬಲ ಬೆಲೆಯಂತೆ ಬೆಳೆ ಖರೀದಿ ವ್ಯವಸ್ಥೆ ನಿರ್ಮಿಸುವಲ್ಲಿ ಕೇಂದ್ರ ಸರ್ಕಾರ ಇಚ್ಛಾಶಕ್ತಿ ತೋರಿಸಬೇಕೆಂದು ಮನವಿ ಮಾಡಲಾಗಿದೆ ಎಂದು ಹೇಳಿದರು.

ಪತ್ರದಲ್ಲಿ ರೈತರ ಸಂಕಷ್ಟವನ್ನು ವಿವರಿಸಲಾಗಿದೆ. ಕರ್ನಾಟಕದಲ್ಲಿ 17.94 ಲಕ್ಷ ಹೆಕ್ಟೇರ್‌ಗಳಿಗಿಂತ ಹೆಚ್ಚು ಪ್ರದೇಶದಲ್ಲಿ ಮೆಕ್ಕೆಜೋಳ ಮತ್ತು 4.16 ಲಕ್ಷ ಹೆಕ್ಟೇರ್‌ಗಳಿಗಿಂತ ಹೆಚ್ಚು ಪ್ರದೇಶದಲ್ಲಿ ಹೆಸರು ಕಾಳನ್ನು ಬೆಳೆದಿದ್ದು, ತೀವ್ರ ಬೆಲೆ ಕುಸಿತದಿಂದ ರೈತರು ತೀವ್ರ ಸಂಕಷ್ಟಕ್ಕೆ ಗುರಿಯಾಗಿದ್ದಾರೆ. ಬೆಂಬಲ ಬೆಲೆಯಲ್ಲಿ ರೈತರ ಬೆಳೆಗಳನ್ನು ಖರೀದಿಸುವಂತಹ ವ್ಯವಸ್ಥೆ ನಿರ್ಮಾಣ ಮಾಡುವ ಕುರಿತು ಈ ಪತ್ರ ಬರೆಯಲಾಗಿದೆ ಎಂದು ತಿಳಿಸಿದರು

ಕರ್ನಾಟಕದಲ್ಲಿ ಪ್ರಸ್ತುತ ಮಾರಾಟವಾಗಲು ಅಂದಾಜು 32 ಲಕ್ಷ

ಪುಟ 2ಕ್ಕೆ

### ಕೇಂದ್ರಕ್ಕೆ ರಾಜ್ಯ ಸರ್ಕಾರದ ಆಗ್ರಹ

ಕರ್ನಾಟಕವು ಮೆಕ್ಕೆಜೋಳವನ್ನು ತನ್ನ ಸಾರ್ವಜನಿಕ ವಿತರಣಾ ವ್ಯವಸ್ಥೆ ವಿತರಣೆಯಲ್ಲಿ ಸೇರಿಸದ ಕಾರಣ, ರೈತರಿಗೆ ಬೆಲೆ ಸ್ಥಿರತೆಯನ್ನು ಕಾಯ್ದುಕೊಳ್ಳಲು ಸಾಧ್ಯವಾಗಿಲ್ಲ. ಹಾಗಾಗಿ, ಎನ್‌ಎಫ್‌ಇಡಿ, ಎಫ್‌ಸಿಐ ಮತ್ತು ಇತರ ಸಂಗ್ರಹಣಾ ಏಜೆನ್ಸಿಗಳಿಗೆ ಪ್ರೈಸ್ ಸಪೋರ್ಟ್ ಸ್ಕೀಮ್ ಅಥವಾ ಸೂಕ್ತ ಮಾರುಕಟ್ಟೆ ಮಧ್ಯಸ್ಥಿಕೆ ಕಾರ್ಯವಿಧಾನದ ಅಡಿಯಲ್ಲಿ ತಕ್ಷಣವೇ ಎಂಎಸ್‌ಪಿಯಲ್ಲಿ ಮೆಕ್ಕೆಜೋಳ ಮತ್ತು ಹೆಸರು ಕಾಳಿನ ಸಂಗ್ರಹಣೆಯನ್ನು ಪ್ರಾರಂಭಿಸಲು ನಿರ್ದೇಶನ ನೀಡಬೇಕು.



ಎಥನಾಲ್ ಪೂರೈಕೆ ಸರಪಳಿಯಲ್ಲಿ ಕರ್ನಾಟಕದ ರೈತರ ಭಾಗವಹಿಸುವಿಕೆ ಖಚಿತಪಡಿಸುವುದು: ಮೆಕ್ಕೆ ಜೋಳದಿಂದ ಉತ್ಪಾದಿಸುವ ಎಥನಾಲ್‌ಗೆ ಮೂಲದರ ಲೀಟರ್‌ಗೆ 66.07 ಆಗಿದೆ. ಮತ್ತು ಮೆಕ್ಕೆ ಜೋಳದಿಂದ ಪಡೆಯುವ

ಪುಟ 2ಕ್ಕೆ

## ಮೊದಲ ಪುಟದಿಂದ

### ವಿಕಸಿತ ಭಾರತಕ್ಕೆ 'ನವಸಂಕಲ್ಪ'

ಜೀವನ ಶೈಲಿ ಅಳವಡಿಸಿಕೊಳ್ಳಿ. ಊಟದಲ್ಲಿ ಎಣ್ಣೆ ಕಡಿಮೆ ಮಾಡೋಣ, ಸಿರಿಧಾನ್ಯ ಬಳಸೋಣ. ಸಂಕಲ್ಪ–7: ಯೋಗ, ಧ್ಯಾನ ಅಳವಡಿಸಿಕೊಳ್ಳಿ, ಎಲ್ಲರೂ ಯೋಗಿಗಳಾಗಿ. ಆರೋಗ್ಯವೇ ಭಾಗ್ಯ ಅಲ್ವಾ? ಫಿಟ್ ಆಗಿರೋಕೆ 'ಯೋಗ' ಮಾಡಿ, ಫಿಟ್ನೆಸ್ ಕಡೆ ಗಮನ ಕೊಡಿ ಎಂದು ಕರೆ ನೀಡಿದರು. ಸಂಕಲ್ಪ–8: ಹಸ್ತಪ್ರತಿ ಸಂರಕ್ಷಣೆಗೆ ಸಹಯೋಗ ನೀಡಿ. ಸಂಕಲ್ಪ–9: ದೇಶದ 25 ಪುಣ್ಯ ಕ್ಷೇತ್ರಗಳ ದರ್ಶನ ಮಾಡುತ್ತೇನೆ ಎಂಬ ಸಂಕಲ್ಪ ಮಾಡಿ. 2047 ಅಮೃತ ಕಾಲದ ಗುರಿಯನ್ನು ನನಸಾಗಿಸಲು ಭಾರತೀಯರು ಎಲ್ಲರೂ ತಮ್ಮ ಕರ್ತವ್ಯ ನಿಭಾಯಿಸಬೇಕು. ವಿಕಸಿತ ಕರ್ನಾಟಕ; ವಿಕಸಿತ ಭಾರತ ಸಂಕಲ್ಪ ನಮ್ಮದಾಗಲಿ ಎಂದು ಮೋದಿ ಕರೆ ನೀಡಿದರು. ಲಕ್ಷ ಕಂಠ ಗೀತಾ ಪಠಣ ಅಭಿಯಾನ ಹಮ್ಮಿಕೊಂಡಿರುವ ಸುಗುಣೇಂದ್ರ ಶ್ರೀಗೆ ಅಭಿನಂದಿಸಿದರು. ಅಯೋಧ್ಯೆಯ ರಾಮಮಂದಿರದ ಮೇಲೆ ಧರ್ಮಧ್ವಜದ ಸ್ಥಾಪನೆಯಾಗಿದೆ. ಅಯೋಧ್ಯೆಯಿಂದ ಉಡುಪಿ ವರೆಗೆ ಅಸಂಖ್ಯ ರಾಮಭಕ್ತರು ಸಂತುಷ್ಟರಾಗಿದ್ದಾರೆ. ರಾಮಮಂದಿರ ಹೋರಾಟದ ಹಾದಿ ಎಲ್ಲರಿಗೂ ಗೊತ್ತಿದೆ ಎಂದು ತಿಳಿಸಿದರು. ತಮ್ಮ ಭಾವಚಿತ್ರ ಹಿಡಿದು ನಿಂತಿದ್ದವರಿಂದ ಅವುಗಳನ್ನು ಪಡೆದುಕೊಳ್ಳುವಂತೆ ಎಸ್‌ಪಿಜಿ ಅವರಿಗೆ ಪ್ರಧಾನಿ ಮೋದಿಯವರು ಸೂಚಿಸಿದರು. ಫೋಟೋ ಹಿಂದೆ ವಿಳಾಸ ಬರೆಯಿರಿ. ನಾನು ಅಭಿನಂದನಾ ಪತ್ರ ಕಳಿಸುವೆ ಎಂದು ಮೋದಿ ಹೇಳಿದರು.

### ಭಗವದ್ಗೀತೆಯ ಪಠಿಸಿದ ಮೋದಿ

ತೀರ್ಥ ಸ್ವಾಮೀಜಿ ಹಮ್ಮಿಕೊಂಡಿರುವ ಲಕ್ಷಕಂಠ ಗೀತಾ ಪಠಣ ಕಾರ್ಯಕ್ರಮದಲ್ಲಿ ಭಗವದ್ಗೀತೆಯ 15ನೇ ಅಧ್ಯಾಯವನ್ನು ಪಠಿಸಿದರು. ಮೋದಿಯವರಿಗೆ ಶ್ರೀ ಸುಗುಣೇಂದ್ರ ತೀರ್ಥ ಸ್ವಾಮೀಜಿ ಸನ್ಮಾನಿಸಿದರು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್, ಸಚಿವ ಬೈರತಿ ಸುರೇಶ್, ಸಂಸದರಾದ ಕೋಟ ಶ್ರೀನಿವಾಸ ಪೂಜಾರಿ, ಬಿ.ವೈ.ರಾಘವೇಂದ್ರ, ಬಿ.ವೈ.ವಿಜಯೇಂದ್ರ ಭಾಗವಹಿಸಿದ್ದರು.

### ಕನಕನ ಕಿಂಡಿ ಅನಾವರಣ

ತೀರ್ಥ ಸಂಪ್ರೋಕ್ಷಣೆ ಮಾಡಿದರು. ಅಲ್ಲಿಂದ ಜನರತ್ತ ಕೈ ಬೀಸುತ್ತ ಶ್ರೀ ಕೃಷ್ಣ ಮಠ ಪ್ರವೇಶ ಮಾಡಿದರು. ಮೋದಿ ಅವರಿಗೆ ಶಂಖ, ಚಕ್ರ, ಗದೆ ಮತ್ತು ಪದ್ಮಗಳನ್ನು ಒಳಗೊಂಡಿರುವ ಬೆಳ್ಳಿ ಹೊದಿಕೆಯ ತುಳಸಿ ಜಪ ಮಾಲೆ ಮತ್ತು ಮುದ್ರೆಗಳನ್ನು ನೀಡಲಾಯಿತು. ಕನಕದಾಸರಿಗೆ ನಮಿಸುವ ಪುಣ್ಯ ಇಂದು ನನಗೆ ಸಿಕ್ಕಿದೆ. ನನ್ನಂಥ ಎಲ್ಲಾ ಭಕ್ತರಿಗೂ ಕಿಂಡಿಯ ಮೂಲಕ ಶ್ರೀಕೃಷ್ಣನ ದರ್ಶನ ಆಗುವಂತೆ ಮಾಡಿದ್ದು ಕನಕದಾಸರು. ಭಗವಾನ್ ಕೃಷ್ಣನ ಪ್ರೇರಣೆಯಿಂದಲೇ ಕೆಲವೊಂದು ಸಂಕಲ್ಪ ಮಾಡಲಾಗಿದೆ ಎಂದು ಮೋದಿ ತಿಳಿಸಿದರು.

### ಭಾರತ ಭಾಗ್ಯ ವಿಧಾತ ಬಿರುದು

**ಸುಗುಣೇಂದ್ರ ತೀರ್ಥ ಸ್ವಾಮೀಜಿ ಅವರು, ಬಿರುದು ನೀಡಿ ಸನ್ಮಾನಿಸಿದರು. ಬಳಿಕ ಕಾಶಿ ಕಾರಿಡಾರ್ ರೀತಿಯಲ್ಲಿ ಉಡುಪಿ ಕಾರಿಡಾರ್ ಅಭಿವೃದ್ಧಿ ಪಡಿಸುವಂತೆ ಅವರು ಮನವಿ ಮಾಡಿದರು. ಬಳಿಕ ಮೋದಿ ಅವರು, ಎಲ್ಲರಿಗೂ ನಮಸ್ಕಾರ... ಎಂದು ಕನ್ನಡದಲ್ಲಿ ಮಾತು ಆರಂಭಿಸಿದರು.**

### ಮೌನವಾಗಿರಲು ಹೇಗೆ ಸಾಧ್ಯ?

ನೆಪಗಳು ಮತ್ತು ಗೊಂದಲಗಳಲ್ಲ ಎಂದು ಅವರು ತಿಳಿಸಿದ್ದಾರೆ. ಕಳೆದ 15 ದಿನಗಳಿಂದ ದೆಹಲಿಯಲ್ಲಿ ವಾಯು ಗುಣಮಟ್ಟ ತೀವ್ರಗತಿಯಲ್ಲಿ ಹದಗೆಟ್ಟಿದೆ. ಮುಂಬರುವ ವಾರದಲ್ಲಿ ಗಾಳಿಯ ಗುಣಮಟ್ಟ ಮತ್ತಷ್ಟು ಹದಗೆಡುವ ಸಾಧ್ಯತೆಯಿದೆ. ಇದರಿಂದಾಗಿ ವಿಶೇಷವಾಗಿ ಧೂಮಪಾನಿಗಳು, ಅಸ್ತಮಾ ರೋಗಿಗಳು, ಮಕ್ಕಳು ಮತ್ತು ಹೃದಯ ಅಥವಾ ಉಸಿರಾಟದ ಕಾಯಿಲೆಗಳಿರುವ ಜನರು ಅನಾರೋಗ್ಯಕ್ಕೀಡಾಗುವ ಸಾಧ್ಯತೆಯಿದೆ ಎಂದು ತಜ್ಞರು ಎಚ್ಚರಿಕೆ ನೀಡಿದ್ದಾರೆ.

### ಕಿತ್ತಾಟದಿಂದ ಅಭಿವೃದ್ಧಿ ಕುಂಠಿತ:

ಎಂದು ಹೇಳಿದರು. ಇನ್ನೂ ಸಿಎಂ ಬದಲಾವಣೆ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ನಾವು ಕಾಂಗ್ರೆಸ್ ಪಕ್ಷದವರ ಜೊತೆ ಸಂಪರ್ಕದಲ್ಲಿಲ್ಲ ಎಂದರು.

### ಬೆಲೆ ಹೆಚ್ಚಳಕ್ಕೆ ಮೋದಿಗೆ ಮನವಿ

ಮೆಟ್ರಿಕ್ ಟನ್ ಮೆಕ್ಕೆಜೋಳ ಲಭ್ಯವಿದೆ. ಆದ್ದರಿಂದ, ಕೇಂದ್ರ ಸರ್ಕಾರವು ತಕ್ಷಣವೇ ಮಧ್ಯಪ್ರವೇಶಿಸಿ ದರ ನಿಗದಿ ಮಾಡುವಂತೆ ವಿನಂತಿ ಮಾಡಲಾಗಿದೆ ಎಂದು ತಿಳಿಸಿದರು.

### ಯಾರ ಮುಂದೆಯೂ ತಲೆಬಾಗಲ್ಲ

ಉಡುಪಿ ಪಟ್ಟಣವು ಐದು ದಶಕಗಳ ಹಿಂದೆಯೇ ಹೊಸ ಆಡಳಿತ ಮಾದರಿಯನ್ನು ಪ್ರಸ್ತುತಪಡಿಸಿತು. ಇದು ಇಂದು ಸ್ವಚ್ಛತೆ ಮತ್ತು ನೀರು ಸರಬರಾಜಿನ ಕುರಿತು ರಾಷ್ಟ್ರೀಯ ನೀತಿಗಳಿಗೆ ಮಾರ್ಗದರ್ಶನ ನೀಡುತ್ತಿದೆ ಎಂದು ಅವರು ತಿಳಿಸಿದರು.

ಉಡುಪಿಯ ಪೇಜಾವರ ಮಠದ ಸ್ವಾಮಿ ವಿಶ್ವೇಶ ತೀರ್ಥರನ್ನು ಶ್ಲಾಘಿಸಿದ ಪ್ರಧಾನಿ ಮೋದಿ, ರಾಮ ಜನ್ಮಭೂಮಿ ಚಳುವಳಿಯಲ್ಲಿ ಅವರ ಪಾತ್ರ ಎಷ್ಟು ದೊಡ್ಡದು ಎಂದು ಇಡೀ ದೇಶಕ್ಕೆ

ಗೊತ್ತಿದೆ. ಮಧ್ವಾಚಾರ್ಯರರು ಭಕ್ತಿಯ ಮಾರ್ಗ ತೋರಿಸಿಕೊಟ್ಟಿದ್ದಾರೆ. ಅವರ ಮಾರ್ಗದರ್ಶನದಿಂದ ಆರಂಭಗೊಂಡ ಈ ಅಷ್ಟ ಮಠಗಳು ಧರ್ಮಕಾರ್ಯದಲ್ಲಿ ತೊಡಗಿವೆ. ಕನಕದಾಸರಿಗೆ ನಮಿಸುವ ಪುಣ್ಯ ನನಗೆ ಸಿಕ್ಕಿದೆ. ನನ್ನಂತ ಎಲ್ಲಾ ಭಕ್ತರಿಗೂ ಕಿಂಡಿಯ ಮೂಲಕ ಕೃಷ್ಣ ದರ್ಶನ ಆಗುವಂತೆ ಮಾಡಿದ್ದು ಕನಕದಾಸರು. ಭಗವಾನ್ ಕೃಷ್ಣನ ಪ್ರೇರಣೆಯಿಂದಲೇ ಕೆಲವೊಂದು ಯೋಜನೆಗಳನ್ನ ಮಾಡಲಾಗಿದೆ ಎಂದು ಮೋದಿ ಹೇಳಿದರು.

### ಸಿಎಂ ಜೊತೆಗೆ ದೆಹಲಿಗೆ!

ದೆಹಲಿಗೆ ಭೇಟಿ ನೀಡುವುದಾಗಿ ಶಿವಕುಮಾರ್ ಹೇಳಿದರು.

ನನಗೆ ದೆಹಲಿಯಲ್ಲಿ ಬಹಳಷ್ಟು ಕೆಲಸಗಳಿವೆ. ಸಂಸತ್ತಿನ ಚಳಿಗಾಲದ ಅಧಿವೇಶನ ಬರುತ್ತಿದೆ. ಸಂಸದರನ್ನು ಭೇಟಿಯಾಗಬೇಕಾಗಿದೆ. ಏಕೆಂದರೆ ನಮ್ಮ ಕೆಲವು ಯೋಜನೆಗಳನ್ನು ಮುಂದಕ್ಕೆ ತೆಗೆದುಕೊಳ್ಳಬೇಕಾಗಿದೆ. ಮುಖ್ಯಮಂತ್ರಿ ಕೇಂದ್ರದೊಂದಿಗೆ ಸಮಸ್ಯೆಗಳನ್ನು ಚರ್ಚಿಸುತ್ತಿದ್ದಾರೆ. ಮೆಕ್ಕೆಜೋಳದ ಸಮಸ್ಯೆ ಇದೆ. ಕೇಂದ್ರ ಸರ್ಕಾರ ರೈತರಿಗೆ ಬೆಂಬಲ ಬೆಲೆ ನೀಡುತ್ತಿಲ್ಲ. ನಾವು ಕಾರ್ಖಾನೆ ಮಾಲೀಕರ ಸಭೆ ಕರೆಯಲು ನಿರ್ಧರಿಸಿದ್ದೇವೆ ಎಂದು ಅವರು ತಿಳಿಸಿದರು.

### ಇಬ್ಬರು ರೈತರ ಮೇಲೆ ದಾಳಿ

**ಹೋಗಿದೆ. ಹೊಲದಲ್ಲೇ ಹುಲಿ ಮರಿಗಳ ಜೊತೆ ಇದೆ. ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿದ್ದರು. ಈ ವೇಳೆ ಅಧಿಕಾರಿಗಳಿಗೆ ರೈತರು ಘೇರಾವ್ ಹಾಕಿ ಹುಲಿ ಸೆರೆ ಹಿಡಿದ ನಂತರವಷ್ಟೆ ಸ್ಥಳದಿಂದ ಹೋಗವಂತೆ ತಾಕೀತು ಮಾಡಿದ್ದಾರೆ. ಗ್ರಾಮಸ್ಥರ ಆಕ್ರೋಶಕ್ಕೆ ಮಣಿದ ಅರಣ್ಯಾಧಿಕಾರಿಗಳು ಹುಲಿ ಸೆರೆಗೆ ಕಾರ್ಯಾಚರಣೆ ಆರಂಭಿಸಿ ಸೆರೆ ಹಿಡಿದಿದ್ದಾರೆ.**

### ಕೇಂದ್ರಕ್ಕೆ ಸರ್ಕಾರದ ಆಗ್ರಹ

ಎಥನಾಲ್‌ಗೆ ಲೀಟರ್‌ಗೆ ಹೆಚ್ಚುವರಿ 5.79 (ಜಿಎಸ್‌ಟಿ ಹೊರತುಪಡಿಸಿ) ಪ್ರೋತ್ಸಾಹಧನವನ್ನು ಪಾವತಿಸಬೇಕು. ಕರ್ನಾಟಕದ ಅನೇಕ ಎಥನಾಲ್ ಘಟಕಗಳು ಮಧ್ಯವರ್ತಿಗಳು ಮತ್ತು ವ್ಯಾಪಾರಿಗಳಿಂದ ಮೆಕ್ಕೆಜೋಳವನ್ನು ಖರೀದಿಸುತ್ತಿರುವುದು ಕಂಡುಬಂದಿದೆ. ಇದು ಕೃಷಿಕರಿಗೆ ಪ್ರಯೋಜನ ನೀಡಲು ಉದ್ದೇಶಿಸಿರುವ ಕೇಂದ್ರ ಸರ್ಕಾರದ ಪ್ರೋತ್ಸಾಹಕ ರಚನೆಯ ಉದ್ದೇಶವನ್ನು ಸೋಲಿಸುತ್ತದೆ. ಕೇಂದ್ರ ಸರ್ಕಾರವು ಎಥನಾಲ್ ಘಟಕಗಳಿಗೆ ರೈತರಿಂದ ಅಥವಾ ರೈತ–ಉತ್ಪಾದಕ ಸಂಸ್ಥೆಗಳಿಂದ ನೇರವಾಗಿ ಮೆಕ್ಕೆಜೋಳವನ್ನು ಸಂಗ್ರಹಿಸಲು ನಿರ್ದೇಶಿಸಬೇಕು. ನೇರ ಸಂಗ್ರಹಣೆಯನ್ನು ಖಚಿತಪಡಿಸದಿದ್ದರೆ, ಎಥನಾಲ್ ಉತ್ಪಾದಕರಿಗೆ ನೀಡುವ ಪ್ರೋತ್ಸಾಹಕವನ್ನು ಮರುಪರಿಶೀಲಿಸಬೇಕು.

ಮೆಕ್ಕೆಜೋಳದ ಆಮದು ನಿರ್ಬಂಧ: ಕಳೆದ ವರ್ಷ ಮ್ಯಾನ್ಮಾರ್, ಉಕ್ರೇನ್ ಮತ್ತು ಇತರ ರಾಷ್ಟ್ರಗಳಿಂದ ದೊಡ್ಡ ಪ್ರಮಾಣದ ಮೆಕ್ಕೆಜೋಳದ ಆಮದು ಮಾಡಿಕೊಂಡಿರುವುದರಿಂದ ದೇಶೀಯ ಬೆಲೆಗಳನ್ನು ಕುಗ್ಗಿಸಿವೆ. ಭಾರತೀಯ ರೈತರನ್ನು ಬಲವಂತದ ಸಂಕಷ್ಟ ಮಾರಾಟಕ್ಕೆ ತಳ್ಳದಂತೆ, ಮೆಕ್ಕೆಜೋಳದ ಆಮದುಗಳನ್ನು ತಕ್ಷಣವೇ ತಡೆಹಿಡಿಯಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗಿದೆ. ಹೆಸರು ಕಾಳು ಸಂಗ್ರಹಣೆಗಾಗಿ ಗುಣಮಟ್ಟದ ಮಾನದಂಡಗಳನ್ನು ಸಡಿಲಿಕೆ ಮಾಡಬೇಕು ರಾಜ್ಯ ಸರ್ಕಾರ ಆಗ್ರಹಿಸಿದೆ.

## ರಾಜ್ಯೋತ್ಸವ, ಸಾಧಕರಿಗೆ ಸನ್ಮಾನ



ಮೈಸೂರು: ಮೈಸೂರಿನ ಆರ್ಥಿಕತೆಯ ಬೆಳವಣಿಗೆಗೆ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಗಳ ಕೊಡುಗೆ ಅಪಾರ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಪಿ. ಶಿವರಾಜು ಶ್ಲಾಘಿಸಿದರು.

ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯು ಶುಕ್ರವಾರ ಏರ್ಪಡಿಸಿದ್ದ ಕನ್ನಡ ರಾಜ್ಯೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿಶ್ವದಲ್ಲಿ ದೇಶದ ಆರ್ಥಿಕತೆ ಚೆನ್ನಾಗಿದೆ. ಅದೇ ರೀತಿ ದೇಶದ ಜಿಡಿಪಿಯಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿ. ರಾಜ್ಯದಲ್ಲಿ ಮೈಸೂರು ಆರ್ಥಿಕಾಭಿವೃದ್ಧಿಗೆ ತನ್ನದೇ ಆದ ಕೊಡುಗೆ ನೀಡುತ್ತಿದೆ ಎಂದರು. ಮಾತನಾಡುವಂತೆ ಬರೆಯುವ, ಬರೆದಂತೆ ಮಾತನಾಡುವ ಭಾಷೆ ಕನ್ನಡ ಎಂದರು. ಮಕ್ಕಳನ್ನು ಯಾವುದಾದರೂ ಮಾಧ್ಯಮದಲ್ಲಿ ಓದಿಸಿದರೂ ಮನೆಯಲ್ಲಿ ಕಡ್ಡಾಯವಾಗಿ ಕನ್ನಡ ಕಲಿಸಬೇಕು. ಕನ್ನಡದಲ್ಲಿಯೇ ಮಾತನಾಡಬೇಕು ಎಂದು ಅವರು ಕಿವಿಮಾತು ಹೇಳಿದರು. ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಆರ್.ಆನಂದ್, ಗೌ.ಕಾರ್ಯದರ್ಶಿ ಎ.ಕೆ.ಶಿವಾಜಿ ರಾವ್, ಗೌ.ಜಂಟಿ ಕಾರ್ಯದರ್ಶಿ ವಿನೋದ್ ಜೈನ್, ಗೌ.ಖಜಾಂಚಿ ಎಸ್.ಜೆ.ಅಶೋಕ್, ವಸಂತಕುಮಾರಿ ಇದ್ದರು.

## ವಾಲ್ಮೀಕಿ ನಾಮಫಲಕ ಅನಾವರಣ

ಮೈಸೂರು: ನಗರದ ಪಡುವಾರಹಳ್ಳಿಯ ವಾಲ್ಮೀಕಿ ರಸ್ತೆಯ ನಾಮಫಲಕ ಅನಾವರಣ, 70ನೇ ಕನ್ನಡ ರಾಜ್ಯೋತ್ಸವ, ಮಹರ್ಷಿ ವಾಲ್ಮೀಕಿ ಹಾಗೂ ಮದಕರಿ ನಾಯಕರ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಮಾಜಿ ಶಾಸಕ ಎಲ್.ನಾಗೇಂದ್ರ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಧಾರ್ಮಿಕ ಪುರುಷರು ಒಂದು ವರ್ಗದ ಆಚರಣೆಗೆ ಸೀಮಿತವಾಗದೆ ಎಲ್ಲರೂ ಆಚರಣೆ ಮಾಡಿದಾಗ ಮಾತ್ರ ಸಮಾಜದ ಸರ್ವತೋಮುಖ ಬೆಳವಣಿಗೆಗೆ ಸಹಕಾರವಾಗುತ್ತದೆ. ಕನ್ನಡ ನಾಡು ನುಡಿಗೆ ಶ್ರಮಿಸಿದ ಸಾಹಿತಿಗಳು ಬರಹಗಾರರು ಕನ್ನಡ ಹೋರಾಟದಲ್ಲಿ ಭಾಗವಹಿಸಿ ಕನ್ನಡದ ಏಳಿಗೆಗಾಗಿ ಶ್ರಮಿಸಿದವರ ಸ್ಮರಣೆ ನಮ್ಮೆಲ್ಲರ ಕರ್ತವ್ಯವಾಗಿದೆ. ಹಿಂದೂ ಧರ್ಮದ ಮಹಾಕಾವ್ಯ ರಾಮಾಯಣ ರಚಿಸಿದ ಮಹರ್ಷಿ ವಾಲ್ಮೀಕಿ ರಾಮಾಯಣ ಮಹಾಕಾವ್ಯದಲ್ಲಿ ಕೌಟುಂಬಿಕ ಮಹತ್ವದ ಪಾತ್ರವನ್ನು ತಿಳಿಸಿದ್ದು ಅದರಂತೆಯೇ ಮಾನವನ ಬದುಕು ಸಾಗಿದರೆ ಸುಖಿ ಸಮಾಜದ ಪರಿಕಲ್ಪನೆಯನ್ನು ಕಾಣಬಹುದು ಎಂದರು. ಈ ಸಂಧರ್ಭದಲ್ಲಿ ಮೈಸೂರು ಜಿಲ್ಲಾ ಹಾಲು ಒಕ್ಕೂಟದ ನಿರ್ದೇಶಕ ಕೆ.ಉಮಾಶಂಕರ್, ಬಿಜೆಪಿ ಮುಖಂಡ ಎಲ್.ಚೌಡಪ್ಪ, ದಿ ಮೈಸೂರು ಕೋ ಆಪರೇಟಿವ್



ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ನಗರಪಾಲಿಕೆ ಮಾಜಿ ಸದಸ್ಯರಾದ ಗುರುವಿನಾಯಕ, ರಂಗಸ್ವಾಮಿ, ಎಂ,ಚಿಕ್ಕವೆಂಕಟು, ಕೃಷ್ಣ ನಾಯಕ, ಸಿ.ಡಿ.ಕುಮಾರ್, ಗ್ರಾಜ್ಯುಯೇಟ್ ಬ್ಯಾಂಕ್ ನಿರ್ದೇಶಕಿ ವರಲಕ್ಷ್ಮೀ, ಗೋಕುಲಂ ವಿ.ಮಧು, ಸಂತೋಷ್, ನಾರಾಯಣ, ಮಂಜುನಾಥಪುರಂ ಗೋವಿಂದ, ಮಹೇಶ್, ಅರ್ಜುನ ಕುಮಾರ್, ಎಂ.ಪಿ.ಗುರುದತ್ತ, ಮಾರ್ಕೆಟ್ ರಮೇಶ್, ವೀರನಗೆರೆ ಶ್ರೀನಿವಾಸ, ಬಿ.ಜೆ.ನಾರಾಯಣಸ್ವಾಮಿ, ವೇಣು, ರವಿ, ಗೋಕುಲಂ ನಾಗ, ಕಿರಣ್, ಚಿಕ್ಕರಂಗನಾಯಕ, ರಂಗಸ್ವಾಮಿನಾಯಕ, ರಂಗರಾಜು, ಎಸ್.ತ್ಯಾಗರಾಜ್, ಯತೀಶ್, ಅಭಿ, ಬಿಜೆಪಿ ಎಸ್ಸಿ ಮೋರ್ಚಾದ ಕೆ.ಗಿರೀಶ್, ರಾಜು ಮಾರ್ಕೆಟ್, ವಿನೋದ್, ಎಲ್ ಐಸಿ ಸ್ವಾಮಿನಾಯಕ, ವಿನೋದ ನಾಗವಾಲ ಮತ್ತಿತರಿದ್ದರು.

# ಯೋಗ್ಯತೆಯಿದ್ದರೆ ಸಿಎಂ ಆಗುವುದು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ: ಎಂಎಲ್‌ಸಿ ಸಿ.ಟಿ.ರವಿ

ಮೈಸೂರು: ಯೋಗ ಇದ್ದರೆ ಸಾಲಲ್ಲ, ಯೋಗ್ಯತೆ ಇದ್ದರೆ ಮುಖ್ಯಮಂತ್ರಿಯಾಗುವುದನ್ನು ಯಾರು ತಪ್ಪಿಸಲು ಸಾಧ್ಯವಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಹೇಳಿದರು.

ಮೈಸೂರು ನಗರ ಮತ್ತು ಜಿಲ್ಲಾ ಬಿಜೆಪಿಯಿಂದ ಸಂವಿಧಾನ ಸಮರ್ಪಣಾ ದಿನದ ಜಾಗೃತಿ ಸಪ್ತಾಹ ಹಾಗೂ ಭೀಮ ಸ್ಮರಣೆ ಅಭಿಯಾನದ ಅಂಗವಾಗಿ ನಜರ್ ಬಾದ್ ನಲ್ಲಿರುವ ವಿ.ಕೆ. ಫಂಕ್ಷನ್ ಹಾಲ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿದ ವೇಳೆ ಡಿ.ಕೆ.ಶಿವಕುಮಾರ್ ಸಿಎಂ ಆಗುವ ಯೋಗ ಇದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಯಿಸಿದರು. ಒಪ್ಪಂದ ಆಗಿರುವುದು ಜನರ ನಡುವೆ ಅಲ್ಲ, ಪಕ್ಷದ ನಡುವೆ ಇದನ್ನು ಸಿಎಂ, ಡಿಸಿಎಂ ಅಥವಾ ಖರ್ಗೆಯಾದರೂ ಏನೂ ಒಪ್ಪಂದ ಆಗಿದೆ ಎಂದು ಸ್ಪಷ್ಟಪಡಿಸಬೇಕಿತ್ತು. ಎಲ್ಲರೂ ಮಾರ್ಮಿಕವಾಗಿ ಮಾತನಾಡುತ್ತಾ ಏನೂ ಒಪ್ಪಂದ ಆಗಿದೆ ಎಂಬುದನ್ನೇ ಹೇಳುತ್ತಿಲ್ಲ. ಇಂದು ಒಬ್ಬ ಗ್ರಾಮ ಪಂಚಾಯಿತಿ ಅಧ್ಯಕ್ಷನನ್ನು ಕೆಳಗಿಳಿಸುವುದೇ ಕಷ್ಟ ಎಂಬಂತಾಗಿದೆ. ಹೀಗಿರುವಾಗಿ ರಾಜಕೀಯದಲ್ಲಿ ಯಾರು ಪುಣ್ಯಕೋಟಿ ವಂಶಸ್ಥರಿಲ್ಲ. ನಮ್ಮ ಇಲ್ಲಿರುವವರೆಲ್ಲ ಪುಣ್ಯ ಕೋಟಿಯನ್ನೇ ತಿಂದು ಬದುಕುವ ಜನರಿಂದ ನಾವು ಸತ್ಯ ನಿರೀಕ್ಷಿಸಲಾಗಲ್ಲ. ಮಾತು ತಪ್ಪುಬಾರದು ಎಂದು ಹೇಳಬಹುದೆಂದರು. ನಾವೆನ್ನಿದ್ದರೂ ತಿಂಗಳೊಳಗೆ ರಸ್ತೆ ಗುಂಡಿಮುಚ್ಚಿ, ಕಬ್ಬು ಬೆಳೆಗಾರರ ಸಮಸ್ಯೆ ಪರಿಹಾರ ಎಂದು ಮಾತು ತಪ್ಪಿರುವ ಬಗ್ಗೆಯಷ್ಟೇ ಮಾತನಾಡಬಹುದೆಂದರು.

ಕಾಂಗ್ರೆಸ್ ನವರೇ ಅಂಬೇಡ್ಕರ್ ಸೋಲಿಸಿದಿರಿ, ಸತ್ತಾಗಲೂ ದೇಹಲಿಯಲ್ಲಿ ಹೂಳಲು ಜಾಗ ಕೊಡಲಿಲ್ಲ 2015ರ ನ.26ರವರೆಗೆ ಪ್ರಧಾನಿಯಾಗಿ



ನರೇಂದ್ರಮೋದಿಯವರು ಬರುವವರೆಗೂ ಮಹತ್ವವಿಲ್ಲದಂತೆ ಅಂಬೇಡ್ಕರ್ ಸ್ಮರಿಸುತ್ತಿದ್ದರು. ಸನಾತನ ಧರ್ಮದಿಂದ ಸಂವಿಧಾನಕ್ಕೆ ಅಪಾಯವಿದೆ ಎಂದು ಸಿಎಂ ಹೇಳಿದ್ದಾರೆ. ಸನಾತನ ಧರ್ಮದ ಬಗ್ಗೆ ಸಿಎಂಗೆ ಅರಿವಿಲ್ಲ. ಸನಾತನ ಧರ್ಮ ಸತ್ಯ ಅರಿಯುವ ಧರ್ಮವಾಗಿದೆ. ಪ್ರಕೃತಿ, ಬಹುತ್ವದ ಜತೆಗಿದೆ. ಒಂದು ಪುಸ್ತಕ, ಒಬ್ಬ ಪ್ರವಾದಿ ಎನ್ನುವಂತಹವರಿಂದ ಅಪಾಯವಿದೆ ಹೊರತು ಸನಾತನ ಧರ್ಮ ಕಾಲಕಾಲಕ್ಕೆ ವಿಸ್ತರಿಸುತ್ತಾ ಹೋಗುತಿದೆ ಹೊರತು ಅಪಾಯವಿಲ್ಲ. ಧರ್ಮ ಎನೆಂಬುದನ್ನು ಅರ್ಥ ಮಾಡಿಕೊಳ್ಳಿ. ರಿಲಿಜನ್ ಒಬ್ಬ ಪ್ರವಾದಿ, ಒಂದು ಪುಸ್ತಕದ ಮೇಲೆ ಅವಲಂಬಿತವಾಗಿದೆ. ಸನಾತನ ಧರ್ಮ ಆ ರೀತಿ ಅವಲಂಬಿತವಾಗಿಲ್ಲ. ಸೃಷ್ಟಿಯ ಜತೆಗೆ ಅವಲಂಬಿತವಾಗಿದೆ. ಸಂವಿಧಾನಕ್ಕೆ ಅಪಾಯ ಬಾಂಬ್ ಇಡುವವರಿಂದ ಸಂವಿಧಾನಕ್ಕೆ ಅಪಾಯವಿದೆ ಎಂದರು.

ನಾನು ರಾಜಕೀಯ ಕ್ಷೇತ್ರದಲ್ಲಿದ್ದೀನಿ, ನೀತಿ ದೊಡ್ಡದೋ ಜಾತಿ ದೊಡ್ಡದೋ ಎಂದು ಸಮಾಜ ತೀರ್ಮಾನ ಮಾಡಬೇಕಿದೆ. ಕಲಿಯುಗದಲ್ಲಿ ನೀತಿಗಿಂತ ಜಾತಿ ದೊಡ್ಡದಾಗಿದೆ. ನಮ್ಮ ಧರ್ಮ ಹೇಳುವುದು ನೀತಿ ದೊಡ್ಡದು ಎಂದು ಹೇಳಿದೆ. ನಾನು ರಾಜಕೀಯ ಕ್ಷೇತ್ರದಲ್ಲಿರುವುದರಿಂದ ರಾಜಕೀಯದ ಬಗ್ಗೆ ಸ್ವಾಮೀಜಿಗಳು ಮಾತನಾಡುವುದರ ಬಗ್ಗೆ ಪ್ರತಿಕ್ರಿಯೆ ಕೊಡುವುದು ಸೂಕ್ತವಲ್ಲವೆಂದರು.

### ಸಮಸ್ಯೆಗಳ ಕಡೆಗಣನೆ

**ನಮ್ಮ ಕಳಕಳಿ ಮೆಕ್ಕೆ ಜೋಳ ಖರೀದಿ ಮಾಡಿಲ್ಲ, ಅತಿವೃಷ್ಠಿ, ಅನಾವೃಷ್ಠಿಗೆ ನೆರವು ನೀಡಿಲ್ಲ, ಕಬ್ಬಿಗೆ ಎಫ್ ಆರ್‌ಪಿ ದರ ನಿಗಧಿ ಮಾಡಿಲ್ಲ, ರಸ್ತೆ ಗುಂಡಿ ಬಿದ್ದಿದೆ, ರೈತರ ಆತ್ಮಹತ್ಯೆಯಲ್ಲಿ ರಾಜ್ಯ ಎರಡನೇ ಸ್ಥಾನದಲ್ಲಿರುವುದರ ಬಗ್ಗೆ, ಕಾಂಗ್ರೆಸ್ ಭ್ರಷ್ಟಾಚಾರದ ಬಗ್ಗೆ ನಮ್ಮ ಕಳಕಳಿಯಾಗಿದೆ. ಸರ್ಕಾರಿ ನೌಕರರು ಆತ್ಮಹತ್ಯೆ ಆಗುತ್ತಿರುವುದರ ಬಗ್ಗೆ ನಮ್ಮ ಕಳಕಳಿಯಾಗಿದೆ. ಯಾರೇ ಮುಖ್ಯ ಮಂತ್ರಿಯಾದರೂ ಕಾಂಗ್ರೆಸ್ ನಿಂದ ಒಳ್ಳೆಯ ಆಡಳಿತ ನಿರೀಕ್ಷೆ ಮಾಡಲು ಆಗುವುದಿಲ್ಲ. ಕಾಂಗ್ರೆಸ್‌ನಲ್ಲಿ ಇದೇ ಭ್ರಷ್ಟಚಾರ ಮುಂದುವರೆಯುತ್ತದೆ ಎಂಬುದರ ಬಗ್ಗೆ ಯಾವುದೇ ಅನುಮಾನವಿಲ್ಲ. ಅತಿಹೆಚ್ಚು ಬಾರಿ ಬಜೆಟ್ ಮಂಡಿಸಿದ ಮುಖ್ಯಮಂತ್ರಿಗಳನ್ನು ನಿಮ್ಮ ಸಾಧನೆ ಏನೂ ಎಂದರೆ ಭ್ರಷ್ಟಚಾರ ಮಾಡಿರುವ ಸಾಧನೆ ಹೇಳುವರೆ? ಬೆಲೆ ಏರಿಕೆ, ಸಮಾಜ ಒಡೆದಿರುವುದೇ ಸಾಧನೆ? ನಾಲ್ವಡಿಯವರನ್ನು ಮೀರಿದ್ದೇವೆನ್ನುತ್ತಿರುವುದು ಸಾಧನೆ ಎನ್ನಲು ಸಾಧ್ಯವಾಗುತ್ತದೆ ಎಂದರು.**

ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಗ್ರಾಮಾಂತರ ಜಿಲ್ಲಾಧ್ಯಕ್ಷ ಕುಂಬರಹಳ್ಳಿ ಸುಬ್ಬಣ್ಣ, ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಹರ್ಷವರ್ಧನ್, ಅಭಿಯಾನದ ವಿಭಾಗ ಪ್ರಮುಖ ರಘು ಕೌಟಿಲ್ಯ, ಡಾ.ಪ್ರಪುಲ್ಲಾ ಮಲ್ಲಾಡಿ, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಮಾಧ್ಯಮ ಸಂಚಾಲಕ ಮಹೇಶ್ ರಾಜೇ ಅರಸ್ ಇನ್ನಿತರರು ಉಪಸ್ಥಿತರಿದ್ದರು.

## ಗುತ್ತಿಗೆ ನೀಡದೇ ಶಾಸಕರಿಂದ ಅನ್ಯಾಯ

ಮೈಸೂರು: ಎಚ್.ಡಿ.ಕೋಟೆ, ಸರಗೂರು ತಾಲೂಕಿನಲ್ಲಿ ಮಂಜೂರಾದ ಗುತ್ತಿಗೆ ಕಾಮಗಾರಿಗಳನ್ನು ಎಸ್‌ಸಿ, ಎಸ್‌ಟಿ ಕೋಟಾ ಅಡಿಯಲ್ಲಿ ಗುತ್ತಿಗೆದಾರರಿಗೆ ಮಂಜೂರು ಮಾಡದೇ ಶಾಸಕ ಅನಿಲ್ ಚಿಕ್ಕಮಾದು ಅನ್ಯಾಯ ಎಸಗುತ್ತಿದ್ದರು. ಹೀಗಾಗಿ ತಾವು ಉಚ್ಚ ನ್ಯಾಯಾಲಯದ ಮೊರೆ ಹೋಗಿರುವ ಕಾರಣ ನ್ಯಾಯಾಲಯ ಶಾಸಕರು, ಮೂವರು ಜಿಪಂ ಅಧಿಕಾರಿಗಳು ಹಾಗೂ ಕೆಆರ್‌ಯಡಿಎಲ್‌ನ ಇನ್ನಿಬ್ಬರು ಅಧಿಕಾರಿಗಳಿಗೆ ನೋಟಿಸ್ ಮಂಜೂರು ಮಾಡಿದೆ ಎಂದು ಗುತ್ತಿಗೆದಾರರ ಸಂಘದ ಅಧ್ಯಕ್ಷ ಸಿ.ತಿಮ್ಮಯ್ಯ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಇದರಿಂದ ಎರಡೂ ತಾಲೂಕಿನ ಗುತ್ತಿಗೆದಾರರಿಗೆ ಒಂದು ಹಂತದ ಗೆಲುವು ಸಿಕ್ಕಿದೆ. ಹೀಗಾಗಿ ಇನ್ನು ಮುಂದೆ ಸಂಘ ಶಾಸಕರು ಎಸ್‌ಸಿ, ಎಸ್‌ಟಿ ಗುತ್ತಿಗೆದಾರರಿಗೆ ಮಾಡಿರುವ ಮೋಸ, ಇದಕ್ಕೆ ಪ್ರತಿಯಾಗಿ ಅವರ ಶಾಸಕತ್ವ ರದ್ದು ಪಡಿಸುವವರೆಗೆ ಹೋರಾಟ ನಡೆಸಲಿದೆ ಎಂದರು. ಎಸ್‌ಸಿ, ಎಸ್‌ಟಿ ಗುತ್ತಿಗೆದಾರರಿಗೆ ಅನ್ಯಾಯವಾಗಿದೆ. ಇವರಿಗೆ ಕಾಮಗಾರಿ ಸಿಗದಿರಲೆಂದು ಉದ್ದೇಶಪೂರ್ವಕವಾಗಿ ಕೆಆರ್‌ಐಡಿಎಲ್ ಸಂಸ್ಥೆಗೆ ಕಾಮಗಾರಿ ನೀಡಲಾಗಿದೆ. ಎಸ್‌ಸಿ, ಎಸ್‌ಟಿ ಗುತ್ತಿಗೆದಾರರಿಗೆ ಮೀಸಲಾತಿ ನೀಡದೇ ಅನ್ಯಾಯ ಎಸಗಲಾಗಿದೆ ಎಂದು ನ್ಯಾಯಾಲಯದಲ್ಲಿ ವಾದ ಮಂಡಿಸಲಾಗಿತ್ತು. ಹೀಗಾಗಿ ಈಗ ಇವರಿಗೆಲ್ಲ ನೋಟಿಸ್ ನೀಡಲಾಗಿದೆ ಎಂದು ವಿವರಿಸಿದರು.ಇನ್ನಿತರ ಪದಾಧಿಕಾರಿಗಳಾದ ಕಾಂತರಾಜು, ಕೆ.ಎನ್.ದೊರೆರಾಜು, ಕೆ.ಟಿ. ಹರೀಶ್, ಶಿವಲಿಂಗಯ್ಯ ಇದ್ದರು.



## ವಿಕಸಿತ ಭಾರತ ರೋಜ್‌ಗಾರ್ ಕುರಿತು ಜಾಗೃತಿ

ಮೈಸೂರು: ಹೋಟೆಲ್ ಮಾಲೀಕರ ಸಂಘ ಮತ್ತು ಹೋಟೆಲ್ ಮಾಲೀಕರ ಧರ್ಮದತ್ತಿ ಸಂಯುಕ್ತ ಆಶ್ರಯದಲ್ಲಿ ಕೃಷ್ಣಮೂರ್ತಿಪುರಂನಲ್ಲಿರುವ ಹೋಟೆಲ್ ಮಾಲೀಕರ ಸಂಘದ ಕಚೇರಿಯಲ್ಲಿ "ಪಿ.ಎಂ. ವಿಕ್ಸಿತ್ ಭಾರತ್ ರೋಜ್‌ಗಾರ್ ಯೋಜನೆ" ಕುರಿತ ಜಾಗೃತಿ ಹಾಗೂ ಸಂವಾದ ಕಾರ್ಯಕ್ರಮ ನಡೆಯಿತು.




ಪಿ.ಎಫ್ ಇಲಾಖೆಯ ಪ್ರಾದೇಶಿಕ ಆಯುಕ್ತ ವಿನೀತ್ ಕುಮಾರ್ ಮಾತನಾಡಿ, ಉದ್ಯೋಗ ಸೃಷ್ಟಿ ಮತ್ತು ಯುವಕರಿಗೆ ಅವಕಾಶ ವಿಸ್ತರಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಪರಿಚಯಿಸಿರುವ ಈ ಯೋಜನೆಯ ಮುಖ್ಯ ಅಂಶಗಳನ್ನು ವಿವರಿಸಿದರು. ಯೋಜನೆಯಡಿ ಹೊಸ ಉದ್ಯೋಗಾವಕಾಶಗಳನ್ನು ಕಲ್ಪಿಸುವ ಉದ್ಯೋಗದಾತರಿಗೆ ಸರಕಾರದಿಂದ ನೇರ ಹಣಕಾಸು ನೆರವು ದೊರೆಯುತ್ತದೆ. ಹೊಸ ನೇಮಕಾತಿ ಮಾಡಿದ ಅಭ್ಯರ್ಥಿಗಳ ಪಿಎಫ್ ಕೊಡುಗೆಗಳಲ್ಲಿ ಕೇಂದ್ರ ಸರ್ಕಾರ ಗಣನೀಯ ಸಹಾಯ ಒದಗಿಸುತ್ತದೆ. ಹೋಟೆಲ್ ಕ್ಷೇತ್ರವು ಹೆಚ್ಚಿನ ಯುವಶಕ್ತಿ ಬಳಸುವ ಮತ್ತು ಉದ್ಯೋಗ ಸೃಷ್ಟಿ ಮಾಡುವ ಪ್ರಮುಖ ಕ್ಷೇತ್ರವಾಗಿರುವುದರಿಂದ, ಈ ಯೋಜನೆ ನಿಮಗೆ ಬಹಳ ಪ್ರಯೋಜನಕಾರಿ" ಎಂದು ತಿಳಿಸಿದರು. ಯೋಜನೆಯ ಪ್ರಯೋಜನ ಪಡೆಯುವ ವಿಧಾನ, ದಾಖಲೆ ಪ್ರಕ್ರಿಯೆ, ಆನ್‌ಲೈನ್ ನೋಂದಣಿ, ಸರ್ಕಾರದಿಂದ ಲಭಿಸುವ ಶೇಕಡಾವಾರು ಗ್ರಾಂಟ್ ಸಹಾಯ ಇತ್ಯಾದಿ ಅಂಶಗಳನ್ನೂ ಸಭೆಯಲ್ಲಿ ವಿವರಿಸಲಾಯಿತು. ಉದ್ಯೋಗದಾತರು ಶ್ರೇಣಿಬದ್ಧವಾಗಿ ಯೋಜನೆ ಉಪಯೋಗಿಸಿಕೊಂಡರೆ ಉದ್ಯೋಗ ಹಾಗೂ ವ್ಯವಹಾರ ಎರಡಕ್ಕೂ ಲಾಭ ಎಂದು ಸಲಹೆ ನೀಡಿದರು. ಇದೇ ವೇಳೆ ಸಂವಾದದಲ್ಲಿ ಅನೇಕ ಸಂಶಯಗಳಿಗೆ ಉತ್ತರ ಕೇಳಿ ಪಡೆದುಕೊಂಡರು.

ಎನ್‌ಫೋರ್ಸ್‌ಮೆಂಟ್ ಆಫೀಸರ್ ಬಿ.ಎಸ್.ಶ್ರುತಿ, ಖಾತಾಧಿಕಾರಿ ಪ್ರಫುಲ್ ಇಟ್ಟಿ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಹೋಟೆಲ್ ಮಾಲೀಕರ ಧರ್ಮದತ್ತಿ ಅಧ್ಯಕ್ಷ ರವಿ ಶಾಸ್ತ್ರಿ, ಗೌರವ ಕಾರ್ಯದರ್ಶಿ ಸುಬ್ರಹ್ಮಣ್ಯ ತಂತ್ರಿ, ಹೋಟೆಲ್ ಮಾಲೀಕರ ಸಂಘದ ಗೌರವ ಕಾರ್ಯದರ್ಶಿ ಎ.ಆರ್. ರವೀಂದ್ರ ಭಟ್ ಭಾಗವಹಿಸಿದ್ದರು.

## ಮೊದಲ ಪುಟದಿಂದ

### ಪ್ರಮಾಣ ಮಾಡಲಿ

ಅಧಿಕಾರ ಹಸ್ತಾಂತರ ವಿಚಾರದಲ್ಲಿ ಕೊಟ್ಟ ಮಾತಿನಂತೆ ನಡೆಯದಿದ್ದರಿಂದ ಏನೇನೋ ಆಗುತ್ತಿದೆ. ಆದಿಚುಂಚನಗಿರಿ ಸ್ವಾಮೀಜಿ ಗುರಿಯಾಗಿಸಿಕೊಂಡು ವಿಧಾನಪರಿಷತ್ ಸದಸ್ಯ ಯತೀಂದ್ರ ಮಾತನಾಡಿರುವುದು ಸರಿಯಲ್ಲ. ಸಿದ್ದರಾಮಯ್ಯ ಪರ ಯತೀಂದ್ರ ಬಿಟ್ಟರೆ ಯಾರೊಬ್ಬರೂ ಮಾತನಾಡುತ್ತಿಲ್ಲ ಎಂದು ಕಿಡಿಕಾರಿದರು. ಸಿದ್ದರಾಮಯ್ಯ ಕಾಂಗ್ರೆಸ್ಸಿಗನೂ ಅಲ್ಲ, ಜೆಡಿಎಸ್ ಅಥವಾ ಅಹಿಂದ ನಾಯಕನೂ ಅಲ್ಲ. ಸ್ವಾರ್ಥಕ್ಕಾಗಿ ಯಾರೊಂದಿಗೆ ಬೇಕಾದರೂ ಹೊಂದಾಣಿಕೆ ಮಾಡಿಕೊಳ್ಳುತ್ತಾರೆ ಎಂದರು.

### ಆತುರಪಡಲ್ಲ

ಎಂದರು. ಡಿಕೆಶಿ ಭೇಟಿಯಾದ ಶಾಸಕರು: ಮಾಲೂರು, ಕೋಲಾರ, ಮುಳಬಾಗಿಲು ಮತ್ತು ಕುಣಿಗಲ್ ಶಾಸಕರು ಡಿ.ಕೆ ಶಿವಕುಮಾರ್ ಅವರನ್ನು ಭೇಟಿಯಾಗಿದ್ದಾರೆ. ರಾಜ್ಯ ರಾಜಕೀಯದ ಬೆಳವಣಿಗೆಗಳ ಬಗ್ಗೆ ಮಾತುಕತೆ ನಡೆಸಿದ್ದಾರೆ. ಮಾಲೂರಿನ ಕೆ.ವೈ.ನಂಜೇಗೌಡ, ಕೋಲಾರದ ಕೊತ್ತೂರು ಮಂಜುನಾಥ್, ಮುಳಬಾಗಿಲಿನ ಆದಿ ನಾರಾಯಣ, ಕುಣಿಗಲ್ ಡಾ.ರಂಗನಾಥ್ ಮತ್ತು ಪ್ರೊಫೆಸರ್ ಎಂ.ವಿ.ರಾಜೀಗೌಡ ಅವರು ಡಿಕೆ ಶಿವಕುಮಾರ್ ಅವರನ್ನು ಭೇಟಿಯಾಗಿದ್ದರು. ರಾಜ್ಯ ರಾಜಕೀಯ ಬೆಳವಣಿಗೆಗಳ ಚರ್ಚೆ ನಡೆಸಿದ್ದಾರೆ.


**ಮೈಸೂರು ಅರಮನೆ ಮಂಡಳಿ, ಮೈಸೂರು.**

ಟೆಂಡರ್ ಅಧಿಸೂಚನೆ ಸಂಖ್ಯೆ:ಕಾನಿಅ/ಅಮಂ/ಉ.ನಿ/ತೋವಿ/

ಟೆಂಡರ್:ಸಂಖ್ಯೆ:05/2025–26 ದಿನಾಂಕ:19.11.2025

**ಟೆಂಡರ್ ಪ್ರಕಟಣೆ**

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉಪ ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು, ಇವರಿಂದ ಒಟ್ಟು ಅಂದಾಜು **ಮೊತ್ತ ರೂ. 4.00 ಲಕ್ಷಗಳಿಗೆ** ಸಂಬಂಧಪಟ್ಟಂತೆ ಕಾಮಗಾರಿಗಳಿಗೆ ತೋಟಗಾರಿಕೆ ಇಲಾಖೆಯ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ/ನೋಂದಾಯಿತ ಸಂಸ್ಥೆಗಳಿಂದ ಮೊಹರಾದ ಲಕೋಟೆಯಲ್ಲಿ ಶೇಕಡವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. (1) ಖಾಲಿ ಟೆಂಡರ್ ಫಾರಂ ಕೋರಿ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ:03.12.2025 ಸಂಜೆ 4.00** ಗಂಟೆಯವರೆಗೆ, (2) ಖಾಲಿ ಟೆಂಡರ್ ಫಾರಂಗಳನ್ನು ಗುತ್ತಿಗೆದಾರರಿಗೆ ನೀಡುವ **ದಿನಾಂಕ: 04.12.2025 ಸಂಜೆ 4.00** ಗಂಟೆಯವರೆಗೆ. (3) ಭರ್ತಿ ಮಾಡಿದ ಟೆಂಡರ್ ಫಾರಂ ಸ್ವೀಕರಿಸುವ **ದಿನಾಂಕ: 05.12.2025 ಸಂಜೆ 4.00** ಗಂಟೆಯವರೆಗೆ. ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 05.12.2025 ರ ಸಂಜೆ 4.30** ಗಂಟೆಗೆ. (4) ಟೆಂಡಗಿರ್‌ಗಿಟ್ಟಿರುವ ಮೊತ್ತ **ರೂ.4.00 ಲಕ್ಷಗಳು**. ಟೆಂಡರ್‌ಗಳನ್ನು ಯಾವ ಕಾರಣ ನೀಡದೆ ಸ್ವೀಕರಿಸುವ/ತಿರಸ್ಕರಿಸುವ ಹಕ್ಕು ಉಪ ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು ರವರಿಗೆ ಸೇರಿರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ಕೆಲಸದ ವೇಳೆಯ ಎಲ್ಲಾ ದಿನಗಳಂದು ಪಡೆಯಬಹುದು. ಒಂದು ವೇಳೆ ಮೇಲೆ ನೀಡಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳಾಗಿದ್ದಲ್ಲಿ ಆ ನಂತರದ ದಿನಗಳನ್ನು ಪರಿಗಣಿಸಲಾಗುವುದು.

**ಸಹಿ/–ಉಪ ನಿರ್ದೇಶಕರು, ಮೈಸೂರು ಅರಮನೆ ಮಂಡಳಿ ಮೈಸೂರು.**

**DIPR/DDMYS/1292/KSMCA/727/2025-26**



**ನಗರಸಭಾ ಕಾರ್ಯಾಲಯ, ಕೊಳ್ಳೇಗಾಲ**

**ಚಾಮರಾಜನಗರ ಜಿಲ್ಲೆ**

Phone No :08224-252016

Website: www.kollegalacity.mrc.gov.in

E-mail: itstaff_ulb_kollegal@yahoo.co.in

ನಂ:ಮುನಿ/ಕೊನಸ/ಆ.ಶಾ/ಟೆಂಡರ್/11/2025–26

ದಿನಾಂಕ: 27.11.2025

**–: ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ :–**

ಕೊಳ್ಳೇಗಾಲ ನಗರಸಭೆಯ ನಗರಸಭೆ ನಿಧಿಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999 ಮತ್ತು ನಿಯಮಗಳು 2000ರಂತೆ ನೊಂದಾಯಿತ ಅರ್ಹ ಪೂರೈಕೆದಾರರಿಂದ/ ಗುತ್ತಿಗೆದಾರರಿಂದ ಇ–ಪ್ರೊಕೂರ್‌ಮೆಂಟ್ **https://eproc.karnataka.gov.in** ಪೋರ್ಟಲ್ ಮೂಲಕ ನಗರಸಭೆಯ ಅಧ್ಯಕ್ಷರು/ಆಡಳಿತಾಧಿಕಾರಿಗಳು, ಪೌರಾಯುಕ್ತರು, ಸಹಾಯಕ ಕಾರ್ಯಪಾಲಕ ಅಭಿಯಂತರು(ಸಿವಿಲ್) ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರು(ಪರಿಸರ)ರವರುಗಳ ಕಛೇರಿ ಕೆಲಸಗಳ ಉಪಯೋಗಕ್ಕೆ ಅವಶ್ಯವಿರುವ ಹವಾನಿಯಂತ್ರಿತ ರಹಿತ ವಾಹನಗಳನ್ನು ಮಾಸಿಕ ಬಾಡಿಗೆ ಆಧಾರದಲ್ಲಿ ಸರಬರಾಜು ಮಾಡಲು (ತೆರಿಗೆ ಹೊರತುಪಡಿಸಿ) ಇಂಡೆಂಟ್ ನಂ.**DMA/2025-26/SE6551/CALL-2** ಆನ್‌ಲೈನ್ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಆಸಕ್ತ ನೊಂದಾಯಿತ ಸರಬರಾಜುದಾರರು/ಗುತ್ತಿಗೆದಾರರು/ಸಂಸ್ಥೆಯವರು ತಮ್ಮ ದರ ನಮೂದಿಸಿದ ಟೆಂಡರ್‌ನ್ನು ಆನ್‌ಲೈನ್‌ನಲ್ಲಿ ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿ ಮತ್ತು ನಿಬಂಧನೆಗಳಿಗಾಗಿ https://eproc.karnataka.gov.in ಟೆಂಡರ್‌ನ್ನು ಪೋರ್ಟಲ್‌ನಲ್ಲಿ ಸಂಪರ್ಕಿಸಬಹುದು.

**ಸಹಿ/– ಪೌರಾಯುಕ್ತರು ನಗರಸಭೆ ಕೊಳ್ಳೇಗಾಲ**

**ಸಂ:ವಾಸಾಸಂಇ:ಚಾನಗರ:525:2025–26**

# ನಾಳೆ ಅಯ್ಯಪ್ಪ ಮಾಲಾಧಾರಿಗಳ ಕೊಂಡೋತ್ಸವ

ಎಚ್.ಡಿ.ಕೋಟೆ ತಾಲ್ಲೂಕಿನ ಬೆಳಗನಹಳ್ಳಿ ಗ್ರಾಮದಲ್ಲಿ ಅಯ್ಯಪ್ಪ ಸ್ವಾಮಿ ಮಾಲಾಧಾರಿಗಳು ಮೊದಲ ಭಾರಿಗೆ ಕೊಂಡೋತ್ಸವಕ್ಕೆ ತಯಾರಿ ನಡೆಸಿದ್ದಾರೆ.

ಕಳೆದ ಹಲವು ವರ್ಷಗಳಿಂದ ಗ್ರಾಮದಲ್ಲಿ ಅಯ್ಯಪ್ಪಸ್ವಾಮಿ ಭಕ್ತರು ವ್ರತಾಚರಣೆಯ ಮೂಲಕ ಶಬರಿ ಮಲೆಗೆ ತೆರಳುತ್ತಿದ್ದು, ಕಳೆದ ಭಾರಿ ಕಾದ ಎಣ್ಣೆಯಲ್ಲಿ ಬೇಯುತ್ತಿರುವ ಕಜ್ಜಾಯವನ್ನು ಎತ್ತುವ ಮೂಲಕ ಭಕ್ತಿ ಭಾವ ಮೆರೆದಿದ್ದರು. ಅದೇ ರೀತಿ ಇದೇ ಶನಿವಾರ ರಾತ್ರಿ ಕಜ್ಜಾಯ ಎತ್ತಲಿದ್ದು, ಆ ಬಳಿಕ ಕೊಂಡೋತ್ಸವ ನಡೆಯಲಿದೆ. ಶನಿವಾರ ಬೆಳಿಗ್ಗೆಯಿಂದಲೇ ಅನ್ನದಾನ ನಡೆಯ ಲಿದೆ. ಸ.4 ಗಂಟೆಗೆ ಸ್ವಾಮಿ ಭಕ್ತರು ಗ್ರಾಮದ ಸಮೀಪದಲ್ಲಿ ಹರಿಯುವ ಹೆಬ್ಬಳ್ಳ ನಾಲೆಯಲ್ಲಿ ಸ್ನಾನ ಮಾಡಿ ಅಯ್ಯಪ್ಪ ಸ್ವಾಮಿಯ ವಿಗ್ರಹವನ್ನು ಬೆಳ್ಳಿ ರಥದಲ್ಲಿರಿಸಿ, ಕೇರಳದ ಚಂಡೆ, ನಗಾರಿ, ಮಂಗಳ ವಾದ್ಯದ ಮೂಲಕ ಗ್ರಾಮದಲ್ಲಿನ ಎಲ್ಲ ಬೀದಿಗಳಲ್ಲೂ ಮೆರವಣಿಗೆ ಮಾಡಲಿದ್ದಾರೆ. ನಂತರ ಮಾಲಾಧಾರಿಗಳೇ ತೆಂಗು ಮತ್ತು ಬಾಳೆ ಕಂದಿನಿಂದ ನಿರ್ಮಿಸಿರುವ ಅಯ್ಯಪ್ಪ



ಸ್ವಾಮಿಯ ಸನ್ನಿದಾನಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಲಿದ್ದಾರೆ. ಆ ಬಳಿಕ ಮಹಾ ಮಂಗಳಾರತಿ ನಡೆಯಲಿದೆ. ಮೆರವಣಿಗೆಯಲ್ಲಿ ಗ್ರಾಮದ ಬಾಲಕಿಯರು ಕಳಸಗಳನ್ನು ಹೊತ್ತು ಸಾಗಲಿದ್ದಾರೆ. ಮಹಾಮಂಗಳಾ ರತಿ ಬಳಿಕ ಕಾದ ಎಣ್ಣೆಯಲ್ಲಿ ಬೇಯುತ್ತಿರುವ ಕಜ್ಜಾಯವನ್ನು ಭಕ್ತರು ಬರಿಗೈಯಲ್ಲಿ ಎತ್ತಲಿದ್ದಾರೆ. ಕೊಂಡೋತ್ಸವ ಭಾನುವಾರ ಮುಂಜಾನೆ 5 ಗಂಟೆಗೆ ನಡೆಯಲಿದ್ದು, ಸುಮಾರು 45 ಕ್ಕೂ ಹೆಚ್ಚು ಮಾಲಾಧಾರಿಗಳು ಕೊಂಡ ಹಾಯಲಿದ್ದಾರೆ.

## ಕೊಂಡಕ್ಕೆ ಕಗ್ಗಲಿ ಸೌದೆಯೇ ಭೂಷಣ

ಇದೇ ಮೊದಲ ಭಾರಿಗೆ ನಡೆಯಲಿರುವ ಕೊಂಡೋತ್ಸವಕ್ಕೆ ಮಾಲಾಧಾರಿಗಳು ಒಂದು ವಾರಕ್ಕೂ ಮೊದಲೇ ಕೊಂಡಕ್ಕೆ ಸಿದ್ಧತೆಯನ್ನು ನಡೆಸಿದ್ದಾರೆ. ಕೊಂಡಕ್ಕೆ ಎರಡು ಟ್ರಾಕ್ಟರ್ ಕಗ್ಗಲಿ ಸೌಧೆಯನ್ನು ಸಂಗ್ರಹಿಸಲಾಗಿದೆ. ಶನಿವಾರ ರಾತ್ರಿ ಕೊಂಡದ ಸೌಧೆಗೆ ಮಹಾಮಂಗಳಾರತಿ ಮೂಲಕ ಅಗ್ನಿ ಸ್ವರ್ಶಿಸಲಾಗುವುದು. ಭಾನುವಾರ ಬೆಳಿಗ್ಗೆ ಕೊಂಡೋತ್ಸವ ನಡೆಯಲಿದೆ. ಬೀಚನಹಳ್ಳಿ ಮುಳುಗಡೆಯಾದ ಹಿನ್ನಲೆ 70 ವರ್ಷಗಳ ಹಿಂದೆ ಬೆಳಗನಹಳ್ಳಿ ಗ್ರಾಮವನ್ನು ಪುನರ್ವಸತಿ ಗ್ರಾಮವಾಗಿ ಸ್ಥಾಪನೆಯಾಯಿತು. 70 ವರ್ಷದ ಇತಿಹಾಸದಲ್ಲಿ ಇದೇ ಮೊದಲ ಭಾರಿಗೆ ಕೊಂಡೋತ್ಸವ ನಡೆಸುತ್ತಿರುವುದರಿಂದ ಗ್ರಾಮದಲ್ಲಿ ಹಬ್ಬಕ್ಕೆ ಕಳೆ ಬಂದಿದೆ ಎಂದು ಗ್ರಾಮದ ಮಾಲಾಧಾರಿ ರಾಘು ತಿಳಿಸಿದರು. ಗ್ರಾಮದಲ್ಲಿ ನಡೆಯಲಿರುವ ಕೊಂಡೋತ್ಸವ ಮತ್ತು ಕಜ್ಜಾಯೋತ್ಸವಕ್ಕೆ ಗ್ರಾಮ ಹಾಗೂ ದೇವಾಲಯವನ್ನು ವಿದ್ಯುತ್ ದೀಪಗಳಿಂದ, ತಳಿರು ತೋರಣಗಳಿಂದ ಅಲಂಕರಿಸಲಾಗಿದೆ.

# ಚಾಮರಾಜನಗರದ ವಿವಿಧ, ಹಾಸ್ಟೆಲ್‌ಗಳಿಗೆ ಉಪಲೋಕಾಯುಕ್ತರ ಭೇಟಿ, ಪರಿಶೀಲನೆ

## ಕೆಲ ಹಾಸ್ಟೆಲ್ ಸೌಲಭ್ಯದ ಅವ್ಯವಸ್ಥೆ ಬಗ್ಗೆ ಅಧಿಕಾರಿಗಳಿಗೆ ತರಾಟೆ

ಚಾಮರಾಜನಗರ, ರಾಜ್ಯ ಉಪ ಲೋಕಾಯುಕ್ತರಾದ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ ಅವರು ಇಂದು ನಗರದ ವಿವಿಧ ಹಾಸ್ಟೆಲ್‌ಗಳಿಗೆ ಭೇಟಿ ನೀಡಿ ಸೌಲಭ್ಯಗಳನ್ನು ಪರಿಶೀಲನೆ ನಡೆಸಿದರು.

ನಗರದ ಕರ್ನಾಟಕ ಕಸ್ತೂರ ಬಾ ಗಾಂಧಿ ಬಾಲಕಿಯರ ವಸತಿ ನಿಲಯಕ್ಕೆ ಭೇಟಿ ನೀಡಿ ಅಲ್ಲಿನ ಅವ್ಯವಸ್ಥೆಗಳನ್ನು ಕಂಡು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ವಸತಿ ನಿಲಯದಲ್ಲಿ ಮಂಚ ಇಲ್ಲದಿರುವುದು, ನೆಲದ ಮೇಲಿನ ಹಾಸಿಗೆ ಮೇಲೆ ಹೊದಿಕೆ ಇಲ್ಲದಿರುವುದನ್ನು ಕಂಡು ಆಕ್ರೋಶ ವ್ಯಕ್ತಪಡಿಸಿದರು. ಸ್ನಾನದ ಗೃಹ, ಶೌಚಾಲಯಗಳನ್ನು ವೀಕ್ಷಿಸಿ ಅಲ್ಲಿ ನೀರು ಹರಿಯದೆ ನಿಂತಿದ್ದನ್ನು ಕಂಡು ಖಾರವಾಗಿ ಪ್ರಶ್ನಿಸಿದರು. ಇನ್ನಿತರ ಸೌಲಭ್ಯಗಳನ್ನು ಕಲ್ಪಿಸದೆ ಇರುವ ಬಗ್ಗೆ ಅಧಿಕಾರಿಗಳನ್ನು ತೀವ್ರ ತರಾಟೆಗೆ ತೆಗೆದುಕೊಂಡರು.

ಇದೇ ವೇಳೆ ಹಾಸ್ಟೆಲ್ ವ್ಯಾಪ್ತಿಯ ನಿರ್ವಹಣೆಯ ಸಮಗ್ರ ಶಿಕ್ಷಣ ಕರ್ನಾಟಕದ ರಾಜ್ಯ ಯೋಜನಾ ನಿರ್ದೇಶಕರಾದ ವಿದ್ಯಾಕುಮಾರಿಯವರೊಂದಿಗೆ ದೂರ ವಾಣಿ ಮೂಲಕ ಮಾತನಾಡಿದ ಉಪಲೋಕಾಯುಕ್ತರು ಸ್ಥಳೀಯ ಹಾಸ್ಟೆಲ್ ಗಳಿಗೆ ಸಮರ್ಪಕವಾಗಿ ಸೌಲಭ್ಯಗಳನ್ನು ಇನ್ನು 2 ತಿಂಗಳೊಳಗೆ ಕಲ್ಪಿಸುವಂತೆ ತಿಳಿಸಿದರು. ಬಳಿಕ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ ಉಪಲೋಕಾಯುಕ್ತರು ಊಟ, ವಸತಿ, ಹೊದಿಕೆಗಳು, ಪುಸ್ತಕಗಳು ಹೇಗೆ ನೀಡಲಾಗುತ್ತಿದೆ ಎಂಬುದನ್ನು ಕೇಳಿ ವಿವರ ಪಡೆದರು. ಸ್ಥಳದಲ್ಲಿಯೇ ಇದ್ದ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಚಂದ್ರಕಾಂತ ಪಾಟೀಲ್, ಕ್ಷೇತ್ರ ಶಿಕ್ಷಣಾಧಿಕಾರಿ



ಹನುಮಂತಶೆಟ್ಟಿ, ವಸತಿ ನಿಲಯದ ನಿರ್ವಹಣೆ ಹೊತ್ತಿರುವ ಮುಖ್ಯ ಶಿಕ್ಷಕರಾದ ಮಹದೇವಸ್ವಾಮಿ ಅವರನ್ನು ಸರಿಯಾಗಿ ವ್ಯವಸ್ಥೆ ಕಲ್ಪಿಸದೇ ಇರುವ ಬಗ್ಗೆ ತರಾಟೆಗೆ ತೆಗೆದುಕೊಂಡರು. ವಸತಿ ನಿಲಯಕ್ಕೆ ಮೂಲಸೌಲಭ್ಯಗಳನ್ನು ಸರಿಯಾಗಿ ಕಲ್ಪಿಸದೇ ಇರುವ ಬಗ್ಗೆ ಸ್ವಯಂ ಪ್ರೇರಿತ ದೂರನ್ನು ದಾಖಲಿಸಿಕೊಳ್ಳುವಂತೆ ಸೂಚಿಸಿದರು.

ವಸತಿ ನಿಲಯಕ್ಕೆ ಅಗತ್ಯವಿರುವ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ಶೀಘ್ರವೇ ಮುಂದಾಗಬೇಕು. ಮೆನು ಪ್ರಕಾರ ಊಟ ತಿಂಡಿ ಉಪಹಾರ ನೀಡಬೇಕು. ಮಕ್ಕಳ ಭವಿಷ್ಯವನ್ನು ಹಗುರವಾಗಿ ತೆಗೆದುಕೊಳ್ಳಬಾರದು. ನಿರ್ಲಕ್ಷ್ಯ ಮುಂದುವರೆಸಿದರೆ ಗಂಭೀರ ಕ್ರಮ ವಹಿಸಲಾಗುತ್ತದೆ ಎಂದು ಸ್ಥಳದಲ್ಲೇ ಇದ್ದ ಶಿಕ್ಷಣಾಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಇದಕ್ಕೂ ಮೊದಲು ನಗರದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಸೇರಿದ ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ ಭೇಟಿ ಕೊಟ್ಟು ಅಲ್ಲಿನ ಸೌಕರ್ಯಗಳನ್ನು ಪರಿಶೀಲನೆ ನಡೆಸಿದರು. ವಿದ್ಯಾರ್ಥಿನಿಯರ ಕೊಠಡಿಗಳು, ಊಟದ ಹಾಲ್, ಶೌಚಾಲಯ, ಇನ್ನಿತರ ಸೌಲಭ್ಯಗಳನ್ನು ವೀಕ್ಷಿಸಿದರು.

ವಿದ್ಯಾರ್ಥಿನಿಯರೊಂದಿಗೆ ಮಾತನಾಡಿ ಕಲ್ಪಿಸಲಾಗುತ್ತಿರುವ ಸೌಲಭ್ಯಗಳ ಬಗ್ಗೆ ಮಾಹಿತಿ ಪಡೆದುಕೊಂಡರು. ಇದೇ ವೇಳೆ ಪ್ರತಿ ಕೊಠಡಿಯಲ್ಲೂ ಪುಸ್ತಕ, ಇನ್ನಿತರ ಸಾಮಗ್ರಿಗಳನ್ನು ಇಟ್ಟುಕೊಳ್ಳಲು ಪ್ರತ್ಯೇಕ ಕಪಾಟುಗಳನ್ನು ನಿರ್ಮಿಸಬೇಕು, ಉದ್ದನೆಯ ಕನ್ನಡಿಗಳನ್ನೂ ಸಹ ಅಳವಡಿಸಬೇಕು ಎಂದು ಇಲಾಖಾ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಮಕ್ಕಳೊಂದಿಗೆ ಸಂವಾದ ನಡೆಸಿದ ಉಪ ಲೋಕಾಯುಕ್ತರು ಏನೇನು ಸೌಲಭ್ಯಗಳು ನಿಮಗೆ ಕೊರತೆಯಾಗಿದೆ ಎಂಬುದನ್ನ ಕೇಳಿ ತಿಳಿದುಕೊಂಡರು. ವಿದ್ಯಾರ್ಥಿಗಳ ಅಹವಾಲುಗಳನ್ನು ಆಲಿಸಿದ ವೇಳೆ ಸ್ನಾನದ ಬಿಸಿ ನೀರಿಗಾಗಿ ಈಗಿರುವ ಗೀಜರ್,ಸೋಲಾರ್ ಜೊತೆಗೆ ಹೆಚ್ಚುವರಿಯಾಗಿ ಇನ್ಸಟೆಂಟ್ ಗೀಜರ್ ಗಳನ್ನು ಸಹ ಅಳವಡಿಸಬೇಕು. ಪ್ರತಿ ಮಹಡಿಗು ನೀರಿನ ಕ್ಯಾನ್ ಗಳನ್ನು ಇಡಬೇಕು. ಊಟ ಉಪಹಾರ ಸಮರ್ಪಕವಾಗಿ ಸಿದ್ದಪಡಿಸಲು ನುರಿತ ಅಡುಗೆ ತಯಾರಕರಿಂದ ಹಾಸ್ಟೆಲ್ ಅಡುಗೆ ಮಾಡುವ ಸಿಬ್ಬಂದಿಗೆ ತರಬೇತಿ ಕೊಡಿಸಬೇಕು ಎಂದು ಉಪಲೋಕಾಯುಕ್ತರಾದ ಕೆ.ಎನ್.ಪಣೀಂದ್ರ ಅವರು ಸೂಚಿಸಿದರು. ಗ್ರಂಥಾಲಯ, ಕಂಪ್ಯೂಟರ್ ಗಳ ವ್ಯವಸ್ಥೆ ಮಾಡುವಂತೆಯು ತಿಳಿಸಿದರು.

ಸಿವಿಲ್ ನ್ಯಾಯಾಧೀಶರು ಮತ್ತು ಉಪಲೋಕಾಯುಕ್ತರ ಆಪ್ತ ಕಾರ್ಯದರ್ಶಿಗಳಾದ ಕಿರಣ್ ಪಿ.ಎಂ.ಪಾಟೀಲ್, ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಈಶ್ವರ,ಲೋಕಾಯುಕ್ತ ಎಸ್.ಪಿ.ಯವರಾದ ಉದೇಶ, ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ, ಲೋಕಾಯುಕ್ತ ಡಿವೈಎಸ್ ಪಿ ಗಜೇಂದ್ರ ಪ್ರಸಾದ್,ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ ಇತರರು ಇದೇ ಸಂದರ್ಭದಲ್ಲಿ ಹಾಜರಿದ್ದರು.

## ಸಂವಿಧಾನ ದಿನಾಚರಣೆ



ಕೆ.ಆರ್.ಪೇಟೆ: ಪಟ್ಟಣದ ನಾಲ್ವಡಿ ಕೃಷ್ಣರಾಜ ಒಡೆಯರ್ ತಾಲ್ಲೂಕು ಕ್ರೀಡಾಂಗಣದಲ್ಲಿ ತಾಲ್ಲೂಕು ಆಡಳಿತ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಭಾರತ ಸಂವಿಧಾನ ದಿನಾಚರಣೆಯನ್ನು ಹಮ್ಮಿಕೊಂಡು ಯಶಸ್ವಿಯಾಗಿ ನಡೆಸಲಾಯಿತು.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಿ.ನಾಗೇಂದ್ರಕುಮಾರ್ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಹಾಗೂ ಸಂವಿಧಾನ ಪ್ರಸ್ತಾವನೆ ಪೀಠಿಕೆ ಫಲಕಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಸಂವಿಧಾನ ದಿನಾಚರಣೆಗೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಬಿ.ನಾಗೇಂದ್ರಕುಮಾರ್ ಅವರು ಭಾರತ ಸಂವಿಧಾನವನ್ನು ಡಾ.ಬಿ.ಆರ್.ಅಂಬೇಡ್ಕರ್ ಅವರು ಆಳವಾದ ಅಧ್ಯಯನ ನಡೆಸಿ ಬರೆದುಕೊಡದೇ ಇದ್ದಿದ್ದರೆ ಭಾರತದ ಪ್ರಜೆಗಳಾದ ನಮಗೆ ನೆಮ್ಮದಿಯ ಜೀವನ ನಡೆಸಲು ಸಾಧ್ಯವಾಗುತ್ತಿರಲಿಲ್ಲ. ಅಂಬೇಡ್ಕರ್ ಅವರು ಇಡೀ ಪ್ರಪಂಚದಲ್ಲೇ ಅತಿ ಹೆಚ್ಚು ಡಿಗ್ರಿಗಳನ್ನು ಓದಿದ ಮಹಾನ್ ಮಾನವತಾವಾದಿಯಾಗಿದ್ದಾರೆ. ಇದರಿಂದಾಗಿ ಗಟ್ಟಿತನದಿಂದ ಕೂಡಿದ, ಸರ್ವ ಜನಾಂಗಕ್ಕೂ ಸಮಪಾಲು, ಸಮಬಾಳು ನೀಡುವಂತಹ ಅತ್ಯುತ್ತಮ ಸಂವಿಧಾನ ರಚಿಸಲು ಅಂಬೇಡ್ಕರ್ ಅವರಿಗೆ ಸಾಧ್ಯವಾಯಿತು. ಪ್ರಾಯಷಃ ಅಂಬೇಡ್ಕರ್ ಅವರು ನಮ್ಮ ದೇಶದಲ್ಲಿ ಜನಿಸದೇ ಇದ್ದರೆ ಇಂತಹ ಸರ್ವಶ್ರೇಷ್ಠ ಸಂವಿಧಾನವನ್ನು ಭಾರತದ ಪ್ರಜೆಗಳಾದ ನಾವು ಪಡೆದುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಬ್ರಿಟೀಷರು ಬಿಟ್ಟು ಹೋದ ಬರಿದಾದ ಭಾರತವನ್ನು ಅಭಿವೃದ್ಧಿಯ ಪಥದಲ್ಲಿ ತೆಗೆದುಕೊಂಡು ಅಗತ್ಯವಿರುವ ಕಾನೂನುಗಳು, ಕರ್ತವ್ಯಗಳು, ಹಕ್ಕುಗಳನ್ನು ಸಂವಿಧಾನದಲ್ಲಿ ಅಳವಡಿಸಲಾಗಿದೆ. ದೇಶದ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಹಾಗೂ ಪತ್ರಿಕಾರಂಗ ಹೇಗೆ ಕರ್ತವ್ಯ ನಿರ್ವಹಿಸಬೇಕು ಎಂಬುದರ ಬಗ್ಗೆ ಸಮಗ್ರವಾಗಿ ವಿವರಿಸಿದ್ದಾರೆ. ಸುಮಾರು 70ವರ್ಷ ಕಳೆದರೂ ಭಾರತ ಸಂವಿಧಾನದ ಅಡಿಯಲ್ಲಿ 140ಜನಸಂಖ್ಯೆ ಇರುವ ಭಾರತದ ಪ್ರಜೆಗಳಾದ ನಾವೆಲ್ಲರೂ ಜೀವನ ನಡೆಸುತ್ತಿದ್ದೇನೆ. ದೇಶದಲ್ಲಿ ವಾಸಿಸುವ ಎಲ್ಲರಿಗೂ ಒಂದೇ ತೆರನಾದ ಮತದಾನ ಹಕ್ಕು ನೀಡಿದ್ದಾರೆ. ನಿರ್ಗತಿಕ ಬಡವನಿಗೂ ಒಂದೇ ಓಟು, ಅಗರ್ಭ ಶ್ರೀಮಂತನಿಗೂ ಒಂದೇ ಓಟಿನ ಹಕ್ಕನ್ನು ಅಂಬೇಡ್ಕರ್ ನೀಡಿದ್ದಾರೆ. ಹಿಂದೆ ರಾಜ ಮಹಾರಾಜರ ಕಾಲದ ಆಡಳಿತದಲ್ಲಿ ಜಮೀನ್ದಾರರು, ಶ್ರೀಮಂತರು, ಹೆಚ್ಚು ಓದಿದವರಿಗೆ ಮಾತ್ರ ಮತದಾನದ ಹಕ್ಕು ಇತ್ತು. ಆದರೆ ಭಾರತವು ಸ್ವಾತಂತ್ರ್ಯ ಪಡೆದ ನಂತರ ಡಾ.ಬಿ.ಆರ್.ಅಂಬೇಡ್ಕರ್ ಅವರ ಪರಿಶ್ರಮದಿಂದ ದಲಿತರು, ಹಿಂದುಳಿದವರು, ಶ್ರೀಮಂತರು, ಉದ್ಯಮಿಗಳು ಸೇರಿದಂತೆ ಎಲ್ಲರಿಗೂ ಒಂದೇ ಬಗೆಯ ಕಾನೂನು ಜಾರಿಗೆ ತಂದರು. ಚುನಾವಣೆಯಲ್ಲಿ ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವಾಗ ಗುಡಿಸಲಿನಲ್ಲಿ ವಾಸಿಸುವ ಕಡು ಬಸವನಿಗೂ , ಅರಮನೆಯಲ್ಲಿ ವಾಸಿಸುವ ಕೋಟ್ಯಾಧಿಪತಿಗೂ ಒಂದೇ ಮತ ಎನ್ನುವ ಅಮೂಲ್ಯವಾದ ಹಕ್ಕು ಕೊಟ್ಟರು. ಇಂತಹ ಅಮೂಲ್ಯ ಹಕ್ಕು ಇಂದು ಕಲುಷಿತ ರಾಜಕಾರಣದಿಂದಾಗಿ ಮಾರಾಟದ ವಸ್ತುವಾಗಿ ತನ್ನ ಮೌಲ್ಯ ಕಳೆದುಕೊಳ್ಳುತ್ತಿದೆ ಹಾಗಾಗಿ ದೇಶದ ಜನತೆ ಇನ್ನುಮುಂದಾದರೂ ಅಂಬೇಡ್ಕರ್ ಅವರು ನೀಡಿದ ಪವಿತ್ರವಾದ ಮತವನ್ನು ಯಾವುದೇ ಆಮಿಷಗಳಿಗೆ ಒಳಗಾಗಿ ಮಾರಾಟ ಮಾಡಿಕೊಳ್ಳಬಾರದು. ಯೋಗ್ಯ ಅಭ್ಯರ್ಥಿಗೆ ತಮ್ಮ ಮತವನ್ನು ದಾನ ಮಾಡುವಂತೆ ಬಿ.ನಾಗೇಂದ್ರಕುಮಾರ್ ಸಲಹೆ ನೀಡಿದರು. ಇಂತಹ ಶ್ರೇಷ್ಠ ಸಂವಿಧಾನ ನೀಡಿದ ಅಂಬೇಡ್ಕರ್ ಅವರನ್ನು ಯಾವುದೇ ಒಂದು ಜಾತಿ ಧರ್ಮಕ್ಕೆ ಸೀಮಿತಗೊಳಿಸಬಾರದು. ದೇಶದ ಪ್ರತಿಯೊಬ್ಬರೂ ಅಂಬೇಡ್ಕರ್ ಅವರನ್ನು ಸದಾ ಗೌರವಿಸಬೇಕು. ಸಂವಿಧಾನಕ್ಕೆ ಗೌರವ ಕೊಡಬೇಕು ಈ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಬಿ.ನಾಗೇಂದ್ರಕುಮಾರ್ ಮನವಿ ಮಾಡಿದರು.

ತಹಸೀಲ್ದಾರ್ ಡಾ.ಎಸ್.ಯು. ಅಶೋಕ್ ಸಂವಿಧಾನ ಜಾಥಾಕ್ಕೆ ಶತಮಾನದ ಶಾಲಾ ಆವರಣದಲ್ಲಿ ಚಾಲನೆ ನೀಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ವೈ.ಕೆ.ತಿಮ್ಮೇಗೌಡ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಉಪನ್ಯಾಸಕ ವೆಂಕಟರಾಮು ಸಂವಿಧಾನ ದಿನಾಚರಣೆ ಕುರಿತು ಭಾಷಣ ಮಾಡಿದರು.

ಕಾರ್ಯಕ್ರಮದಲ್ಲಿ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಕೆ.ಸುಷ್ಮ, ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ ಕೆ.ದಿವಾಕರ್, ಪುರಸಭಾ ಸದಸ್ಯ ಡಿ.ಪ್ರೇಮಕುಮಾರ್, ಜಿಲ್ಲಾ ಪಂಚಾಯತ್ ಮಾಜಿ

# ಪತ್ರಕರ್ತರು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಿ

ಚಾಮರಾಜನಗರ.ಪತ್ರಕರ್ತರು ಪ್ರಾಮಾಣಿಕತೆ, ನಿಷ್ಠೆಯಿಂದ ಕರ್ತವ್ಯ ನಿರ್ವಹಿ ಸಬೇಕು ಎಂದು ಶಾಸಕ ಸಿ.ಪುಟ್ಟ ರಂಗಶೆಟ್ಟಿ ಸಲಹೆ ನೀಡಿದರು.

ನಗರದ ವರ್ತಕರ ಭವನದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಚಾಮ ರಾಜ ನಗರ ಜಿಲ್ಲಾ ಘಟಕದ ನೂತನ ಪದಾಧಿಕಾರಿಗಳ ಪದ ಗ್ರಹಣ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಪತ್ರಿಕಾರಂಗವು ಸಂವಿಧಾನದ 4ನೇ ಅಂಗವಾಗಿದೆ. ಪತ್ರಿಕಾ ರಂಗವು ಕಣ್ಣಿಗೆ ಕಾಣದ ಅಸ್ತ್ರವಾಗಿದ್ದು ಒಳ್ಳೆಯದು ಹಾಗೂ ಕೆಟ್ಟದ್ದನ್ನು ನೇರವಾಗಿ ಗುರ್ತಿ ಸುವ ಅಂಗವಾಗಿದೆ. ಟಿವಿ ಮಾಧ್ಯಮಗಳಲ್ಲಿ ತಪ್ಪು ಸುದ್ದಿಗಳು ಬಂದರೂ ಪತ್ರಿಕೆಗಳಲ್ಲಿ ನೇರವಾ ಗಿ ಬರುತ್ತದೆ ಎಂದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಕೆರೆಗೋಡು ಸೋಮಶೇಖರ್ ಮಾತನಾಡಿ, ಪತ್ರಕರ್ತರ ಸಂಘದ ನೂತನ ಪದಾಧಿಕಾರಿಗಳು ಪತ್ರಿಕೋ ದ್ಯಮದ ಘನತೆ ಹೆಚ್ಚಿಸಬೇಕು. ಅಲ್ಲದೇ ಸಂಘದ ಏಳಿಗೆಗೆ ಶ್ರಮಿಸ ಬೇಕು. ಗ್ರಾಮೀಣ ಪತ್ರಕರ್ತರಿಗೆ ಬಸ್ ಪಾಸ್ ನೀಡುವಂತೆ ದಶಕಗಳ ಹೋರಾಟದ ಫಲವಾಗಿ ಸಿಎಂ ಸಿದ್ದರಾಮಯ್ಯ ಅವರು ಬಸ್ ಪಾಸ್ ಘೋಷಣೆ



ಮಾಡಿದ್ದಾರೆ. ಬಸ್ ಪಾಸ್ ಎಲ್ಲರಿಗೂ ಸಿಗುವಂತೆ ಮಾಡಲು ಕೆಲ ಸಡಿಲಿಕೆ ಮಾಡಬೇಕಿದೆ. ಉಳಿದಂತೆ ನಿವೃತ್ತ ಪತ್ರಕರ್ತರಿಗೆ ಮಾಸಾಶನ ಕೊಡುವ ನಿಟ್ಟಿನಲ್ಲಿ ಕಠಿಣ ಪರಿಸ್ಥಿತಿ ಗಳಿದ್ದು ಅದನ್ನು ಸಡಿಲಿಕೆ ಮಾಡಿ ಅನುಕೂಲ ಕಲ್ಪಿಸಿಕೊಡಬೇಕಿದೆ ಎಂದರು.

ವಿಧಾನಪರಿಷತ್ ಸದಸ್ಯ ಶಿವಕುಮಾರ್ ಮಾತನಾಡಿ, ಪತ್ರಕರ್ತರು ಒಗ್ಗಟ್ಟಿನಿಂದ ಇರಬೇಕು. ಪ್ರಾಮಾಣಿಕತೆ ಇದ್ದರೆ ಗೌರವ ಸಿಗುತ್ತದೆ. ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿಗೆ ವೈಯಕ್ತಿಕವಾಗಿ 25 ಸಾವಿರ ಕೊಡುವುದಾಗಿ ಘೋಷಿಸಿದರು. ಇದೇ ಸಂದರ್ಭದಲ್ಲಿ ಹಿರಿಯ ಪತ್ರಕರ್ತರಾದ ಅಂಶಿ ಪ್ರಸನ್ನಕುಮಾರ್ ಮಾತನಾಡಿದರು.

ಸಮಾರಂಭದಲ್ಲಿ ಶಾಸಕ ಎಚ್.ಎಂ.ಗಣೇಶ್ ಪ್ರಸಾದ್, ಟೆಲೆಕ್ಸ್ ರವಿಕುಮಾರ್, ಸಂಘದ ಜಿಲ್ಲಾಧ್ಯಕ್ಷ ಸಿದ್ದಲಿಂಗಸ್ವಾಮಿ, ಪ್ರಧಾನ ಕಾರ್ಯದರ್ಶಿ ಲಕ್ಕೂರು ಪ್ರಸಾದ್, ಸಂಘದ ನಿಕಟಪೂರ್ವ ಅಧ್ಯಕ್ಷ ದೇವರಾಜ ಕಪ್ಪಸೋಗೆ, ಮಂಡ್ಯ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಡಿ.ಶಶಿಧರ್, ರಾಜ್ಯ ಸಮಿತಿ ಸದಸ್ಯ ಮಹೇಂದ್ರ, ಖಜಾಂಚಿ ಪುಟ್ಟರಾಜು ಹಾಜರಿದ್ದರು.

# ದೇವಸ್ಥಾನಗಳಲ್ಲಿ ಕಳ್ಳತನ, ಹಾರೋಹಳ್ಳಿ ಪೊಲೀಸರಿಂದ ಮೂವರು ಆರೋಪಿಗಳು ವಶಕ್ಕೆ



ರಾಮನಗರ: ದೇವಸ್ಥಾನವೊಂದರ ಬೀಗ ಮುರಿದು ದೇವರ ಒಡವೆಗಳು ಹಾಗೂ ಹುಂಡಿಯ ಹಣವನ್ನು ಕಳ್ಳತನ ಮಾಡಿದ್ದ ಮೂವರು ಆರೋಪಿಗಳನ್ನು ಹಾರೋಹಳ್ಳಿ ಪೊಲೀಸರು ವಶಕ್ಕೆ ಪಡೆದಿದ್ದಾರೆ.

21.11.2025 ರಂದು ಹಾರೋಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಗಬ್ಬಾಡಿ ಗ್ರಾಮದಲ್ಲಿರುವ ದೇವಸ್ಥಾನವೊಂದರಲ್ಲಿ ಕಳ್ಳತನವಾಗಿತ್ತು. ಈ ಸಂಬಂಧ ಹಾರೋಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ಸದರಿ ಪ್ರಕರಣದಲ್ಲಿ ಪೊಲೀಸರು ಆರೋಪಿಗಳ ಪತ್ತೆಗಾಗಿ ಕ್ರಮವಹಿಸಿದ್ದರು. ವಿವಿದೆಡೆಯಿಂದ ಮಾಹಿತಿ ಕಲೆ ಹಾಕಿ ಮೂವರು ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಸದರಿ ಆರೋಪಿಗಳು ಹಾರೋಹಳ್ಳಿ, ಜಿಗಣಿ, ಆನೇಕಲ್ ಪೊಲೀಸ್ ಠಾಣಾ ವ್ಯಾಪ್ತಿಯ ದೇವಸ್ಥಾನಗಳಲ್ಲಿ ಕಳ್ಳತನ ಮಾಡಿರುವುದಾಗಿ ಗೊತ್ತಾಯಿತು. ವಶಕ್ಕೆ ಪಡೆದ ಆರೋಪಿಗಳಿಂದ ಸುಮಾರು 5,00,000/– ರೂ ಮೌಲ್ಯದ, 33 ಗ್ರಾಂ ಚಿನ್ನದ ಒಡವೆಗಳು, 30,000/– ರೂ ನಗದು ಹಣ ಹಾಗೂ ಕೃತ್ಯಕ್ಕೆ ಬಳಸಿದ್ದ ಒಂದು ದ್ವಿಚಕ್ರ ವಾಹನವನ್ನು ಅಮಾನತ್ತು ಪಡಿಸಿಕೊಂಡಿದ್ದಾರೆ. ಒಟ್ಟು 4 ಪ್ರಕರಣಗಳನ್ನು ಪತ್ತೆ ಮಾಡುವಲ್ಲಿ ಹಾರೋಹಳ್ಳಿ ಪೊಲೀಸ್ ಠಾಣೆಯ ಅಧಿಕಾರಿ ಮತ್ತು ಸಿಬ್ಬಂದಿಗಳು ಯಶಸ್ವಿಯಾಗಿದ್ದಾರೆ ಎಂದು ಪೊಲೀಸ್ ಇಲಾಖೆಯ ಪ್ರಕಟಣೆ ತಿಳಿಸಿದೆ.

# ಡಿ.16ಕ್ಕೆ ಪತ್ರಕರ್ತರಿಗೆ ಕಾರ್ಯಾಗಾರ

ಮೈಸೂರು: ನಗರದ ಬನ್ನೂರು ರಸ್ತೆ ಸಿದ್ಧಾರ್ಥ ಬಡಾವಣೆಯಲ್ಲಿನ ತಮ್ಮ ಆಲ್ಫಾ ಲೀಡ್ ಅಕಾಡೆಮಿ ವತಿಯಿಂದ ಪತ್ರಕರ್ತರಿಗೆ ರಕ್ಷಣಾ ವಿಷಯ ಕುರಿತ ಪತ್ರಿಕಾ ವರದಿ ಮಾಡುವಿಕೆ ಕುರಿತಂತೆ ಡಿ. 16 ರಂದು ಬೆಳಗ್ಗೆ ಸಂಸ್ಥೆಯಲ್ಲಿ ಒಂದು ದಿನದ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥಾಪಕರಾದ ನಿವೃತ್ತ ಗ್ರೂಪ್ ಕ್ಯಾಪ್ಟನ್ ಅಭಿನವ್ ಚತುರ್ವೇದಿ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ರಕ್ಷಣಾ ವಲಯ ಕುರಿತ ಪತ್ರಿಕಾ ವರದಿ, ಲೇಖನಗಳನ್ನು ಬರೆಯುವ ವೇಳೆ ಕೆಲವೊಂದು ನಿಯಮ ಅರಿವಿರಬೇಕು. ಕೆಲವೊಂದು ಎಚ್ಚರಿಕೆ ವಹಿಸಬೇಕು. ಹೀಗಾಗಿ ಅಂತಹವು ಯಾವ್ಯಾವುವೆಂಬುದನ್ನು ವಿವರಿಸಲಾಗುವುದು. ಇದೇ ವೇಳೆ ಉತ್ತಮ ಲೇಖನಗಳಿಗೆ ಬಹುಮಾನ ಸಹಾ ನೀಡಲಾಗುವುದು. ಕಾರ್ಯಾಗಾರದಲ್ಲಿ ಪ್ರತಿಯೊಂದೂ ಪತ್ರಿಕೆಯ ಇಬ್ಬರು ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗೆ ದೂ. 90193 53966 ನ್ನು ಸಂಪರ್ಕಿಸಬಹುದೆಂದರು. ನಿಶಾ, ಪ್ರಾರ್ಥನಾ ಎಂ.ಎಸ್. ಗೌಡ, ಮಣಿಕಂಠ ಇದ್ದರು.



**ನ್ಯಾಯಾಧೀಶ ಶ್ರೀಕಾಂತ್ ಹೇಳಿಕೆ । ಸಂವಿಧಾನ ಮತ್ತು ವಿಕಸಿತ ಭಾರತ ದಿನಾಚರಣೆ**

# ಸಂವಿಧಾನವು ಅಂಬೇಡ್ಕರ್ ಕೊಟ್ಟ ಸಮಾನತೆಯ ಅಸ್ತ್ರ

ಚಾಮರಾಜನಗರ, ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನ ರಚಿಸುವ ಮೂಲಕ ಸ್ವಾತಂತ್ರ್ಯ, ಸಮಾನತೆ ದೊರಕಿಸಿಕೊಟ್ಟಿದ್ದಾರೆ. ಇದರಿಂದ ಇಡೀ ದೇಶದಲ್ಲಿ ಎಲ್ಲರಿಗೂ ಅನುಕೂಲವಾಗಿದೆ ಎಂದು ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಟಿ.ಸಿ. ಶ್ರೀಕಾಂತ್ ತಿಳಿಸಿದ್ದಾರೆ.

ವಾರ್ತಾ ಮತ್ತು ಪ್ರಸಾರ ಸಚಿವಾಲಯ, ಕೇಂದ್ರ ಸಂವಹನ ಇಲಾಖೆ, ಮೈಸೂರು, ಕೊಳ್ಳೇಗಾಲ ತಾಲೂಕು ಕಾನೂನು ಸೇವೆಗಳ ಸಮಿತಿ, ವಕೀಲರ ಸಂಘ, ಸಂತ ಫ್ರಾನ್ಸಿಸ್ ಅಸ್ಸಿಸಿ ಪದವಿ ಪೂರ್ವ ಕಾಲೇಜು, ಸಂತ ಫ್ರಾನ್ಸಿಸ್ ಅಸ್ಸಿಸಿ ಪ್ರೌಢಶಾಲೆ, ಕೊಳ್ಳೇಗಾಲ ಇವರುಗಳ ಸಂಯುಕ್ತ ಆಶ್ರಯದಲ್ಲಿ "ಸಂವಿಧಾನ ದಿನಾಚರಣೆ –2025? ಮತ್ತು "ವಿಕಸಿತ ಭಾರತ –2047" ಕಾರ್ಯಕ್ರಮ ನಡೆಯಿತು. ಉದ್ಘಾಟನೆ ನೆರವೇರಿಸಿ ಮಾತನಾಡಿದ ನ್ಯಾಯಾಧೀಶರಾದ ಶ್ರೀಕಾಂತ್ ಅವರು ಸಂವಿಧಾನ ಇಡೀ ದೇಶಕ್ಕೆ ಮಾತ್ರವಲ್ಲ, ಎಲ್ಲರಿಗೂ ಅತ್ಯಂತ ಉತ್ತಮ ಕೊಡುಗೆಯಾಗಿದೆ ಎಂದರು.



ಹಿರಿಯ ಸಿವಿಲ್ ನ್ಯಾಯಾಧೀಶರು, ತಾಲೂಕು ಕಾನೂನು ಸೇವಾ ಸಮಿತಿ ಅಧ್ಯಕ್ಷರೂ ಆದ ಸುನಿತಾ ಮಾತನಾಡಿ, ಸಂವಿಧಾನದ ಎಲ್ಲ ಆಶಯಗಳನ್ನು ಅರಿತುಕೊಳ್ಳಬೇಕು. ಮಕ್ಕಳು ಈ ಬಗ್ಗೆ ಹೆಚ್ಚು ತಿಳಿದುಕೊಳ್ಳಬೇಕು ಎಂದರು.

ಪ್ರಧಾನ ಸಿವಿಲ್ ನ್ಯಾಯಾಧೀಶರು, ತಾಲೂಕು ಕಾನೂನು ಸೇವಾ ಸಮಿತಿ ಕಾರ್ಯದರ್ಶಿ ಕಾವ್ಯಶ್ರೀ ನಶಾ ಮುಕ್ತ ಭಾರತ ಕುರಿತು ಪ್ರತಿಜ್ಞೆ ಬೋಧಿಸಿದರು. ನಶೆ ಎಂದರೆ ಕೇವಲ ಮದ್ಯಪಾನ, ತಂಬಾಕು ಸೇವನೆ ಅಲ್ಲ, ಅತಿಯಾದ ಮೊಬೈಲ್ ಬಳಕೆಯೂ ನಶೆಯಾಗಿದೆ. ಇದರಿಂದಲೂ ಮುಕ್ತರಾಗಬೇಕು ಎಂದು ಕರೆ ನೀಡಿದರು. ಪ್ರಾಸ್ತಾವಿಕ ಮಾತನಾಡಿದ ಕ್ಷೇತ್ರ ಪ್ರಚಾರಾಧಿಕಾರಿ ಶೃತಿ ಎಸ್.ಟಿ. ಕೇಂದ್ರ ಸರ್ಕಾರವು ಈ ದಿನದ ಮಹತ್ವದ ದಿನವನ್ನು ಅರಿಯಲು ಕೇಂದ್ರ ಸಂವಹನ ಇಲಾಖೆಯು ಕಾರ್ಯಕ್ರಮ ಆಯೋಜಿಸಿದೆ ಎಂದರು.

ಸಂಪನ್ಮೂಲ ವ್ಯಕ್ತಿಗಳಾದ ವಕೀಲರಾದ ಚಿನ್ನರಾಜು ದಿನಾಚರಣೆ ಬಗ್ಗೆ ಮಾಹಿತಿ ನೀಡಿದರು.

ರಾಷ್ಟ್ರಧ್ವಜದ ಮೇಲೆ ವಿಶೇಷ ರಂಗೋಲಿ ಸ್ಪರ್ಧೆ, ಸಂವಿಧಾನದ ಕುರಿತು ಪೇಂಟಿಂಗ್ ಸ್ಪರ್ಧೆ ಮತ್ತು ಪ್ರಬಂಧ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಈ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಅತಿಥಿಗಳು ಬಹುಮಾನ ವಿತರಿಸಿದರು. ಸಂಗೀತ ಮತ್ತು ನಾಟಕ ವಿಭಾಗದ ಕಲಾವಿದರು ಕಾರ್ಯಕ್ರಮ ನಡೆಸಿಕೊಟ್ಟರು ಕಾರ್ಯಕ್ರಮಕ್ಕೆ ಮುನ್ನ ಪ್ರಧಾನಮಂತ್ರಿಯವರ ಆಶಯದಂತೆ ನಡೆಯುತ್ತಿರುವ "ಏಕ್ ಪೇಡ್ ಮಾ ಕೇ ನಾಮ್" ಅಭಿಯಾನದಡಿ ಅತಿಥಿಗಳು ಮಾವಿನ ಸಸಿ ನೆಟ್ಟರು. ಸೇಂಟ್ ಅಸ್ಸಿಸಿ ವಿದ್ಯಾಸಂಸ್ಥೆಯ ಮುಖ್ಯಸ್ಥರಾದ ಎಂ ರಾಯಪ್ಪ ಫಾದರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪ್ರಾಂಶುಪಾಲರಾದ ಜೆ ನಂಜಯ್ಯ, ಮುಖ್ಯಪಾಧ್ಯಾಯರಾದ ಇಗ್ನಸಿ ಮುತ್ತು ಎಲ್ ಉಪಸ್ಥಿತರಿದ್ದರು. ಕ್ಷೇತ್ರ ಪ್ರಚಾರ ಸಹಾಯಕ ದರ್ಶನ್ ಪಿ ಎಲ್ಲರನ್ನು ಸ್ವಾಗತಿಸಿದರು, ಶಿಕ್ಷಕಿ ಶ್ರೀವಿದ್ಯಾ ಕಾರ್ಯಕ್ರಮ ನಿರೂಪಣೆ ಮಾಡಿದರು.ಕಾರ್ಯಕ್ರಮದ ಬಳಿಕ ವಿದ್ಯಾಸಂಸ್ಥೆಯಿಂದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದ ವರೆಗೆ ಜಾಥಾ ನಡೆಸಲಾಯ್ತು.

# ಡಿ.2ರಿಂದ ನಮ್ಮೂರ ಹನುಮೋತ್ಸವ ಕಾರ್ಯಕ್ರಮ



ಕೆ.ಆರ್.ನಗರ: ಪಟ್ಟಣದ ಶ್ರೀ ಆಂಜನೇಯ ಸ್ವಾಮಿ ದೇವ ಸ್ಥಾನದ ಬಡಾವಣೆಯ ಶ್ರೀ ಮಾರುತಿ ಯುವಕರ ಸಂಘ ದಿಂದ ಪ್ರತಿ ವರ್ಷದಂತೆ ಈ ವರ್ಷವೂ ನಮ್ಮೂರ ಹನುಮೋತ್ಸವ ಕಾರ್ಯಕ್ರಮದ ಅಂಗವಾಗಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಇದರಲ್ಲಿ ಭಕ್ತಾದಿಗಳು ಹಾಗೂ ನಾಗರಿಕರು ಪಾಲ್ಗೊಂಡು ಮಾರುತಿ ಕೃಪೆಗೆ ಪಾತ್ರರಾಗಬೇಕೆಂದು ಶ್ರೀ ಮಾರುತಿ ಯುವಕ ಸಂಘದ ಖಚಂಚಿ ಕೆಂಚಿ ಮಂಜುನಾಥ ಮನವಿ ಮಾಡಿದರು.

ಡಿ.2 ಮಂಗಳವಾರ ಬೆಳಿಗ್ಗೆ ಗಣಪತಿ ಪೂಜೆ, ಕಳಸಾರಾಧನೆ, ಅಭಿಷೇಕ, ರಾಮ ತಾರಕ, ಹೋಮ, ಉಸ್ತವ ಮೂರ್ತಿಗೆ ಸಾಮೂಹಿಕ ಅಭಿಕ್ಷೇಕ, ಸಿಂಧೂರ ಅಲಂಕಾರ, ಸಂಜೆ ಅಷ್ಟ ಅವಧಾನ ಸೇವೆ, ತುಳಸಿ ಅರ್ಚನೆ, ರಾತ್ರಿ ಮಹಾಮಂಗಳಾರತಿ ತೀರ್ಥ ಪ್ರಸಾದ ವಿನಿಯೋಗ. ಡಿ.3 ಉತ್ಸವ ಮೂರ್ತಿಗೆ ಸಾಮೂಹಿಕ ಮೊಸರು, ಮೂಲದೇವರಿಗೆ ಅರಿಶಿನ ಅಲಂಕಾರ. ರಾತ್ರಿ 7.30ಕ್ಕೆ ಕಥಾ ಕಲಾಕ್ಷೇಪ. ಡಿ.4 ಗುರುವಾರದಂದು ಬೆಳಗ್ಗೆ ಸತ್ಯನಾರಾಯಣ ಸ್ವಾಮಿ ಪೂಜೆ ಹಾಗೂ ಅನ್ನ ಸಂತರ್ಪಣೆ, ಸಂಜೆ ಸೀತಾರಾಮ ಕಲ್ಯಾಣೋತ್ಸವ

ಡಿ.5 ಉಸ್ತವಮೂರ್ತಿಗೆ ಜೇನುತುಪ್ಪದ ಅಭಿಷೇಕ ಮೂಲ ದೇವರಿಗೆ ಪಂಚರಂಗಿ ಅಲಂಕಾರ. ಸಂಜೆ ಸ್ವಾಮಿಯವರಿಗೆ ಕುಂಕುಮಾರ್ಚನೆ, ರಾತ್ರಿ ಪುಟ್ಟಸ್ವಾಮಿ ಮೆಲೋಡಿಸ್ ಆರ್ಕೆಸ್ಟ್ರ ಅವರಿಂದ ರಸಮಂಜರಿ ಕಾರ್ಯಕ್ರಮ. ಡಿ.6 ಬೆಳಿಗ್ಗೆ ಮೂಲ ದೇವರಿಗೆ ಹೂವಿನ ಅಲಂಕಾರ, ಸಂಜೆ ಹತ್ತು ಸಾವಿರದ ಒಂದು ದೀಪೋತ್ಸವ. ಡಿ.7 ಭಾನುವಾರ ಬೆಳಿಗ್ಗೆ ಎಳ್ಳೆಣ್ಣೆ ಅಭಿಷೇಕ, ಮೂಲ ದೇವರಿಗೆ ಗಂಧ ಅಲಂಕಾರ. ರಾತ್ರಿ 7:30ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ. ಡಿ.8 ಸೋಮವಾರ ಬೆಳಿಗ್ಗೆ, ರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮ ಡಿ.9 ಮಂಗಳವಾರ ಬೆಳಿಗ್ಗೆ ಸ್ವಾಮಿಗೆ ಕೊಬ್ಬರಿ ಎಣ್ಣೆ ಮಜ್ಜನ ಅಭಿಷೇಕ( ಓಕುಳಿ), ಸಂಜೆ ಪಲ್ಲಕ್ಕಿ ಉತ್ಸವ, ರಾತ್ರಿ ತೊಟ್ಟಿಲ ಸೇವೆ, ಪಟಾಕಿ ಪ್ರದರ್ಶನ. ಡಿ.10 ಬೆಳಿಗ್ಗೆ ನಮ್ಮೂರ ಹನುಮೋತ್ಸವ ಬೃಹತ್ ಶೋಭಾಯಾತ್ರೆ ನಗರದ ಪ್ರಮುಖ ಬೀದಿಗಳಲ್ಲಿ ಹನುಮ ಮೂರ್ತಿಯೊಂದಿಗೆ ವಿವಿಧ ಜಾನಪದ ಕಲಾತಂಡಗಳು ಮತ್ತು ಮಂಗಳವಾದ್ಯ ಹಾಗೂ ಎಲ್ಲಾ ಹನುಮ ಭಕ್ತ ಸಮೂಹದೊಂದಿಗೆ ಮೆರವಣಿಗೆ. ರಾತ್ರಿ ಉಸ್ತವಮೂರ್ತಿಗೆ ಪೂಜಾ ಕಾರ್ಯಕ್ರಮ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಈ ಕಾರ್ಯಕ್ರಮಕ್ಕೆ ಸರ್ವರು ಭಾಗವಹಿಸಿ ಯಶಸ್ವಿಗೊಳಿಸಿ ಎಂದು ವಿನಂತಿಸಿದರು.ಶ್ರೀ ಮಾರುತಿ ಯುವಕರ ಸಂಘದ ಕಾರ್ಯದರ್ಶಿ ಮೆಕಾನಿಕ್ ವಿನಯ್, ಪ್ರಚಾರ ಸಮಿತಿ ಅಧ್ಯಕ್ಷ ದರ್ಶನ್ ಮಂಡಿ, ಸದಸ್ಯರಾದ ಮಂಜುವಾಲ, ಪುನೀತ್, ಹಾಸಿಗೆ ನಾಗ, ಸಾಮಿಯಾನ ಸಾಗರ್, ನಂದೀಶ್, ಧನರಾಜ್ ಇದ್ದರು.

# ನಿರಪರಾಧಿಗಳಿಗೆ ಕಿರುಕಳ ನೀಡದಿರಿ



ಮೈಸೂರು: ಚಾಮರಾಜನಗರ ಜಿಲ್ಲೆ ಜ್ಯೋತಿಗೌಡನಪುರ ಗ್ರಾಮದಲ್ಲಿ ಅಂಬೇಡ್ಕರ್ ಫ್ಲೆಕ್ಸ್ ಹರಿದು, ಬುದ್ಧನ ಪ್ರತಿಮೆ ವಿರೋಪಗೊಳಿಸಿದ ನೈಜ ಆರೋಪಿಗಳ ವಿರುದ್ಧ ಜಿಲ್ಲಾಡಳಿತ ಕ್ರಮ ಕೈಗೊಳ್ಳಬೇಕು. ಇದೇ ವೇಳೆ ನಿರಪರಾಧಿಗಳಿಗೆ ಕಿರುಕುಳ ನೀಡಬಾರದು ಎಂದು ರಾಜ್ಯ ನಾಯಕ ಜನಾಂಗದ ಹಿತರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ದ್ಯಾವಪ್ಪ ನಾಯಕ ಆಗ್ರಹಿಸಿದರು.

ನಗರದಲ್ಲಿ ಸಸುದ್ದಿಗಾರರೊಡನೆ ಮಾತನಾಡಿ, ಅಲ್ಲಿನ ಘಟನೆಯ ತನಿಖೆಯ ಹೊಣೆ ಹೊತ್ತಿರುವವರು ನಿಸ್ಪಕ್ಷಪಾತ ತನಿಖೆ ನಡೆಸಬೇಕು. ಎಸ್‌ಐಟಿ ಅಥವಾ ಸಿಐಡಿಗೆ ವಹಿಸಬೇಕು. ಸದ್ಯದಲ್ಲಿ ಯಾರದೋ ರಾಜಕೀಯ ಪ್ರಭಾವಕ್ಕೆ ಒಳಗಾಗಿ, ಸಾಕ್ಷಾ?ಯಧಾರ ಪರಿಗಣಿಸದೇ ಅದೇ ಗ್ರಾಮದ ಮಂಜ ಎಂಬ ವ್ಯಕ್ತಿಯನ್ನು ಬಂಧಿಸಿರುವುದು ಸರಿಯಲ್ಲ ಎಂದರು.

ಡಾ.ಬಿ.ಆರ್ ಅಂಬೇಡ್ಕರ್ ಅವರ ಬಗ್ಗೆ ಎಲ್ಲರಿಗೂ ಅಪಾರ ಗೌರವವಿದೆ. ಆದರೆ ಘಟನೆಗೆ ಸಂಬಂಧಿಸಿದಂತೆ ಚಾಮರಾಜನಗರ ತಾಲೂಕಿನ ಹರದನಹಳ್ಳಿ ಗ್ರಾಮದ ಶಿವಣ್ಣ ಎಂಬ ವ್ಯಕ್ತಿಯನ್ನು ತನಿಖೆಗೆ ಕರೆಯಿಸಿಕೊಂಡು ಆರೋಪಿ ವಿರುದ್ಧ ಸಾಕ್ಷ?ಯ ಹೇಳಬೇಕೆಂದು ಒತ್ತಾಯಿಸುತ್ತಿರುವುದು ಖಂಡನೀಯ. ಗ್ರಾಮದಲ್ಲಿ ಶಾಂತಿಯುತ ವಾತಾವರಣ ನೆಲೆಸುವಂತೆ ನೋಡಿಕೊಳ್ಳಲು ಕೂಡಲೇ ಶಾಂತಿ ಸಭೆ ಆಯೋಜಿಸಬೇಕೆಂದು ಒತ್ತಾಯಿಸಿದರು. ಪ್ರಭಾಕರ್ ಹುಣಸೂರು, ಶ್ರೀಧರ್ ಚಾಮುಂಡಿಬೆಟ್ಟ, ಕೆರೆಹಳ್ಳಿ ಮಾದೇಶ್, ರಾಜು ಮಾರ್ಕೆಟ್, ಮೂರ್ತಿ, ಕೆ.ಎಸ್. ಗಣೇಶ್, ಜಿ.ಡಿ. ಸ್ವಾಮಿ ಇದ್ದರು.

# ಕನ್ನಡ ರಾಜ್ಯೋತ್ಸವ ಅದ್ದೂರಿ ಆಚರಣೆ



ಕೆ ಆರ್ ಪೇಟೆ: ತಾಲ್ಲೂಕಿನ ಕಿಕ್ಕೇರಿ ಪಣ್ಣದಲ್ಲಿ ಓಮಿನಿ ಕಾರು ಮಾಲಿಕರು ಮತ್ತು ಚಾಲಕರ ಸಂಘದ ವತಿಯಿಂದ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಶಾಸಕ ಹೆಚ್ ಟಿ ಮಂಜು ಧ್ವಜಾರೋಹಣ ನೆರವೇರಿಸಿ ಮತ್ತು ಜ್ಯೋತಿ ಬೆಳಗಿಸಿ ಮಾತನಾಡಿ ನವೆಂಬರ್ ತಿಂಗಳು ಬಂದರೆ ನಾಡಿನೆಲ್ಲೆಡೆ ಕನ್ನಡ ರಾಜ್ಯೋತ್ಸವದ ಮುಗಿಲು ಮುಟ್ಟುತ್ತದೆ ಅದೇ ರೀತಿ ನಮ್ಮ ಮಂಡ್ಯ ಜಿಲ್ಲೆಯಲ್ಲಿ ಹೆಚ್ಚಾಗಿ ಕನ್ನಡ ಬಾಷೆಯನ್ನು ಬಳಕೆ ಮಾಡುತ್ತಾರೆ ಬೇರೆ ಹೊರ ರಾಜ್ಯದ ಗಡಿ ಭಾಗಗಳಲ್ಲಿ ಬೇರೆ ಬೇರೆ ಬಾಷೆಗಳ ಮೇಲೆ ಅವಲಂಬಿಸಿದ್ದಾರೆ ಆದ್ರೆ ಕನ್ನಡ ನಾಡಿನಲ್ಲಿರು ಪ್ರತಿ ಪ್ರಜ್ಞೆಯು ನಾಡಿನ ಋಣ ತೀರಿಸಿ ನಮ್ಮ ಕನ್ನಡ ಬಾಷೆನ್ನು ಬಳಸಬೇಕು.. ವಿಶೇಷವಾಗಿ ಆಟೋ ಚಾಲಕರು ಮತ್ತು ಓಮಿನಿ ಕಾರು ಚಾಲಕರು ಅದ್ದೂರಿಯಾಗಿ ಕನ್ನಡ ರಾಜ್ಯೋತ್ಸವ ಆಚರಣೆ ಮಾಡುತ್ತಾರೆ ಅವರ ಜೊತೆಗೂಡಿ ಪ್ರತಿಯೊಬ್ಬ ಕನ್ನಡಿಗನು ಕನ್ನಡ ನಾಡು, ನುಡಿ, ಜಲ, ಭಾಷೆ ಯಾವುದಕ್ಕಾದರೂ ಧಕ್ಕೆ ಉಂಟಾದರೆ ನಾವು ಕನ್ನಡಿಗರೆಲ್ಲ ಒಟ್ಟಾಗಿ ಅದರ ವಿರುದ್ಧ ಧ್ವನಿ ಎತ್ತಿದಾಗ ಮಾತ್ರ ಕನ್ನಡ ನಾಡು ಉಳಿವಿಗೆ ಸಾಧ್ಯ ಎಂದರು.ಕನ್ನಡ ನಾಡಿನಲ್ಲಿರುವ ಸಂಸ್ಕೃತಿ ಮತ್ತು ವ್ಯವಸ್ಥೆ ಇಡೀ ಭಾರತದಲ್ಲಿ ಎಲ್ಲಿಯೂ ಸಿಗಲು ಸಾಧ್ಯವಿಲ್ಲ ಎಂದರು

ಅಲ್ಲದೆ ಅನ್ನಸಂತರ್ಪಣೆಯನ್ನು ಸಂಘದ ವತಿಯಿಂದ ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ಸಮಾಜ ಸೇವಕರಾದ ಮೊಟ್ಟೆ ಮಂಜು, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಐಕನಹಳ್ಳಿ ಕೃಷ್ಣಗೌಡ, ಜೆ.ಡಿ.ಎಸ್ ಹೋಬಳಿ ಘಟಕದ ಅಧ್ಯಕ್ಷ ಕಾಯಿ ಮಂಜೇಗೌಡ, ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅದ್ಯಕ್ಷ ಕೆ ಬಿ. ಶೇಖರ, ರಕ್ಷಣಾ ವೇದಿಕೆಯ ಜಿಲ್ಲಾದ್ಯಕ್ಷ ವೇಣು, ಉಪಾದ್ಯಕ್ಷ ಸಾಸಲು ಗುರುಮೂರ್ತಿ, ಕಿಕ್ಕೇತಿ ಹೋಬಳಿ ಘಟದ ಅಧ್ಯಕ್ಷ ಸೋಳ್ಳೇಪುರ ಸುರೇಶ್, ಅಪ್ಪು ಬ್ರಿಗ್ರೇಡ್ ಅಧ್ಯಕ್ಷ ಮಹೇಶ್, ಓಮಿನಿ ಕಾರು ಚಾಲಕ ಮತ್ತು ಮಾಲಿಕರ ಸಂಘದ ಅಧ್ಯಕ್ಷರಾದ ರಾಜೇಗೌಡ್ರು, ಯಪಾಧ್ಯಕ್ಷರಾದ ಪ್ರಸನ್ನ ಕುಮಾರ್, ಗೌರವ ಅಧ್ಯಕ್ಷರಾದ ರಘು, ಕಾರ್ಯದರ್ಶಿಗಳಾದ ಮಂಜು, ವಿನಯ್ ಮಹದೇವ, ರಮೇಶ್, ಖಜಾಂಚಿ ಅಕ್ಷಯ್, ಸದಸ್ಯರಾದ ದಿಲೀಪ್ ಕುಮಾರ್, ಯೋಗೇಶ್, ರವಿ, ರಮೇಶ್, ವೆಂಕಟರೆಡ್ಡಿ, ರಮೇಶ್, ವಾಜಿದ್ ಪಾಷ, ಜಯರಾಮ್, ದೇವಯ್ಯ, ಚೇತನ್, ಕುಮಾರ್, ರಘು, ಸುರೇಶ್, ಸುರೇಶ್, ರಘು, ಮಹೇಶ್, ರಮೇಶ್, ದೀಪು, ಹರೀಶ್, ಬಾಬು, ಮಂಜುನಾಥ್, ಮನು,

# ಪೌರಕಾರ್ಮಿಕರಿಗೆ ಸೌಲಭ್ಯಕ್ಕಾಗಿ ಕ್ರಮ

## ಡಾ.ಮಂತರ್ ಗೌಡ ಭರವಸೆ । ಪೌರಕಾರ್ಮಿಕರ ದಿನಾಚರಣೆ



ಮಡಿಕೇರಿ:–ಸಮಾಜದಲ್ಲಿ ಪೌರಕಾರ್ಮಿಕರು ತೆರೆಯ ಹಿಂದಿನಂತೆ ಮೌನವಾಗಿ, ಸದ್ದಿಲ್ಲದೆ ಕರ್ತವ್ಯ ನಿರ್ವಹಿಸುತ್ತಾರೆ. ಆದ್ದರಿಂದ ಪೌರಕಾರ್ಮಿಕರ ವೃತ್ತಿಯನ್ನು ಎಷ್ಟು ಗೌರವಿಸಿದರೂ ಸಾಲದು ಎಂದು ಶಾಸಕರಾದ ಡಾ.ಮಂತರಗೌಡ ಅವರು ಅಭಿಪ್ರಾಯಪಟ್ಟಿದ್ದಾರೆ.

ನಗರಸಭೆ ವತಿಯಿಂದ ನಗರದ ಅಂಬೇಡ್ಕರ್ ಭವನದಲ್ಲಿ ಶುಕ್ರವಾರ ನಡೆದ 'ಪೌರಕಾರ್ಮಿಕರ ದಿನಾಚರಣೆ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಮಡಿಕೇರಿ ನಗರ ಸ್ವಚ್ಛತೆ ಹಾಗೂ ಪರಿಶುದ್ಧ ಗಾಳಿಗೆ ಹೆಸರಾಗಿರಲು ಪೌರಕಾರ್ಮಿಕರ ಸೇವೆಯು ಸಹ ಒಂದಾಗಿದೆ. ಆ ನಿಟ್ಟಿನಲ್ಲಿ ಪೌರಕಾರ್ಮಿಕರನ್ನು ಗೌರವಿಸಬೇಕು. ಜೊತೆಗೆ ಸರ್ಕಾರದ ಸೌಲಭ್ಯಗಳು ತಲುಪಬೇಕು ಎಂದು ಶಾಸಕರು ನುಡಿದರು.

ಪೌರಕಾರ್ಮಿಕರಿಗೆ ಗೃಹಭಾಗ್ಯ ಯೋಜನೆಯಡಿ 12 ಕುಟುಂಬಗಳಿಗೆ ಮನೆ ನಿರ್ಮಿಸಿಕೊಡಲಾಗುತ್ತಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಹಾಗೆಯೇ ಹೊರಗುತ್ತಿಗೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಖಾಯಂ ಮಾಡಬೇಕಿದೆ. ಪೌರಕಾರ್ಮಿಕರಿಗೆ ವಿಮಾ ಸೌಲಭ್ಯ ದೊರೆಯಬೇಕು. ಹಾಗೆಯೇ ಕಾಲ ಕಾಲಕ್ಕೆ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸುವಂತಾಗಬೇಕು ಎಂದು ಡಾ.ಮಂತರ್ ಗೌಡ ಅವರು ಸಲಹೆ ಮಾಡಿದರು.

'ಪೌರಕಾರ್ಮಿಕರು ತಮ್ಮ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡಿಸಬೇಕು. ಶಿಕ್ಷಣದಿಂದ ಮಾತ್ರ ಸಮಾಜದಲ್ಲಿ ಬದಲಾವಣೆ ಕಾಣಲು ಸಾಧ್ಯ. ಆ ನಿಟ್ಟಿನಲ್ಲಿ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕು. ಎಂದು ಶಾಸಕರು ಹೇಳಿದರು.' ಪೌರಕಾರ್ಮಿಕರು ವೃತ್ತಿಯನ್ನು ಗೌರವಿಸಿ, ಶಿಸ್ತಿನ ಶಿಫಾಯಿಗಳಂತೆ ಕರ್ತವ್ಯ ನಿರ್ವಹಿಸುತ್ತಿದ್ದು, ಪ್ರತೀ ನಿತ್ಯ ಪೌರಕಾರ್ಮಿಕರನ್ನು ಸ್ಮರಿಸಬೇಕು ಎಂದರು.

ನಗರಸಭೆ ಅಧ್ಯಕ್ಷರಾದ ಪಿ.ಕಲಾವತಿ ಅವರು ಮಾತನಾಡಿ ಪೌರಕಾರ್ಮಿಕರು ಮಡಿಕೇರಿ ನಗರ ಸ್ವಚ್ಛತೆ ಹಾಗೂ ಪರಿಸರ ಶುಚಿತ್ವಕ್ಕೆ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಅಂತವರನ್ನು ಸದಾ ಸ್ಮರಿಸಬೇಕು. ಪೌರಕಾರ್ಮಿಕರು ತಮ್ಮ ವೃತ್ತಿಯ ಜೊತೆಗೆ ಆರೋಗ್ಯ ಕಡೆಯು ಹೆಚ್ಚಿನ ಗಮನ ಹರಿಸಬೇಕು ಎಂದು ಸಲಹೆ ಮಾಡಿದರು.

ಪೌರಕಾರ್ಮಿಕರು ವೃತ್ತಿಯಲ್ಲಿ ಶ್ರದ್ಧೆಯಿಂದ ದುಡಿಯುತ್ತಾರೆ. ಇವರಿಗೆ ಎಷ್ಟು ಕೃತಜ್ಞತೆ ಸಲ್ಲಿಸಿದರು ಸಾಲದು. ಆ ನಿಟ್ಟಿನಲ್ಲಿ ವೃತ್ತಿಯನ್ನು ಗೌರವಿಸಬೇಕು. ಇತರರಂತೆ ಬದುಕು ನಡೆಸಲು ಮುಂದಾಗಬೇಕು ಎಂದು ಕಲಾವತಿ ಅವರು ಸಲಹೆ ಮಾಡಿದರು.

ನಗರಸಭೆ ಉಪಾಧ್ಯಕ್ಷರಾದ ಮಹೇಶ್ ಜೈನಿ ಅವರು ಮಾತನಾಡಿ ಪೌರಕಾರ್ಮಿಕರು ಸ್ವಚ್ಛತಾ ಸೇನಾನಿಗಳಾಗಿದ್ದು, ಪೌರಕಾರ್ಮಿಕರಿಗೆ ಸಮಾಜ ಸದಾ ಅಬಾರಿಯಾಗಿರಬೇಕು. ದಸರಾ ಸೇರಿದಂತೆ ರಾಷ್ಟ್ರೀಯ ಹಬ್ಬ ವಿಶೇಷ ಸಂದರ್ಭದಲ್ಲಿ ಇವರ ಪಾತ್ರ ಹೆಚ್ಚಿನದ್ದು ಎಂದು ಹೇಳಿದರು.

ನಗರಸಭೆ ಸದಸ್ಯರಾದ ಅನಿತಾ ಪೂವಯ್ಯ ಅವರು ಮಾತನಾಡಿ ಪೌರಕಾರ್ಮಿಕರು ತಾವು ಕೆಲಸ ನಿರ್ವಹಿಸುವ ಸಂದರ್ಭದಲ್ಲಿ ಮುಖಗವಸು, ಕೈಗವಸು, ಕಾಲಿಗೆ ಬೂಟು ಹಾಕಿಕೊಂಡು ಕರ್ತವ್ಯ ನಿರ್ವಹಿಸಬೇಕು. ಇದರಿಂದ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು ಎಂದು ಸಲಹೆ ಮಾಡಿದರು.

ಪೌರಕಾರ್ಮಿಕರು ಎಲ್ಲರಂತೆ ಬದುಕು ನಡೆಸಬೇಕು. ಯಾವುದೇ ಕಾರಣಕ್ಕೂ ವಿಚಲಿತರಾಗದೆ ಉತ್ತಮ ಬದುಕು ಕಟ್ಟಿಕೊಳ್ಳಲು ಮುಂದಾಗಬೇಕು ಎಂದು ಅನಿತಾ ಪೂವಯ್ಯ ಅವರು ನುಡಿದರು.

ಸದಸ್ಯರಾದ ಅರುಣ್ ಶೆಟ್ಟಿ ಅವರು ಮಾತನಾಡಿ ಮಡಿಕೇರಿ ನಗರಸಭೆಯಲ್ಲಿ 23 ಸದಸ್ಯರು ಹಾಗೂ 5 ನಾಮ ನಿರ್ದೇಶಿತ ಸದಸ್ಯರಿದ್ದು, ನಮ್ಮ ಪೌರಕಾರ್ಮಿಕರ ದಿನಾಚರಣೆಗೆ ಕೇವಲ 5 ಮಂದಿ ಆಗಮಿಸಿದ್ದಾರೆ. ಈ ರೀತಿ ಆದಲ್ಲಿ ಪೌರಕಾರ್ಮಿಕರನ್ನು ಎಷ್ಟರ ಮಟ್ಟಿಗೆ ಗೌರವಿಸುತ್ತೇವೆ ಎಂಬುದು ತಿಳಿಯುತ್ತದೆ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಪ್ರಸ್ತಾವಿಕವಾಗಿ ಮಾತನಾಡಿದ ನಗರಸಭೆ ಎಂಜಿನಿಯರ್ ಸತೀಶ್ ಅವರು ಬಿಸಿಲು, ಮಳೆ ಗಾಳಿ,ಚಳಿ ಎನ್ನದೆ ಪೌರಕಾರ್ಮಿಕರು ಸೂರ್ಯ ಹುಟ್ಟುವುದಕ್ಕೂ ಮೊದಲೇ ಕರ್ತವ್ಯಕ್ಕೆ ತೆರಳಿ ಕರ್ತವ್ಯ ನಿರ್ವಹಿಸುತ್ತಾರೆ ಎಂದರು.

ಪೌರಕಾರ್ಮಿಕರ ದಿನಾಚರಣೆ ಪ್ರಯುಕ್ತ ವಿವಿಧ ಆಟೋಟ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಸನ್ಮಾನಿಸಲಾಯಿತು. ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಜೇಶ್ ಯಲ್ಲಪ್ಪ, ಪೌರಸೇವಾ ನೌಕರರ ಸಂಘದ ಅಧ್ಯಕ್ಷರಾದ ಸತ್ಯನಾರಾಯಣ, ನಾಮ ನಿರ್ದೇಶಿತ ಸದಸ್ಯರಾದ ಜುಲೈಕಾಬಿ, ಮುತ್ತುರಾಜ್, ಪ್ರಮುಖರಾದ ಪ್ರಕಾಶ್ ಆಚಾರ್ಯ, ಇತರರು ಇದ್ದರು. ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಹೇಮಂತ್ ಕುಮಾರ್ ಸ್ವಾಗತಿಸಿದರು. ನಗರಸಭೆ ಲೆಕ್ಕಾಧಿಕಾರಿ ತಾಹಿರ್ ನಿರೂಪಿಸಿ, ವಂದಿಸಿದರು. ಅನಿತಾ ಮತ್ತು ತಂಡದವರು ನಾಡಗೀತೆ ಹಾಡಿದರು.

### ವಿವಿಧ ಕಾಮಗಾರಿಗೆ ಶಾಸಕರಿಂದ ಭೂಮಿ ಪೂಜೆ

**ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ನಗರದ ಐಟಿಐ ಕಾಲೇಜು ಬಳಿ ಸುಮಾರು 379 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಬಾಲಕರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿಗೆ ಶಾಸಕರಾದ ಡಾ.ಮಂತರ್ ಗೌಡ ಅವರು ಶುಕ್ರವಾರ ಚಾಲನೆ ನೀಡಿದರು. ಹಾಗೆಯೇ ಜಿಲ್ಲಾ ನ್ಯಾಯಾಲಯ ಬಳಿ ಸುಮಾರು 448 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಬಾಲಕಿಯರ ವಿದ್ಯಾರ್ಥಿ ನಿಲಯ ನೂತನ ಕಟ್ಟಡ ನಿರ್ಮಾಣ ಕಾಮಗಾರಿಗೆ ಶಾಸಕರಾದ ಡಾ. ಮಂತರ್ ಗೌಡ ಅವರು ಭೂಮಿ ಪೂಜೆ ನೆರವೇರಿಸಿದರು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಜಿಲ್ಲಾ ಕ್ರೀಡಾಂಗಣ ಬಳಿ ಸುಮಾರು 250 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಕ್ರೀಡಾ ವಸತಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿಗೆ ಶಾಸಕರಾದ ಡಾ.ಮಂತರ್ ಗೌಡ ಅವರು ಶುಕ್ರವಾರ ಭೂಮಿ ಪೂಜೆ ನೆರವೇರಿಸಿದರು.**

# ಚಿಕ್ಕಕೆರೆಯೂರು ಗ್ರಾಪಂ ನೂತನ ಸಭಾಂಗಣ ಉದ್ಘಾಟನೆ



ಎಚ್.ಡಿ.ಕೋಟೆ: ತಾಲೂಕಿನ ಚಿಕ್ಕಕೆರೆಯೂರು ಗ್ರಾಮ ಪಂಚಾಯಿತಿಯಲ್ಲಿ ನೂತನ ಸಭಾಂಗಣ, ಕೊಠಡಿ ಉದ್ಘಾಟನೆ ಹಾಗೂ ಕರ ವಸೂಲಾತಿ ಮಾಸಾಚರಣೆ ಕಾರ್ಯಕ್ರಮ ನಡೆಯಿತು.

ಗ್ರಾ.ಪಂ ಅಧ್ಯಕ್ಷ ಶಂಕರ್ ಮಾತನಾಡಿ, ನಮ್ಮ ಅವಧಿಯಲ್ಲಿ ನೂತನ ಸಭಾಂಗಣ ಕೊಠಡಿಯನ್ನು ಉದ್ಘಾಟನೆ ಮಾಡಿರುವುದು ಸಂತೋಷ ತಣಮದಿದೆ. ಗ್ರಾಪಂ ಸದಸ್ಯರು ಹಾಗೂ ಪಂಚಾಯ್ತಿ ಅಧಿಕಾರಿಗಳ ಪರಿಶ್ರಮದಿಂದ ನೂತನ ಕಟ್ಟಡ ಉದ್ಘಾಟನೆಗೊಂಡಿದೆ ಎಂದು ಹೇಳಿದರು. ಅಕ್ರಮ–ಸಕ್ರಮ ಸದಸ್ಯ ಕೆಂಡಗಣ್ಣೇಗೌಡ ಮಾತನಾಡಿ, ನಮ್ಮ ಗ್ರಾ.ಪಂ ವ್ಯಾಪ್ತಿಯಲ್ಲಿ ಯಾವುದೇ ಕೆಲಸ ಕಾರ್ಯಗಳು ನಡೆಯಬೇಕಾದರೆ ಹಣ ಮುಖ್ಯ. ಅದನ್ನು ಸ್ಥಳೀಯ ಸಂಪನ್ಮೂಲದಿಂದ ಮಾತ್ರ ಪಡೆಯಲು ಸಾಧ್ಯ. ಗ್ರಾ.ಪಂ ವತಿಯಿಂದ ಚರಂಡಿ ಸ್ವಚ್ಛತೆ, ವಿದ್ಯುತ್ ಬಳಕೆ, ನೀರು ನಿರ್ವಹಣೆ ಮಾಡುವುದು ನಿರಂತರವಾಗಿದೆ. ಅದಕ್ಕೆ ತಗಲುವ ಖರ್ಚು ವೆಚ್ಚಗಳನ್ನು ಸಾರ್ವಜನಿಕರ ತೆರಿಗೆಯ ಕಂದಾಯದ ಮೂಲಕ ಬಳಸಿಕೊಳ್ಳಲಾಗುತ್ತದೆ. ಎಂದು ತಿಳಿಸಿದರು.

ಡಾ.ಬಾಬು ಜಗಜೀವರಾಂ ಸಂಘದ ಮಾಜಿ ಅಧ್ಯಕ್ಷ ಪಿ.ನಾಗರಾಜು ಮಾತನಾಡಿ, ಹದಿನಾಲ್ಕನೇ ಹಣಕಾಸಿನಲ್ಲಿ ಪ್ರತಿ ಸದಸ್ಯರಿಗೆ ಹಣವನ್ನು ಹಂಚಿಕೆ ಮಾಡಿ, ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಮಾಡಲಾಗುತ್ತದೆ. ನೂತನ ಸಭಾಂಗಣ ಕೊಠಡಿಯನ್ನು ತಮ್ಮ ಅವಧಿಯಲ್ಲಿ ಮಾಡಿಸಿ ಉದ್ಘಾಟನೆ ನೆರವೇರಿಸಿರುವುದು ಒಳ್ಳೆಯ ಬೆಳವಣಿಗೆ. ಅಧಿಕಾರ ಯಾರಿಗೂ ಶಾಶ್ವತವಲ್ಲ ಇದ್ದಾಗ ಜನರ ಕಷ್ಟ ಸುಖದಲ್ಲಿ ಪಾಲ್ಗೊಳ್ಳಬೇಕು ಎಲ್ಲರನ್ನೂ ಸಮಾನವಾಗಿ ಕಾಣಬೇಕು. ಅಧ್ಯಕ್ಷರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಜನರಿಗೆ ಎಲ್ಲ ಸಮಯದಲ್ಲೂ ಸ್ಪಂದಿಸಬೇಕು. ರಾಷ್ಟ್ರಪತಿ ಬಿಟ್ಟರೆ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಚೆಕ್ ಪವರ್ (ಗ್ರೀನ್ ಪೆನ್) ಇರುತ್ತದೆ. ಇದನ್ನು ಸರಿಯಾಗಿ ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಗ್ರಾ.ಪಂ. ಉಪಾಧ್ಯಕ್ಷೆ ವಸಂತ ನಾಗರಾಜ್, ಸದಸ್ಯರಾದ ಸಣ್ಣಸ್ವಾಮಿ ನಾಯಕ, ಮಲ್ಲೇಶ್, ಮಹೇಶ್, ರಮೇಶ್, ಚೆಲುವರಾಜು, ಭಾಗ್ಯ, ಲಕ್ಷ್ಮಮ್ಮ, ಮಾಲತಿ, ಮಹದೇವಮ್ಮ, ಭಾಗ್ಯಮ್ಮ, ಸಿಂಧು, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪ್ರಕಾಶ್, ಕಾರ್ಯದರ್ಶಿ ಚೆಲುವರಾಜು, ನರಸಿಂಹ, ಮೂರ್ತಿ, ಸುರೇಶ್, ಹನುಮಂತರಾಜು, ಕೃಷ್ಣಮೂರ್ತಿ, ಜ್ಯೋತಿ, ಅಭಿ, ಎಲ್ಲಭೋವಿ, ನಾಗಮ್ಮ, ಕೃಷ್ಣಮೂರ್ತಿ, ಮನೋಜ್ ಕುಮಾರ್, ಕೆಂಡಪ್ಪ, ಗುತ್ತಿಗೆದಾರ ಶಿವರಾಜ್, ರವಿ ಸಿ. ಕೆ, ಪೊಲೀಸ್ ನಾಗರಾಜು, ರೇಖಾ, ದಾಸೇಗೌಡ, ನಾಗೇಂದ್ರ, ಕೃಷ್ಣ, ರವಿ, ಶ್ರೀನಿವಾಸ್ ಸೇರಿದಂತೆ ಗ್ರಾಮದ ಮುಖಂಡರು ಸಾರ್ವಜನಿಕರು ಇದ್ದರು.

# ಪಠ್ಯದ ಜೊತೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿ



ಚಾಮರಾಜನಗರ: ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿ, ತಮ್ಮ ಜ್ಞಾನವನ್ನು ವೃದ್ಧಿಸಿಕೊಂಡು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹೆಚ್ಚಿನ ಒತ್ತು ನೀಡಬೇಕು ಎಂದು ಜೆಎಸ್‌ಎಸ್ ವಿದ್ಯಾರ್ಥಿ ನಿಲಯದ ಪಾಲ ಸೋಮೇಶ್ ತಿಳಿಸಿದರು.

ನಗರದ ಜೆಎಸ್‌ಎಸ್ ಅನಾಥಾಲಯದಲ್ಲಿ ಮಕ್ಕಳ ದಿನಾಚರಣೆ ಅಂಗವಾಗಿ ಅಂತರ ಶಾಲೆಯ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಚರ್ಚೆ ಹಾಗೂ ಪ್ರಬಂಧ ಸ್ಪರ್ಧೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ವಿಜೇತ ಮಕ್ಕಳಿಗೆ ಬಹುಮಾನ ವಿತರಿಸಿ ಅವರು ಮಾತನಾಡಿದರು. ಹಾಸ್ಟೆಲ್‌ಗಳಲ್ಲಿ ವ್ಯಾಸಂಗ ಮಾಡುವ ಮಕ್ಕಳು ಸಹ ಪ್ರತಿಭಾವಂತರಾಗಿದ್ದು, ಅವರಿಗೆ ಉತ್ತಮ ಅವಕಾಶ ಮತ್ತು ವೇದಿಕೆಗಳನ್ನು ಕಲ್ಪಿಸಿಕೊಟ್ಟರೆ ಪ್ರಬುದ್ಧರಾಗಿ ಬೆಳೆಯಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಮಕ್ಕಳ ದಿನಾಚರಣೆ ಅಂಗವಾಗಿ ಹಾಸ್ಟೆಲ್ ವಿದ್ಯಾರ್ಥಿಗಳಿಗಾಗಿ ಅಂತರ ಶಾಲೆಗಳ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಮೊಬೈಲ್ ಮಾರಕವೋ, ಪೂರಕವೋ ಕುರಿತು ಚರ್ಚಾ ಸ್ಪರ್ಧೆ ಹಾಗೂ ಕ್ರೀಡೆಯಲ್ಲಿ ಶಿಕ್ಷಣದ ಮಹತ್ವ ಕುರಿತು ಪ್ರಬಂಧ ಸ್ಪರ್ಧೆಯನ್ನು ಆಯೋಜನೆ ಮಾಡಿದ್ದು, ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ವಿದ್ಯಾರ್ಥಿಗಳು ಹಾಗು ನಿಲಯಪಾಲಕರು ಉತ್ಸಾಹದಿಂದ ನಮ್ಮ ಕಾರ್ಯಕ್ರಮಗಳನ್ನು ಭಾಗವಹಿಸಿ ಯಶಸ್ವಿಗೊಳಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಧೀನಬಂಧು ವಸತಿ ನಿಲಯದ ನಿಲಯ ಪಾಲಕ ಅಭಿ??ಕ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಬಾಲ್ಯದಿಂದಲೇ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆತದಾಗ ಅವರು ಸಮಾಜಕ್ಕೆ ಆಸ್ತಿಯಾಗುತ್ತಾರೆ. ಹಾಸ್ಟೆಲ್‌ನಲ್ಲಿರುವ ವಿದ್ಯಾರ್ಥಿಗಳು ಓದಿನ ಕಡೆ ಹೆಚ್ಚು ಗಮನ ನೀಡಬೇಕು. ಜೊತೆಗೆ ಸ್ಪರ್ಧಾತ್ಮಕ ಯುಗದಲ್ಲಿರುವ ನಾವೆಲ್ಲರು ನಿರಂತರ ಅಧ್ಯಯನ ಶೀಲರಾದಾಗ ಮಾತ್ರ ಸಾಧನೆ ಮಾಡಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಈ ಕಾರ್ಯಕ್ರಮ ಪೂರಕವಾಗಿದೆ ಎಂದರು. ಕಾರ್ಯಕ್ರಮದಲ್ಲಿ ಪಟ್ಟಣದ ದೀನ ಬಂದು ವಿದ್ಯಾರ್ಥಿ ನಿಲಯ, ಪಾರ್ವತಿ ಸೇವಾ ವಸತಿ ನಿಲಯ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ವಸತಿ ನಿಲಯದ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಜೆಎಸ್‌ಎಸ್ ಶಾಲೆಯ ಶಿಕ್ಷಕರಾದ ಮೂರ್ತಿ, ಸುನಿಲ್ ಕುಮಾರ್, ಶಿವಾನಂದ, ರವಿ ಇತರರು ಹಾಜರಿದ್ದರು.

# 8 ಮಂದಿ ವಾಹನ ಚೋರರ ಬಂಧನ



ರಾಮನಗರ: ಕಾರು ಚಾಲಕನ್ನು ಥಳಿಸಿ ಬಾಡಿಗೆ ಕಾರನ್ನು ದರೋಡೆ ಮಾಡಿದ್ದ ಹುಡುಗಿಯರು ಸೇರಿದಂತೆ 8 ಮಂದಿಯ ಗುಂಪನ್ನು ಬಿಡದಿ ಪೊಲೀಸರು ಪತ್ತೆ ಹಚ್ಚಿದ್ದಾರೆ.

ನವೆಂಬರ್ 18, 2025ರಂದು ರಾತ್ರಿ ಬೆಂಗಳೂರಿನಿಂದ ಬಿಡದಿ ಜೋಗನಪಾಳ್ಯ ಗ್ರಾಮಕ್ಕೆ ಡ್ರಾಪ್ ತೆಗೆದುಕೊಳ್ಳುವ ಸಲುವಾಗಿ 4 ಜನ ಹುಡುಗರು ಮತ್ತು 4 ಮಂದಿ ಹುಡುಗಿಯರು ಬಾಡಿಗೆಗೆ ಕಾರು ಪಡೆದುಕೊಂಡಿದ್ದರು. ಬಿಡದಿ ಪೊಲೀಸ್ ಠಾಣಾ ವ್ಯಾಪ್ತಿಯ ಬನ್ನಿಗಿರಿ ರಸ್ತೆ ಕಡೆ ಬಂದಾಗ, ಕಾರಿನ ಚಾಲಕನಿಗೆ ಕಬ್ಬಿಣದ ರಾಡಿನಿಂದ ಹೊಡೆದು, ಬೆದರಿಕೆ ಹಾಕಿ ಕಾರನ್ನು ದರೋಡೆ ಮಾಡಿಕೊಂಡು ಹೋಗಿದ್ದರು. ಈ ಸಂಬಂಧ ಕಾರಿನ ಚಾಲಕ ಬಿಡದಿ ಪೊಲೀಸರಿಗೆ ದೂರು ನೀಡಿದ್ದರು. ಬಿಡದಿ ಪೊಲೀಸರು ಆರೋಪಿಗಳ ಪತ್ತೆಗಾಗಿ ಮಾಹಿತಿ ಕಲೆ ಹಾಕಿ, ದರೋಡೆ ನಡೆಸಿದ್ದ 8 ಮಂದಿ ಆರೋಪಿಗಳನ್ನು ನ.22ರಂದು ಬಂಧಿಸಿದ್ದಾರೆ. ಸದರಿ ಆರೋಪಿಗಳು ಬಿಡದಿ, ಕನಕಪುರ, ಚನ್ನಪಟ್ಟಣ, ಮಳವಳ್ಳಿ, ಶಿವಮೊಗ್ಗ, ಶ್ರೀರಂಗಪಟ್ಟಣ ಕಡೆಗಳಲ್ಲಿ ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿರುವುದಾಗಿ ವಿಚಾರಣಾ ಸಮಯದಲ್ಲಿ ತಿಳಿದು ಬಂದಿದೆ. ಆರೋಪಿಗಳಿಂದ ಸುಮಾರು 16 ಲಕ್ಷ ರೂ ಮೌಲ್ಯದ 3 ಕಾರು, 6 ದ್ವಿಚಕ್ರ ವಾಹಗಳು, 1 ಆಟೋ ಹಾಗೂ ಕೃತ್ಯಕ್ಕೆ ಬಳಸಿದ್ದ ಮಾರಕಾಸ್ತ್ರಗಳನ್ನು ಅಮಾನತ್ತು ಪಡಿಸಿಕೊಳ್ಳಲಾಗಿದೆ. ಸಧ್ಯ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ. ಒಟ್ಟು 10 ಪ್ರಕರಣಗಳನ್ನು ಪತ್ತೆ ಮಾಡುವಲ್ಲಿ ಬಿಡದಿ ಪೊಲೀಸ್ ಠಾಣೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಯಶಸ್ವಿಯಾಗಿರುತ್ತಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

### ಸಾಲು ಮರದ ತಿಮ್ಮಕ್ಕ ನ ಸ್ಮರಣಾರ್ಥ

# ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ



ಚಾಮರಾಜನಗರ: ಸಾಲು ಮರದ ತಿಮ್ಮಕ್ಕ ಅವರಿಗೆ ಮಕ್ಕಳಿಲ್ಲದಿದ್ದರು ಗಿಡಗಳನ್ನೇ ತಮ್ಮ ಮಕ್ಕಳೆಂದು ತಿಳಿದು ಪ್ರೀತಿಸುವ ಮೂಲಕ ಪರಿಸರದ ಮೇಲೆ ಅಪಾರವಾದ ಕಾಳಜಿ ಹೊಂದಿದ್ದರು ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದರು.

ಈಶ್ವರಿ ಸೋಷಿಯಲ್ ಟ್ರಸ್ಟ್ ವತಿಯಿಂದ ಡಾ.ಸಾಲು ಮರದ ತಿಮ್ಮಕ್ಕ ಅವರ ಸ್ಮರಣಾರ್ಥ 114 ಸಾಲು ಗಿಡಗಳನ್ನು ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ದೆಹಲಿಯಲ್ಲಿ ಕಳಪೆ ಗುಣಮಟ್ಟದ ಗಾಳಿಯು ದಾಖಲಾಗಿರುವುದರಿಂದ 60 ವರ್ಷ ಮೇಲ್ಪಟ್ಟವರು ನ್ಯಾಯಲಯಕ್ಕೆ ಬರುವ ಅಗತ್ಯವಿಲ್ಲ ಅವರು ವರ್ಚುವೆಲ್ ಮುಖಾಂತರ ಭಾಗ ವಹಿಸಬಹುದು ಎಂದು ನ್ಯಾಯಾಧೀಶರು ತಿಳಿಸಿದ್ದಾರೆ. ನಮ್ಮೂರಿನಲ್ಲಿ ಶುದ್ದಗಾಳಿ ಪಡೆಯುತ್ತಿರುವ ನಾವೇ ಧನ್ಯರು.ಉತ್ತಮ ಗಾಳಿಯನ್ನು ಪಡೆಯಬೇಕಾದರೆ ಹೆಚ್ಚು ಗಿಡಮರಗಳನ್ನು ಬೆಳೆಸಬೇಕು ಇದರ ಪರಿಣಾಮ ದೇಶದಲ್ಲೇ ಚಾಮರಾಜನಗರವು ಶುದ್ದಗಾಳಿ ಪಡೆಯು ವಲ್ಲಿ ಉನ್ನತ ಸ್ಥಾನ ಪಡೆದಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ದೀನಬಂಧು ಸಂಸ್ಥೆಯ ಗೌರವ ಕಾರ್ಯದರ್ಶಿ ಪ್ರೋಫೇಸರ್ ಜಯದೇವ್ ಮಾತನಾಡಿ ಚಾಮರಾಜನಗರದಲ್ಲಿ ಹಸಿರುವಾತವರಣ ಸೃಷ್ಠಿಯಾಗಿದೆ. ಮರಗಳು ಋಷಿಗಳು ಇದ್ದಹಾಗೆ ಅದು ಕಡಿಯಲು ಕೊಡಲಿ ತಂದವನಿಗೂ ಮರಗಳು ನೆರಳು ಕೊಡುತ್ತೆದೆ ಎಂದರು. ಅಳಿವಿನ ಅಂಚಿನಲ್ಲಿ ಇರುವ ಮಾಗಳಿ ಬೇರು ಮುಂತಾದ ಸಸ್ಯ ಪ್ರಬೇಧಗಳನ್ನು ಸಂರಕ್ಷಣೆಮಾಡಿ ಮುಂದಿನ ಪೀಳಿಗೆಗೆ ಕೊಂಡೊಯ್ಯಬೇಕಿದೆ ಎಂದು ತಿಳಿಸಿದರು. ಪರಿಸರ ಪ್ರೇಮಿಗಳಾದ ಕರಿಘಟ್ಟ ರಮೇಶ್, ಪಾಂಡವಪುರ ಲವಕುಮಾರ್, ಗಂಟಯ್ಯ (ಕೃಷ್ಣಪ್ಪ) ಹಾಗೂ ಬಂಗಾರ ನಾಯಕ ಅವರನ್ನು ಸನ್ಮಾನಿಸಲಾಯಿತು. ಈಶ್ವರಿ ಸೋಷಿಯಲ್ ಟ್ರಸ್ಟ್ ಅಧ್ಯಕ್ಷ ಸಿ.ಎಂ.ವೆಂಕಟೇಶ್ ಮಾತನಾಡಿ ಸಾಲು ಮರದ ತಿಮ್ಮಕ್ಕನವರ ನೆನಪಿಗಾಗಿ ಚಾಮರಾಜನಗರದಲ್ಲಿ 114 ಫಾಕ್ಸ್‌ಟಲ್ ಸಸ್ಯ ಪ್ರಭೇದದ ಎತ್ತರದ ಗಿಡಗಳನ್ನು ತೆಲಂಗಾಣದಿಂದ ತಂದು ನೆಡಲಾಗುತ್ತಿದೆ. ನಗರದ ಸೌಂಧರ್ಯವನ್ನು ಹೆಚ್ಚಿಸಲು ಈ ಗಿಡಗಳು ಸಹಕಾರಿಯಾಗಿದೆ. ಬಹು ಎತ್ತರದ ಗಿಡಗಳನ್ನು ನೆಡೆವುದು ನನ್ನ ಬಹುದಿನಗಳ ಕನಸಾಗಿತ್ತು ಎಂದು ತಿಳಿಸಿದರು.ಈ ಸಂದರ್ಭದಲ್ಲಿ ಬಿಎಸ್‌ವಿ ಪ್ರತಿ?ಾ?ಠನದ ವೆಂಕಟನಾಗಪ್ಪಶೆಟ್ಟಿ, ಮುಖಂಡ ವೆಂಕಟರಮಣಸ್ವಾಮಿ, ನಂದಕುಮಾರ್ ಆಭರಣ ಮಾಲೀಕ ಶ್ರೀನಿಧಿ, ಉದ್ಯಮಿ ಶ್ರೀನಿಧಿಕುಮಾರ್, ಮಾಜಿ ತಾಪಂ ಸದಸ್ಯ ದಯಾನಿಧಿ, ಇತರರಿದ್ದರು.

# ಅಮ್ಮ ಹೇಳಿದ ಅವರೇ ಕಥೆ

ಆದಿಮಾನವ ಬೇಸಾಯ ಶುರು ಮಾಡಿದ ದಿನದಿಂದಲೂ ಬಗೆಬಗೆಯ ಗೆಡ್ಡೆಗೆಣಸು, ತರಾವರಿಯ ಹಣ್ಣು–ತರಕಾರಿ, ವಿವಿದ ಪ್ರಭೇದದ ಗಿಡಗಂಟೆಗಳನ್ನು ಬೆಳೆಯುತ್ತಾ ಅದನ್ನೇ ತನ್ನ ಆಹಾರ ಪದ್ಧತಿಯಲ್ಲಿ ಅಳವಡಿಸಿಕೊಂಡು ಬಂದಿದ್ದಾನೆ. ಇಂತಹ ವಿವಿಧ ರೀತಿಯ ಗಿಡಗಳಲ್ಲಿ ಅವರೆಕಾಯಿ ಗಿಡ ಕೂಡ ಒಂದು ವಿಶಿಷ್ಟ, ವಿಭಿನ್ನ ಮತ್ತು ಅದ್ಭುತವಾದದು.

ಅವರೆ ಬಗ್ಗೆ ಅಮ್ಮ ಹೇಳಿದ ಕತೆಯೊಂದು ಹೀಗಿದೆ. ( ಚಪ್ಪರದವರೇ ಹೌದೋ..ಅಲ್ಲವೋ.. ಗೊತ್ತಿಲ್ಲ. ಪ್ರದೇಶಾವಾರು ಕಥೆ ಬೇರೆ ರೂಪ ಪಡೆದಿರಲಿಕ್ಕು ಸಾಕು)

ಪಾಂಡವರು ವನವಾಸಕ್ಕೆ ಹೊರಟು ನಿಂತಾಗ ಪುರಜನರು ಬಹಳ ಶೋಕ ಪಡುತ್ತಾ, ಪಾಂಡವರಿಲ್ಲದೆ ತಾವು ಹೇಗಿರುವುದೆಂದು ಸಂಕಟಪಡುವರು. ಆಗ ಕುಂತಿ ಪುರಜನರಿಗೆ ಅವರೆ ಬೀಜವನ್ನು ಹಂಚಿ ಇದನ್ನು ಬಿತ್ತಿ– ಬೆಳೆಯಿರಿ. ಅವರೆ ಬೀಜ ಇರುವವರೆಗೂ ಪಾಂಡವರು ನಿಮ್ಮ ಜೊತೆ ಇರುತ್ತಾರೆ. ಹಾಗು ಇಳೆಯಲ್ಲಿ ಪಾಂಡವರ ನೆನಪು ಇರುತ್ತದೆ, ಎಂದು ಸಮಾಧಾನಿಸುವಳಂತೆ. ಹೀಗೆ ಅವರೆಯ ಮಹಿಮೆಗೆ ಸುಧೀರ್ಘ ಇತಿಹಾಸ ಉಂಟು.

ಡಿಸೆಂಬರ್ ಜನವರಿ ತಿಂಗಳು ಶುರುವಾಗುತ್ತಿದ್ದಂತೆ






ಗಲ್ಲಿ ಗಲ್ಲಿಯಲ್ಲಿ, ತಳ್ಳೋ ಗಾಡಿಯಲ್ಲಿ, ತರಕಾರಿ ಸಂತೆಗಳಲ್ಲಿ ಕಾಣ ಸಿಗುವ ಸೊಗಡು ಅವರೆಕಾಳಿನದ್ದೆ. ರಸ್ತೆ ಬದಿಯಿಂದ ಹಿಡಿದು ಮನೆ, ಅಡುಗೆಮನೆ ತನಕವೂ ಅವರೆಕಾಳಿನದ್ದೇ ಗಮ. ತಣ್ಣನೆ ಶೀತ ಚಳಿಗೆ ಅವರೆಕಾಯಿ ಮದ್ದು ಎನ್ನುವುದು ಒಂದು ಓಪನ್ ಸೀಕ್ರೆಟ್. ತರಹೇವಾರಿ ತರಕಾರಿಗಳಿದ್ದರೂ ಚಳಿಗಾಲದಲ್ಲಿ ಅವರೆಕಾಳು ಎಲ್ಲರ ಮನೆಯಲ್ಲಿ ಕಾಯಂ ಅತಿಥಿ. ಬೆಂಗಳೂರಿನಲ್ಲಿ ಅವರೆಕಾಯಿಯ ಪರಸೆ ಕೂಡ ಬಲು ಜೋರಾಗಿಯೇ ನಡೆಯುತ್ತದೆ. ಅವರೆಕಾಳಿನ ವಿವಿದ ತಳಿಗಳನ್ನು ನೋಡಬಹುದು.

ಅವರೇಕಾಳಿನಲ್ಲಿ ತರಾವರಿ ತಿಂಡಿ ತಿನಿಸುಗಳನ್ನು ತಯಾರಿಸಬಹುದು. ಇದರ ಪ್ರಾಮುಖ್ಯತೆ ಎಷ್ಟೆಂದರೆ ಈ ಕಾಲದ ಎಲ್ಲ ಅಡುಗೆಯೂ ಅವರೇಮಯ. ಅವರೇ ಕಾಳಿನ ಸಾರು, ಅವರೇ ಕಾಳಿನ ಉಸಲಿ, ಅವರೇ ಕಾಳಿನ ರೊಟ್ಟಿ, ಅವರೇ ಕಾಳಿನ ಉಪ್ಪಿಟ್ಟು, ಅವರೇ ಕಾಳಿನ ಬಸ್ಸಾರು, ಅವರೇ ಕಾಳಿನ ಉಪ್ಪಾರು, ಅವರೇ ಕಾಳಿನ ಪಲ್ಯಅವರೇ ಕಾಳಿನ ತೊವ್ವ ಅವರೇ ಕಾಳಿನ ಬಿಸಿಬೇಳೆ ಬಾತ್,ಅವರೇ ಕಾಳಿನ ಪೊಂಗಲ್, ಅವರೇ ಕಾಳಿನ ಇಡ್ಲಿ, ದೋಸೆಗಳಲ್ಲದೆ, ತರಕಾರಿ ಸಾಂಬರ್, ಪುಲಾವ್, ಸಾಗೂ ಅವರೇ ಮಸಾಲ ಪೂರಿ ಅವರೇ ಪಾನಿಪೂರಿ ಅಬ್ಬಬ್ಬಾ ಒಂದಲ್ಲ ಹಲವಾರು ಹಲವಾರು ಅಡುಗೆಗಳಲ್ಲಿ ಇತರ ತರಕಾರಿಗಳೊಂದಿಗೆ ಬಳಸಲ್ಪಡುವ ಈ ಕಾಳುಗಳು ಭೋಜನ ಪ್ರಿಯರ ಮನ ಗೆಲ್ಲುವಲ್ಲಿ ಯಶಸ್ವಿಯಾಗಿದೆ.

ಅವರೇಕಾಯಿ ಕೇವಲ ನಾಲಿಗೆ ರುಚಿಗೆ ಮಾತ್ರ ಇದರಿಂದ ಆರೋಗ್ಯಕ್ಕೆ ಯಾವುದೇ ಪ್ರಯೋಜನಗಳು ಇಲ್ಲವೆಂದು ತಿಳಿದಿದ್ದರೆ ಅದು ತಪ್ಪಾದೀತು. ಕಾಮಧೇನು, ಕಲ್ಪವೃಕ್ಷಕ್ಕೂ ಸಹ ಹೋಲಿಸಬಹುದಾಗಿದೆ. ಏಕೆಂದರೆ ಇದರ ಸೊಪ್ಪು, ಹೂವು, ಕಾಳುಗಳಷ್ಟೇ ಅಲ್ಲದೆ ಸಿಪ್ಪೆಗಳೂ ಸಹ ವ್ಯರ್ಥವಾಗುವುದಿಲ್ಲ. ಅವರೇಕಾಯಿಯ ಸಿಪ್ಪೆಯು ಜಾನುವಾರುಗಳಿಗೆ ಉತ್ತಮ ಮೇವಾಗಿ ಉಪಯೋಗಿಸಲ್ಪಡುವ ಇದರಲ್ಲಿ ಮಣಿ ಅವರೇ, ತಟ್ಟೆ ಅವರೇ, ಚಪ್ಪರದವರೇ ಹೀಗೆ ನಾನಾ ವಿಧಗಳಿವೆ. ಅವ್ರೆ ಅವರೇ ಎಂದು ಕರೆಯುವ ಅವರೆಕಾಯಿ ಆರೋಗ್ಯಕ್ಕೆ ತುಂಬಾ ಪ್ರಯೋಜನಕಾರಿ. ಇದರಲ್ಲಿ ಪ್ರೋಟೀನ್, ಫೈಬರ್, ಕಬ್ಬಿಣ, ಮೆಗ್ನೀಸಿಯಮ್, ಫಾಸ್ಫರಸ್, ಕ್ಯಾಲ್ಸಿಯಂ ಮತ್ತು ವಿಟಮಿನ್‌ಗಳಾದ ಎ, ಸಿ, ಮತ್ತು ಕೆ1 ಸಮೃದ್ಧವಾಗಿವೆ ಇದರಲ್ಲಿ ನಾರಿನ ಅಂಶವಿರುವುದರಿಂದ ಪಚನ ಕ್ರಿಯೆಯನ್ನು ಸುಲಭಗೊಳಿಸುತ್ತವೆ. ಅವರೇ ಕಾಳುಗಳು ಬಿ ಮತ್ತು ಸಿ ಅನ್ನಾಂಗಗಳನ್ನು ಒಳಗೊಂಡಿದ್ದು. ಇದರಲ್ಲಿ ಕೊಬ್ಬಿನ ಅಂಶ ಕಡಿಮೆ ಇರುವುದರಿಂದ ಹೃದ್ರೋಗಿಗಳೂ ಕೂಡ ಇದರ ಸವಿಯನ್ನು ಆನಂದಿಸಬಹುದಾಗಿದೆ. ಶ್ವಾಸಕೋಶವನ್ನು ಆರೋಗ್ಯವಾಗಿಡುವಲ್ಲಿ ಮೆದುಳಿನ ಕಾರ್ಯ ಕ್ಷಮತೆಯನ್ನು ಹೆಚ್ಚಿಸುವಲ್ಲಿ ಕ್ಯಾನ್ಸರ್ ಕಾಯಿಲೆ ಬರದಂತೆ ತಡೆಗಟ್ಟುವಲ್ಲಿ ಮೂಳೆಗಳ ಸಾಂದ್ರತೆಯನ್ನು ಹೆಚ್ಚಿಸುವಲ್ಲಿ ಇದು ಪ್ರಮುಖ ಪಾತ್ರವನ್ನು ವಹಿಸುತ್ತದೆ.

**ಆರೋಗ್ಯ ಭಾಗ್ಯ**

ಅದಲ್ಲದೆ ಎಲೆಯ ಕಷಾಯದ ಜೊತೆ ಸ್ವಲ್ಪ ನಿಂಬೆ ರಸ ಸೇರಿಸಿ ಕುರು ಅಥವಾ ಗೆಡ್ಡೆ ಇರುವ ಜಾಗಕ್ಕೆ ಹಚ್ಚಿದರೆ ಶೀಘ್ರದಲ್ಲಿ ಗುಣ ಕಾಣಬಹುದು.

ಅವರೆ ಎಲೆಗಳನ್ನು ಜಜ್ಜಿ ಅದರ ವಾಸನೆ ನೋಡಿದರೆ ಸಾಕು ತಲೆ ನೋವು ಕಡಿಮೆಯಾಗುವುದು ಎಂಬ ನಂಬಿಕೆ ಪೂರ್ವ ಆಫ್ರಿಕಾ ದೇಶದವರದ್ದು. ಮಗುವಿನ ಜನನ ಪ್ರಕ್ರಿಯೆ ಸರಾಗ ವಾಗಿ ನಡೆಯಲು ದಕ್ಷಿಣ ಆಫ್ರಿಕಾದ ಜನರು ಅವರೆಕಾಳಿನ ಕಷಾಯ, ಅವರೆ ಹೂವಿನ ಕಷಾಯ ಮಾಡಿ ಕುಡಿಸುತ್ತಾರೆ.

ಹೆಂಗಸರ ತಿಂಗಳ ತೊಂದರೆ ಸರಿ ಮಾಡಲು ಅವರೆ ಹೂವನ್ನು ತಮ್ಮ ನಿತ್ಯ ಅಹಾರದಲ್ಲಿ ಬಳಸಿದರೆ ತಿಂಗಳ ಚಕ್ರ ಸರಿಯಾಗುತ್ತದೆ. ಅವರೆ ಎಲೆ ಮತ್ತು ಹೂವನ್ನು ಜಜ್ಜಿ ಅಕ್ಕಿ ಹಿಟ್ಟು ಮತ್ತು ಅರಿಶಿನದ ಜೊತೆ ಎಕ್ಸಿಮಾ ಆಗಿರುವ ಜಾಗಕ್ಕೆ ಹಚ್ಚದರೆ ಶೀಘ್ರದಲ್ಲಿ ಚೇತರಿಕೆ ಕಂಡು ಬರುತ್ತದೆ. ಅವರೆಕಾಳಿನಿಂದ ಮಾಡಿದ ಯಾವುದೇ ಅಡುಗೆ ಅಥವಾ ತಿಂಡಿ ತಿಂದರೆ ಹೊಟ್ಟೆ ಬೇಗ ತುಂಬುವುದರಿಂದ ಇದು ತೂಕ ಇಳಿಕೆಗೆ ಅನುಕೂಲವಾಗುತ್ತದೆ ಹಾಗೂ ಅವರೇಕಾಯಿ ಚಳಿಗಾಲದಲ್ಲಿ ದೇಹದ ಉಷ್ಣಾಂಶವನ್ನು ಕಾಯ್ದಿಡುವುದರಲ್ಲಿಯೂ ಪ್ರಮುಖ ಪಾತ್ರವನ್ನು ವಹಿಸುವುದರಿಂದ ಯಾವುದೇ ವಯಸ್ಸಿನ ತಾರತಮ್ಯವಿಲ್ಲದೆ ಚಿಕ್ಕ ಮಕ್ಕಳಿಂದ ಮುದುಕರವರೆಗೂ ಇದನ್ನು ಸವಿಯಬಹುದಾಗಿದೆ.

**ಅವರೇಗೂ ಬೆಂಗಳೂರಿಗೂ ಇರುವ ಅವಿನಾಭಾವ ಸಂಬಂಧ:** ಒಮ್ಮೆ ಬೆಂಗಳೂರಿನ ನಿರ್ಮಾತೃ ನಾಡಪ್ರಭುಗಳೂ ಆದ ಕೆಂಪೇಗೌಡರು ಕುದುರೆ ಏರಿ ಹೊರಟರು. ಕಾಡಿನಲ್ಲಿ ದಾರಿತಪ್ಪಿ, ಹಸಿವು ಬಾಯಾರಿಕೆಯಿಂದ ಬಳಲುತ್ತಾ ಸಾಗುತ್ತಿದ್ದಾಗ ದೂರದಲ್ಲಿ ಒಂದು ಗುಡಿಸಲು ಕಣ್ಣಿಗೆ ಬಿತ್ತು. ಅದರ ಬಳಿಸಾರಿದ ಪ್ರಭುಗಳು, ಕುದುರೆಯಿಂದಿಳಿದು, ಗುಡಿಸಲಿನ ಬಾಗಿಲಿಗೆ ಬಂದು, ಯಾರಿದ್ದೀರಿ ಒಳಗೆ ನಮಗೆ ಬಹಳ ಹಸಿವಾಗುತ್ತಿದೆ. ತಿನ್ನಲು ಏನಾದರೂ ಇದ್ದಲ್ಲಿ ದಯಮಾಡಿ ನೀಡಿ ಎಂದು ವಿನಯದಿಂದ ಕೇಳಿಕೊಂಡರು. ಒಳಗೆ ಅಡುಗೆ ಮಾಡುತ್ತಿದ್ದ ಮುದುಕಿಯೊಬ್ಬಳು, ಅಡುಗೆ ಇನ್ನು ಆಗಬೇಕೆಂದೂ, ಸಾರು ಮಾಡಲು ಕಾಳುಗಳನ್ನು ಬೇಯಿಸಿರುವುದಾಗಿಯೂ, ಕೆಲ ಕಾಲ ಕಾದರೆ ಅಡುಗೆ ಸಿದ್ಧವಾಗುವುದೆಂದೂ ತಿಳಿಸಿದಳು. ಪ್ರಭುಗಳಿಗೆ ಹಸಿವು ತಡೆಯದಾಗಿತ್ತು. ಅವರು ಈ ತತ್ಕ್ಷಣದಲ್ಲಿ ಏನಾದರೂ ನೀಡಬೇಕೆಂದು, ಬಹಳ ಹಸಿವಾಗುತ್ತಿದೆಯೆಂದೂ ಮತ್ತೆ ಹೇಳಿದಾಗ, ಆ ಮುದುಕಿ ಒಂದು ಮಣ್ಣಿನ ಸಾವೆಯ ತುಂಬಾ ಉಪ್ಪು ಹಾಕಿ ಬೇಯಿಸಿದ



ಅವರೆಕಾಳುಗಳನ್ನು ತಂದು ಪ್ರಭುಗಳಿಗೆ ನೀಡಿದಳು. ಹಸಿವಿನಿಂದ ಕಂಗೆಟ್ಟಿದ್ದ ಪ್ರಭುಗಳು ಆ ಕಾಳುಗಳನ್ನು ತಿಂದಾಗ ಅದು ಅಮೃತಕ್ಕಿಂತಲೂ ರುಚಿಯೆನಿಸಿತು. ಅಷ್ಟು ಚೆನ್ನಾಗಿ ಬೆಂದ ಕಾಳುಗಳ ಪ್ರದೇಶವನ್ನು 'ಬೆಂದಕಾಳೂರು' ಎಂದು ಕರೆದರು. ಈ ಸ್ಥಳವೇ ಮುಂದೆ ಬೆಂಗಳೂರಾಗಿ ಪ್ರಸಿದ್ಧಿಯನ್ನು ಪಡೆಯಿತು. ಬ್ರಿಟಿಷರ ಆಳ್ವಿಕೆಯಲ್ಲಿ ಬ್ಯಾಂಗಲೋರ್ ಆಗಿದ್ದು, ಪ್ರಸ್ತುತ 'ಬೆಂಗಳೂರು' ಎಂದೆನಿಸಿಕೊಂಡಿದೆ. ಒಟ್ಟಿನಲ್ಲಿ ಈ ಅವರೆಕಾಳನ್ನು ರಾಜರಿಂದ ಹಿಡಿದು ಜನ ಸಾಮಾನ್ಯರವರೆಗೂ ಇಷ್ಟಪಡದವರೇ ಇಲ್ಲ ಎಂದರೆ ತಪ್ಪಾಗಲಾರದು.

ಅವರೆಕಾಯಿ ಕೆಲಮಟ್ಟಿಗೆ ವಾಯುವಿನ ಅಂಶವನ್ನು ಒಳಗೊಂಡಿದೆ. ಕೆಲವರ ದೇಹದಲ್ಲಿ ವಾತವನ್ನು ಹೆಚ್ಚಿಸುತ್ತದೆ. ಅಸಿಡಿಟಿ ಸಮಸ್ಯೆಗೆ ಕಾರಣವಾಗುತ್ತದೆ. ಹಾಗಂತ ಇದನ್ನು ತಿನ್ನದೆ ಕೆಟ್ಟವರು ಉಂಟೇ! ಇದಕ್ಕೆಂದೇ ಅವರೆಕಾಯಿ ಅಡುಗೆಯನ್ನು ಮಾಡುವಾಗ ಇಂಗು, ಬೆಳ್ಳುಳ್ಳಿ ಹಾಗೂ ಶುಂಠಿಗಳನ್ನು ಖಡಾಖಂಡಿತವಾಗಿ ಬಳಸಲಾಗುತ್ತದೆ. ಈ ಒಂದು ದೋಷದ ಹೊರತಾಗಿ ಉಳಿದೆಲ್ಲಾ ಉತ್ತಮ ಅಂಶಗಳನ್ನು ಒಳಗೊಂಡಿರುವುದರಿಂದ ಇದು ಸರ್ವಕಾಲಿಕ, ಸರ್ವಮಾನ್ಯ ತರಕಾರಿ ಎನ್ನುವುದರಲ್ಲಿ ಎರಡು ಮಾತಿಲ್ಲ.



ಸೌಮ್ಯಸನತ್

## ಪದಬಂಧ



### ಎಡದಿಂದ ಬಲಕ್ಕೆ.....

2. ನಿಜ ಜೀವನದಲ್ಲಿ ಖಳನಾದ, ನಾಯಕ ನಟನೊಬ್ಬನ ಹೆಸರಿದು.....(3)
5. ಎಳ್ಳಿನಷ್ಟೂ ಕುಂದಿಲ್ಲದ ರೂಪದ, ದೇವಲೋಕದ ಅಪ್ಸರೆಯೊಬ್ಬಳು ಚೆಲ್ಲಾಪಿಲ್ಲಿಯಾಗಿದ್ದಾಳೆ.(4)
7. ಸಂಪಿಗೆಯ ಮೂಗಿನವಳಿಗೆ ಈ ಹೆಸರಿಡಬಹುದೆ...(2)
8. ಈ ಜಗತ್ತು/ವಿಶ್ವಕ್ಕೆಲ್ಲ ಒಡೆಯನಾದವನಿಗೆ ಈ ಹೆಸರು.....(4)
9. ಶಿವನ ಇನ್ನೊಂದು ಹೆಸರು.....(2)
11. ಮುಕ್ಕಣ್ಣನನ್ನು ಈ ಹೆಸರಿನಿಂದ ಕರೆಯಿರಿ.....(3)
12. ಒಳ್ಳೆಯದು ಎನ್ನುವ ಅರ್ಥ ಇರುವ ಹೆಸರು ಹಿಂದುಮುಂದಾಗಿದೆ.....(2)
14. ಮಿಂಚಿನ ಬಳ್ಳಿಯಂತಿರುವವಳಿಗೆ ಇಂಥ ಚೆಂದದೊಂದು ಹೆಸರು.....(4)
17. ಮುನಿಯೊಬ್ಬನ ಹೆಸರಿಲ್ಲಿ ಹಿಂದುಮುಂದಾಗಿದೆ.....(2)
18. 'ಆಸೆಯೇ ದು:ಖಕ್ಕೆ ಮೂಲ' ಎಂದವನ ಸತಿಯ ಹೆಸರಿದು.....(4)
19. ಮಗ(ಳು) ಎಂಬರ್ಥದ ಹೆಸರಿದು.....(3)

### ಮೇಲಿನಿಂದ ಕೆಳಕ್ಕೆ.....

1. ಹುಡುಗನೊಬ್ಬನ ಈ ಹೆಸರಲ್ಲಿ 'ಪ್ರಪಂಚ'ವಿದೆ.....(3)
2. ತ್ರಿಮೂರ್ತಿಗಳೇ ಒಟ್ಟಾಗಿ ಅವತಾರವೆತ್ತಿದ ಗುರುವನ್ನು ಪ್ರೀತಿಯಿಂದ ಹೀಗೆ ಕರೆಯಿರಿ......(2)
3. ಗಾಳಿ ಎಂಬರ್ಥದ ಹೆಸರಿಲ್ಲಿ ಚೆಲ್ಲಾಪಿಲ್ಲಿಯಾಗಿದೆ.....(3)
4. ಅನುಗ್ರಹ/ಕರುಣೆ ಎಂಬರ್ಥದ ಹೆಸರಿದು.....(2)
6. ಮರಗಳ ಹಸಿರೇ ಉಸಿರಾದವರ ಹೆಸರಿದು.....(3)
7. ಶಶಿಯಂತೆ ಬೆಳಕು ಬೀರುವವನ ಹೆಸರಿದು.....(4)
8....... ನಿಮ್ಮಿಷ್ಟದ ಹೆಸರಿದು..........(5)
10. ನಾಶವಾಗದಿರುವವನ ಹೆಸರೇ ಇದು ಅಡಿಮೇಲಾಗಿದೆ.....(4)
13. 'ದೇವನಾಂಪ್ರಿಯ' ಎಂದು ಬಿರುದಾಂಕಿತನಾದವನ ಹೆಸರು ಚೆಲ್ಲಾಪಿಲ್ಲಿಯಾಗಿದೆ.....(3)
15. ಋತುವೊಂದರ ಹೆಸರಿದು.....(3)
16. ಧೀರನೊಬ್ಬನನ್ನು ಹೀಗೆ ಕರೆಯಿರಿ......(2)
17. ತ್ರಿಶಂಕು ಸ್ವರ್ಗದಲ್ಲಿರುವವಳ ಹೆಸರೆ ಇದು.....(2)
18. ಗೆಲುವು ಎಂಬರ್ಥದ ಹೆಸರಿಲ್ಲಿ ಅಡಿಮೇಲಾಗಿದೆ....(2)



ಜ್ಯೋತಿ ರಾಜೇಶ್

# ಒಳ್ಳೆಯವರಿಗೇಕೆ ಸಾವು ಬೇಗ ಬರುತ್ತೆ...

ನಮ್ಮ ಹತ್ತಿರದವರು, ಬಂಧುಗಳು, ಸ್ನೇಹಿತರು ಅಥವಾ ನಮಗೆ ಗೊತ್ತಿರುವವರು ಯಾರಾದರೂ ನಮ್ಮನ್ನಗಲಿದಾಗ ಅಂತಹ ವ್ಯಕ್ತಿ ಬಗ್ಗೆ ಸಾಧ್ಯವಾದರೆ ಎಲ್ಲರೂ ನಾಲ್ಕು ಒಳ್ಳೆಯದನ್ನೇ ಮಾತನಾಡಿ ಸಂತಾಪ ವ್ಯಕ್ತಪಡಿಸುತ್ತಾರೆಯೇ ವಿನಃ ಸಾಮಾನ್ಯವಾಗಿ ಸಾವಿನ ಸಮಯದಲ್ಲಿ ಯಾರೂ ಕೆಟ್ಟದಾಗಿ ಮಾತನಾಡುವುದಿಲ್ಲ. ಅದರಲ್ಲೂ ಸತ್ತ ಮನುಷ್ಯ ತುಂಬಾ ಒಳ್ಳೆಯವನಾಗಿದ್ದು, ಅತ್ಯಂತ ಸಂಭಾವಿತನಾಗಿ, ನಾಲ್ಕು ಜನರಿಗೆ ಬೇಕಾದವನಾಗಿ ಬದುಕಿದ್ದು ತನ್ನ ದೇಹದಲ್ಲಿ ಉಸಿರಿರುವವರೆಗೂ ಯಾರಿಗೂ ಯಾವ ಕೇಡನ್ನೂ ಬಯಸದೇ ಇರುವಂಥವನಾಗಿದ್ದಲ್ಲಿ ಅವರನ್ನು ಮನಸಾರೆ ಕೊಂಡಾಡಿ ಅವರ ಸದ್ಗುಣಗಳನ್ನು ಪಟ್ಟಿ ಮಾಡುತ್ತಾ ಸ್ಮರಿಸುತ್ತಾರೆ, ಕಂಬನಿ ಮಿಡಿಯುತ್ತಾರೆ.

ಅದಕ್ಕಿಂತ ಮುಖ್ಯವಾಗಿ ಅದೇ ಒಬ್ಬ ಒಳ್ಳೆಯ, ಸಂಭಾವಿತ ಮನುಷ್ಯ ತುಂಬಾ ತನ್ನ ಚಿಕ್ಕ ವಯಸ್ಸಿನಲ್ಲೋ, ಅಕಾಲಿಕವಾಗಿಯೋ, ಆಕಸ್ಮಿಕವಾಗಿಯೋ ಇದ್ದಕ್ಕಿದ್ದಂತೆ ಮರಣವನ್ನಪ್ಪಿದಾಗ ಎಲ್ಲರ ಬಾಯಲ್ಲಿ ಬರುವ ಸಾಮಾನ್ಯ ಮಾತೆಂದರೆ " ಆ ದೇವರು ಒಳ್ಳೆಯವರನ್ನೇ ಇಷ್ಟು ಬೇಗ ಯಾಕೆ ಕರೆದುಕೊಳ್ಳುತ್ತಾನೆ .. ಎಂಬುದು !

ಈ ಪ್ರಪಂಚದಲ್ಲಿ ಎಷ್ಟೋ ಜನ ಕ್ರೂರಿಗಳು, ಕೆಟ್ಟವರು, ಭ್ರಷ್ಟರು, ದ್ರೋಹಿಗಳು, ಪಾಪಿಗಳು ಹಾಗೂ ಎಲ್ಲರಿಗೂ ಕೆಟ್ಟದ್ದನ್ನೇ ಮಾಡಿದವರು ಸಾಕಷ್ಟು ಸಂಖ್ಯೆಯಲ್ಲಿ ಇದ್ದರೂ ಅವರನ್ನು ಬಿಟ್ಟು ಇಷ್ಟು ಒಳ್ಳೆಯ ವ್ಯಕ್ತಿಗೇಕೆ ಇಷ್ಟು ಬೇಗ ಸಾವಿನ ದುರಂತ ಎಂಬ ಉದ್ಗಾರಗಳೂ ಸಹಾ ಬಹುತೇಕ ಎಲ್ಲರ ಬಾಯಿಂದ ಬರುವಂಥವುಗಳೇ !

ಆ ದೇವರಿಗೂ ಒಳ್ಳೆಯವರೆಂದರೆ ಪ್ರೀತಿ ಹೆಚ್ಚು . ಹೀಗಾಗಿ ಒಳ್ಳೆಯವರನ್ನು ಬೇಗ ತನ್ನ ಬಳಿಗೆ ಕರೆಸಿಕೊಳ್ಳುತ್ತಾನೆ ಎಂಬ ಮಾತೂ ಸಹಾ ಸರ್ವೇ ಸಾಮಾನ್ಯ. ! ಇನ್ನೂ ಕೆಲವರಂತೂ ಒಬ್ಬ ಒಳ್ಳೆಯ ವ್ಯಕ್ತಿ ಸಾಯಬಾರದ ವಯಸ್ಸಿನಲ್ಲಿ ದಾರುಣವಾಗಿ ಸಾವನ್ನಪ್ಪಿದಾಗ ಅಥವಾ ಘೋರ ದುರಂತದಲ್ಲಿ ಪ್ರಾಣ ಕಳೆದುಕೊಂಡಾಗ ಅವರನ್ನು ಹತ್ತಿರದಿಂದ ಬಲ್ಲ ಜನ ಭಾವಾವೇಶದಲ್ಲಿ ದೇವರಿಗೇ ಧಿಕ್ಕಾರ ಹಾಕಿ ದೇವರನ್ನೇ ಶಪಿಸುವ ಹಂತಕ್ಕೂ ಹೋಗುತ್ತಾರೆ. ಅಷ್ಟೇ ಅಲ್ಲ, ಅಂಥಾ ಸಂದರ್ಭಗಳಲ್ಲಿ ದೇವರ ಅಸ್ತಿತ್ವದಲ್ಲೇ ಪೂರ್ಣ ನಂಬಿಕೆ ಕಳೆದುಕೊಳ್ಳುತ್ತಾರೆ.

ಈ ಹಿನ್ನೆಲೆಯಲ್ಲಿ ಒಳ್ಳೆಯವರನ್ನೇ ದೇವರು ಬೇಗ ಏಕೆ ತನ್ನಲ್ಲಿಗೆ ಕರೆಸಿಕೊಳ್ಳುತ್ತಾನೆ ಎಂಬ ಪ್ರಶ್ನೆ ಅತಾರ್ಕಿಕವೆನಿಸಿದರೂ ಅವಾಸ್ತವವಲ್ಲ.

ಬಹುಶಃ ಸಾವೆಂಬುದು ಈ ಭೂಮಿ ಮೇಲಿನ ಅತ್ಯಂತ ನಿರ್ದಯಿ ರೂಪ, ಯಾರೂ ಬಯಸದ ಅತಿಥಿ ಮಾತ್ರವೇ ಅಲ್ಲ ಅದೊಂದು ಬೇಧಿಸಲಾಗದ ಗುಟ್ಟು, ವಿಸ್ಮಯ, ಕೌತುಕ, ಅನಿರೀಕ್ಷಿತ, ಆಕಸ್ಮಿಕ ಹಾಗೂ ಈ ಪ್ರಪಂಚದಲ್ಲಿ ಈವತ್ತಿನ ತನಕ ಎಂಥಾ ವಿಜ್ಞಾನಿಯೂ, ಮೇಧಾವಿಯೂ ಕಂಡುಕೊಳ್ಳಲಾಗದ ನಿಗೂಢ ರಹಸ್ಯ. ಅದು ಯಾವಾಗ ಯಾರಿಗೆ, ಹೇಗೆ, ಏಕೆ, ಯಾವ ರೂಪದಲ್ಲಿ, ಯಾವ ಸಮಯದಲ್ಲಿ ಆವರಿಸಿಕೊಳ್ಳುತ್ತದೆಯೆಂಬ ಬೇಧಿಸಲಾಗದ ಗುಟ್ಟನ್ನು ಈ ದುನಿಯಾ ಉದ್ಭವಿಸಿದ ಕ್ಷಣದಿಂದ ಇಲ್ಲಿಯವರೆಗೂ ಯಾರಿಗೂ ಬಿಟ್ಟುಕೊಟ್ಟಿಲ್ಲ . ಇಂದು ತನ್ನ ಪ್ರಚಂಡ ಬುದ್ಧಿಶಕ್ತಿಯಿಂದ ಪ್ರಕೃತಿಯ ಎಲ್ಲಾ ಮೂಲಕ್ಕೂ ಕೈಹಾಕಿ ಬೀಗುತ್ತಿರುವ ಮನುಷ್ಯ ಈ ಒಂದು ಗುಟ್ಟನ್ನು ಅರಿಯುವಂಥವನಾಗಿದ್ದರೆ, ಬಹುಶಃ ಅವನಾಡುವ ಆಟಗಳಿಗೆ ಮಿತಿಯೇ ಇರುತ್ತಿರಲಿಲ್ಲವೆಂಬ ಕಾರಣಕ್ಕೆ ಅದನ್ನು ಆ ದೇವರು ತನ್ನಲ್ಲೇ ಇಟ್ಟುಕೊಂಡಿದ್ದಿರ ಬಹುದು !







ಅಸಲಿಗೆ ಸಾವೆಂಬುದು ನಿಜವಾದ ಅರ್ಥದಲ್ಲಿ ಎಲ್ಲರನ್ನೂ ಸಮಾನವಾಗಿ ಕಾಣುವ ಸರಳ ಸತ್ಯ. ಅದಕ್ಕೆ ಬಡವ– ಬಲ್ಲಿದ, ಶ್ರೀಮಂತ– ಭಿಕ್ಷುಕ, ಕರಿಯ– ಬಿಳಿಯ, ಬಾಲಕ –ಮುದುಕ , ಸೆಲೆಬ್ರಿಟಿ– ಸಾಮಾನ್ಯ, ಹಿಂದೂಸ್ತಾನಿ– ಪಾಕಿಸ್ತಾನಿ ಎಂಬ ಬೇಧವಾಗಲೀ ಅಥವಾ ಬ್ರಾಹ್ಮಣ, ಶೂದ್ರ, ದಲಿತ ಎಂಬ ಜಾತಿ ತರತಮವಾಗಲೀ ಇಲ್ಲವೇ ಹಿಂದೂ, ಮುಸ್ಲೀಂ, ಕ್ರೈಸ್ತ, ಬೌದ್ಧ ಎಂಬ ಧರ್ಮಾಧಾರಿತ ವ್ಯತ್ಯಾಸಗಳಾಗಲೀ ಇರುವುದಿಲ್ಲ. ಸಾವಿನ ಕೋರ್ಟಿನಲ್ಲಿ ಎಲ್ಲ ಜೀವಿಗಳೂ ಒಂದೇ , ಎಲ್ಲರಿಗೂ ಒಂದೇ ವಿಧದ ಕಾನೂನು , ಒಂದೇ ಥರದ ಟ್ರೀಟ್ ಮೆಂಟು.

ಇಂಥಾ ಸಾವೆಂಬ ಸಾವಿಗೆ ಆಯಸ್ಸು ಮುಗಿದ ವ್ಯಕ್ತಿಯನ್ನು ತಾನು ಮುಲಾಜಿಲ್ಲದೇ ಸೆಳೆಯುವಾಗ ಆತ ಚಿಕ್ಕವನಾ, ದೊಡ್ಡವನಾ ಅಥವಾ ಅವನು ಒಳ್ಳೆಯವನಾ ಕೆಟ್ಟವನಾ ಎಂಬ ವಿಶ್ಲೇಷಣೆ ಬಗೆಗೆ ಕಿಂಚಿತ್ತೂ ತಲೆ ಕೆಡಿಸಿಕೊಳ್ಳುವುದಿಲ್ಲ. ಉಸಿರಾಡುವ ಜೀವಿಯ ಆಯಸ್ಸು ಮುಗಿದಿರುವುದೊಂದೇ ಅದಕ್ಕೆ ಎಲಿಜಿಬಲ್ ಬೆಂಚ್ ಮಾರ್ಕು, ಮಿಕ್ಕ ಗುಣ ವಿಶೇಷಣಗಳಾವುವೂ ಆ ವಿಧಿಯನ್ನು ಧೃತಿಗೆಡಿಸಲಾರವು.

ಆದರೆ ನಮ್ಮ ನಡುವೆಯೇ ಇದ್ದ ಒಬ್ಬ ಒಳ್ಳೆಯ ಮನುಷ್ಯ, ಅದರಲ್ಲೂ ಇನ್ನೂ ಸಾಕಷ್ಟು ಕಾಲ ಬಾಳಿ ಬದುಕಬೇಕಾದ ವ್ಯಕ್ತಿ ಅಕಾಲಿಕವಾಗಿ ಸಾವಿನ ದುರಂತಕ್ಕೆ ಶರಣಾದಾಗ " ಸಜ್ಜನರಿಗೇ ಏಕೇ ಈ ರೀತಿಯಾದ ದುರಂತಗಳು ಸಂಭವಿಸುತ್ತವೆ " ಎಂಬ ಭಾವುಕತೆ ತಲೆಯೊಳಗೆ ತಕಧಿಮಿ ಆಡುವುದು ಸಹಜ. ಆ ಸಂದರ್ಭದಲ್ಲಿ ಸಾವಿನ ಗುಟ್ಟಿನ ಬಗೆಗಿನ ಅಸಲಿ ತರ್ಕವಾಗಲೀ ಅಥವಾ ಆ ಕುರಿತಾದ ವಾಸ್ತವತೆಯಾಗಲೀ ನಮ್ಮ ನೇರದ ವಿಶ್ಲೇಷಣೆಗೆ , ಮನದ ಮಾತಿನ ಮೀಮಾಂಸೆಗೆ ಒಳಪಡುವುದಿಲ್ಲ. ಅನೇಕ ಸಜ್ಜನರು ಅಕಾಲಿಕವಾಗಿ ಅಗಲಿದಾಗ ಈ " ಸಾವು ನ್ಯಾಯವಲ್ಲ " ಎಂದು ಅನಿಸಿದ್ದುಂಟು. ಹಾಗಾಗಿಯೇ ಸಾವನ್ನು ಕ್ರೂರಿಗೆ, ರಕ್ಕಸನಿಗೆ, ನಿರ್ದಯಿಗೆ, ಕಟುಕನಿಗೆ ಹೋಲಿಸುವುದುಂಟು. ದೇವರಿಗೇ ಧಿಕ್ಕಾರ ಕೂಗಿದ್ದೂ ಉಂಟು ! ಆದರೆ ಈ ಯಾವ ಕಟು ಮಾತುಗಳ ಬೌಂಡರಿ , ಸಿಕ್ಸರ್ ಗಳ ಆಕ್ರೋಶಕ್ಕೆ ವಿಧಿಯೆಂಬುದು ಕೇರೇ ಮಾಡೋಲ್ಲ. "ನೀವು ಏನಾದರೂ ಅಂದುಕೊಳ್ಳಿ ನನ್ನ ಕೆಲಸ ನಾನು ಮಾಡುತ್ತಾ ಮುಂದುವರೆಯುತ್ತೇನೆ" ಎಂಬುದೊಂದೇ ಅದಕ್ಕೆ ಗೊತ್ತಿರುವ ನಿತ್ಯ ಕಾಯಕ.

ಒಳ್ಳೆಯವರು, ಹೆಚ್ಚುಕಾಲ ಬದುಕಬೇಕಿತ್ತು , ಕ್ರೂರಿಗಳು , ಮನುಷ್ಯ ವಿರೋಧಿಗಳು ,ಕೆಟ್ಟವರಿಗೆ ಹೆಚ್ಚೆಚ್ಚು ಸಾವು ಬರಬೇಕಿತ್ತು ಎಂಬ ನಮ್ಮ ಬಹುತೇಕ ಜನರ ಆಶಯವೇನಾದರೂ ನಿಜವಾಗಿದ್ದಲ್ಲಿ.....ನೆನಪಿಡಿ, ಈ ಭೂಮಿ ಮೇಲಿನ ಇಂದಿನ ಜನಸಂಖ್ಯೆಯಲ್ಲಿ ಕನಿಷ್ಠ ಮುಕ್ಕಾಲು ಭಾಗದಷ್ಟು ಜನಸಂಖ್ಯೆ ಇಲ್ಲವಾಗಿರುತ್ತಿತ್ತು. !!

ವಿಧಿಯಾಟವೇನೆಂದು ಯಾರೂ ತಿಳಿದವರಿಲ್ಲ, ತಿಳಿಯಲು ಸಾಧ್ಯವೂ ಇಲ್ಲ. ಹುಟ್ಟಿನ ದಾನ, ಸಾವಿನ ಗುಟ್ಟು ಈ ಎರಡರ ಕೌತುಕದ ನಡುವೆ ಇರುವ ನಾಲ್ಕು ದಿನದ ಬದುಕಿನಲ್ಲಿ ಸಾವಿನ ಬಗೆಗಿನ ಅತಾರ್ಕಿಕ ತರ್ಕಕ್ಕಿಂತ ಮಾನವೀಯತೆಯುಳ್ಳ ಮನುಷ್ಯರಂತೆ, ನಾಲ್ಕು ಜನರಿಗೆ ಉಪಯೋಗವಾಗುವಂತೆ, ಸಮಾಜಕ್ಕೆ ಹೊರೆಯಾಗದಂತೆ, ದ್ವೇಷ, ಪ್ರತಿಷ್ಠೆ, ದುರಹಂಕಾರಗಳನ್ನು ತೊರೆದು ಆ ಜಾಗದಲ್ಲಿ ಪ್ರೀತಿ, ಸ್ನೇಹ, ವಿಶ್ವಾಸಗಳನ್ನು ಹಂಚುತ್ತ ಉಸಿರಾಡುವ ತನಕ ಆತ್ಮಸ್ಥೈರ್ಯದಿಂದ ಬದುಕು ಕಂಡುಕೊಳ್ಳುವುದರಲ್ಲೇ ಜೀವನದ ಸಾರ್ಥಕ್ಯ ಅಡಗಿರಬಹುದು.!

* ಮರೆಯುವ ಮುನ್ನ *

ನಾವು ಚಿಕ್ಕವರಿದ್ದಾಗಿನಿಂದಲೂ "ಒಳ್ಳೆಯವರಿಗೇ ಏಕೆ ಬೇಗ ಸಾವು ಬರುತ್ತೆ



ಹಿರಿಯೂರು ಪ್ರಕಾಶ್

" ಎನ್ನುವ ಪ್ರಶ್ನೆಯನ್ನು ಯಾರಾದರೂ ಹಿರಿಯರ ಮುಂದಿಟ್ಟಾಗ ಸಿಗುತ್ತಿದ್ದ ಉತ್ತರಗಳಲ್ಲಿ ಕೆಲವು ಇಲ್ಲಿವೆ.

"ದೇವರಿಗೂ ಒಳ್ಳೆಯವರೆಂದರೆ ತುಂಬಾ ಪ್ರೀತಿ. ಹಾಗಾಗಿ ಅವರನ್ನು ಬಹುಬೇಗ ತನ್ನಲ್ಲಿಗೆ ಕರೆಸಿಕೊಳ್ಳುತ್ತಾನೆ."

"ಈ ಜಗತ್ತಿನ ತುಂಬಾ ಇರುವ. ಕೆಟ್ಟಶಕ್ತಿಗಳೊಂದಿಗೆ ಒಳ್ಳೆಯವರು ಇರಬಾರದೆಂದು ಆ ದೇವರು ಅವರನ್ನು ದುಷ್ಟರಿಂದ ರಕ್ಷಿಸಲು ತನ್ನಲ್ಲಿಗೆ ಬೇಗ ಕರೆಸಿಕೊಳ್ಳುತ್ತಾನೆ."

" ತೋಟದಲ್ಲಿ ಬೆಳೆದಿರುವ ಅನೇಕ ಹೂಗಳಲ್ಲಿ ಮೊದಲು ಸುಂದರವಾದ ಹೂವನ್ನೇ ಕೀಳುತ್ತೇವಲ್ಲವೇ.. ಹಾಗೆಯೇ ಒಳ್ಳೆಯವರೇ ಮೊದಲು ಇಲ್ಲವಾಗುತ್ತಾರೆ."

ಈ ರೀತಿಯಾದ ಸಮಾಧಾನಕರ ಮಾತುಗಳು ಸಾಂತ್ವನದ ರೂಪದಲ್ಲಿ ಬರುವುದುಂಟು. ಆದರೆ ಒಳ್ಳೆಯವರನ್ನು ಬೇಗನೇ ಕಳೆದುಕೊಂಡ ದುಃಖವಿದೆಯಲ್ಲಾ ಅದನ್ನು ಈ ಯಾವುದರಿಂದಲೂ ಸರಿದೂಗಿಸಲಾಗದು, ಎದೆಯೊಳಗಿನ ಭಾರವನ್ನು ಕಡಿಮೆ ಮಾಡಲಾಗದು.

ಒಳ್ಳೆಯತನದಿಂದ ಜೀವಿಸಿದ ವ್ಯಕ್ತಿ ಕೇವಲ ಭೌತಿಕವಾಗಿ ನಮ್ಮನ್ನು ಅಗಲಬಹುದೇ ವಿನಃ ಅಂಥವರ ನೆನಪಿನಲ್ಲಿ, ಅವರ ವ್ಯಕ್ತಿತ್ವದಲ್ಲಿ, ಸಾಧನೆಯಲ್ಲಿ, ಒಳ್ಳೆಯತನದಲ್ಲಿ ಹಾಗೂ ಅವರು ಜೀವನದುದ್ದಕ್ಕೂ ಬದುಕಿದ ಸಾರ್ಥಕ ರೀತಿಯಲ್ಲಿ ಅವರು ಚಿರಕಾಲ ಎಲ್ಲರ ಮನಗಳಲ್ಲಿ ಅನುಕ್ಷಣವೂ ಜೀವಿಸುತ್ತಲೇ ಇರುತ್ತಾರೆ. ಅದೊಂಥರ ಒಬ್ಬ ವ್ಯಕ್ತಿಯ ಉಸಿರು ನಿಂತ ಮೇಲೂ ಅವನು ಅನೇಕರ ಉಸಿರುಗಳಲ್ಲಿ ಸದಾ ಉಸಿರಾಡುತ್ತಲೇ ಇರುವಂತಹ ಅವ್ಯಕ್ತ ಭಾವ, ಅನನ್ಯ ಅನುಭೂತಿ .!

## ಕನ್ನಡದ ಋಷಿ ರೆವರೆಂಡ್ ಫರ್ಡಿನ್ಯಾಂಡ್ ಕಿಟ್ಟೆಲ್

ರೆವರೆಂಡ್ ಫರ್ಡಿನಾಂಡ್ ಕಿಟ್ಟೆಲ್ ಅವರು 7 ಏಪ್ರಿಲ್ 1832ರಂದು ಜರ್ಮನಿಯ ಈಸ್ಟ್ ಫ್ರಿಸಿಯಾದ ರೆಸ್ಟರ್ಹಾಫ್ ಎಂಬ ಚಿಕ್ಕ ಊರಲ್ಲಿ ಜನಿಸಿದರು. ಆ ಕಾಲದ ಯೂರೋಪಿನ ಶಿಕ್ಷಣ ವ್ಯವಸ್ಥೆ ಧರ್ಮಶಾಸ್ತ್ರ, ವಿದೇಶಿ ಭಾಷೆಗಳು ಮತ್ತು ಕ್ಲಾಸಿಕ್ ಸಾಹಿತ್ಯಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿತ್ತು. ಕಿಟ್ಟೆಲ್ ಅವರ ತಂದೆ ಗಂಭೀರವಾದ ಧಾರ್ಮಿಕ ಹಿನ್ನೆಲೆಯವರಾಗಿದ್ದರಿಂದ, ಬಾಲ್ಯದಲ್ಲೇ ಸಾಹಿತ್ಯ, ಕಾವ್ಯ, ಭಾಷಾ, ಸಂಗೀತ, ಛಂದಸ್ಸು, ಶಬ್ದಗಳ ರಚನೆಗಳು ಇವರಿಗೆ ಆಕರ್ಷಣೆ ತಂದಿತು.

ಕಿಟ್ಟೆಲ್ ಬೆಳೆಯುತ್ತಿದ್ದ ಕಾಲದಲ್ಲಿ ಜರ್ಮನಿಯಲ್ಲಿ ಸಂಶೋಧನೆ, ಭಾಷಾಶಾಸ್ತ್ರ ಮತ್ತು ಪ್ರಾಚೀನ ಸಂಸ್ಕೃತಿಗಳ ಅಧ್ಯಯನಕ್ಕೆ ಉತ್ತೇಜನ ದೊರೆಯುತ್ತಿದ್ದ ಸಮಯ. ಹಾಗಾಗಿ, ಬಾಲ್ಯದಲ್ಲೇ ಅವರು ಜರ್ಮನ್, ಲ್ಯಾಟಿನ್, ಗ್ರೀಕ್ ಮತ್ತು ಹಲವು ಯೂರೋಪಿಯನ್ ಭಾಷೆಗಳನ್ನು ಕಲಿತಿದ್ದರು.

ಸುಮಾರು 1850ರಲ್ಲಿ, ಕಿಟ್ಟೆಲ್ ಅವರು ಸ್ವಿಟ್ಜರ್ಲ್ಯಾಂಡ್‌ನ ಪ್ರಸಿದ್ಧ ಬಸೇಲ್ ಮಿಷನ್ ಇನ್ಸ್ಟಿಟ್ಯೂಟ್‌ನಲ್ಲಿ ಪ್ರವೇಶ ಪಡೆದರು. ಅಲ್ಲಿ ಧರ್ಮಶಾಸ್ತ್ರದ ಜೊತೆಗೆ ಪುರಾತನ ಭಾಷೆಗಳು ತತ್ವಶಾಸ್ತ್ರ,, ವ್ಯಾಕರಣಶಾಸ್ತ್ರ, ಭಾಷಾ ತತ್ತ್ವಗಳು,ಮತ್ತು ಸಂಸ್ಕೃತ ಅಧ್ಯಯನ ಇವುಗಳ ಮೇಲೆ ವಿಶೇಷ ತರಬೇತಿ ತೆಗೆದುಕೊಂಡರು.

1853ರಲ್ಲಿ ತರಬೇತಿ ಪೂರ್ಣವಾದ ನಂತರ ಅವರ ಸೇವೆಗೆ ಭಾರತವನ್ನು ಆಯ್ಕೆ ಮಾಡಲಾಯಿತು. ಆ ಕಾಲದ ಯೂರೋಪಿನಲ್ಲಿ ಭಾರತವನ್ನು ಅನೇಕ ಹೊಸ ಸಂಸ್ಕೃತಿಗಳ, ಭಾಷೆಗಳ ಮತ್ತು ಜ್ಞಾನಪರಂಪರೆಗಳ ನೆಲವೆಂದು ನೋಡಲಾಗುತ್ತಿತ್ತು. ಇದೇ ಕಾರಣಕ್ಕೆ ಭಾರತದೊಂದಿಗೆ ಸಂಪರ್ಕ ಕಿಟ್ಟೆಲ್ ಅವರ ಜೀವನದ ದಿಕ್ಕನ್ನೇ ಬದಲಿಸಿತು.

ಕಿಟ್ಟೆಲ್ ಅವರು 1853ರಲ್ಲಿ ಮಂಗಳೂರಿಗೆ ಬಂದರು. ಬಸೇಲ್ ಮಿಷನ್ ಸಂಸ್ಥೆ ಮಂಗಳೂರು ಮತ್ತು ದಕ್ಷಿಣ ಕನ್ನಡ ಪ್ರದೇಶದಲ್ಲಿ ಶಾಲೆಗಳು ಮತ್ತು ಮಿಷನ್ ಕೇಂದ್ರಗಳನ್ನು ಸ್ಥಾಪಿಸಿತ್ತು. ಮಿಷನರಿ ಕಾರ್ಯದೊಂದಿಗೆ ಸ್ಥಳೀಯ ಭಾಷೆಯನ್ನು ತಿಳಿದುಕೊಳ್ಳುವುದು ಅತ್ಯಗತ್ಯವಾಗಿತ್ತು. ಕಿಟ್ಟೆಲ್ ಅದನ್ನು ಕೇವಲ ಸಂವಹನಮಾರ್ಗವಾಗಿ ನೋಡದೆ ಭಾವನೆ, ಸಂಸ್ಕೃತಿ ಮತ್ತು ಮಾನವ ಜೀವನದ ಅಭಿವ್ಯಕ್ತಿ ಎಂದು ಅರ್ಥಮಾಡಿಕೊಂಡರು.

ಕನ್ನಡ ಕಲಿಯಲು ಅವರು ಅನುಸರಿಸಿದ ವಿಧಾನಗಳು ಇಂದಿಗೂ ಮಾದರಿಯಾಗಿವೆ . ಅವರು ಸ್ಥಳೀಯ ಜನರ ಜೊತೆ ನಿಕಟ ಸಂಪರ್ಕ ಸಾಧಿಸಿ ಅವರ ಜೊತೆ ಮಾತುಕತೆ ಆಡುವುದು , ಜನಪದ ಹಾಡುಗಳು, ಅವನ್ನು ಸಂಗ್ರಹಿಸುವುದು, ಪ್ರಾಚೀನ ಕಾವ್ಯ ಮತ್ತು ಶಾಸನಗಳನ್ನು ಪಠಿಸುವುದು, ಕನ್ನಡ ವಿದ್ವಾಂಸರೊಂದಿಗೆ ಚರ್ಚೆ ಮುಂತಾದ ವಿಧಾನಗಳಿಂದ ಕಿಟ್ಟೆಲ್ ಅವರು 10 ವರ್ಷಗಳಲ್ಲಿ ಕನ್ನಡ ಭಾಷೆಯ ಮೂಲತತ್ವಗಳನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಂಡರು .



1860ರ ದಶಕದಲ್ಲಿ ಮೈಸೂರು, ಧಾರವಾಡ, ಶಿವಮೊಗ್ಗ, ಹಾಸನ ಮತ್ತು ದಕ್ಷಿಣ ಕರ್ನಾಟಕದ ಹಲವು ಭಾಗಗಳಿಗೆ ಕಿಟ್ಟೆಲ್ ಪ್ರವಾಸ ಮಾಡಿದರು. ಜನರು ಮಾತನಾಡುವ ಕನ್ನಡದ ವಿಭಿನ್ನ ಪ್ರಾದೇಶಿಕ ಶೈಲಿಗಳನ್ನು ಅವರು ಅಧ್ಯಯನ ಮಾಡಿದರು.

1864ರ ವೇಳೆಗೆ ಅವರು ಕನ್ನಡ ವ್ಯಾಕರಣ, ವಾಕ್ಯನಿರ್ಮಾಣ, ಸಮಾಸ, ಸಂಧಿ , ಅಲಂಕಾರ ಮತ್ತು ಪದಪ್ರಯೋಗಗಳ ಚರಿತ್ರೆಯನ್ನು ಅಧ್ಯಯನ ಮಾಡತೊಡಗಿದರು.

1870ರಲ್ಲಿ ಭಾರತದಲ್ಲಿನ ಆರೋಗ್ಯ ಸಮಸ್ಯೆಯಿಂದಾಗಿ ಅವರು ಜರ್ಮನಿಗೆ ಹಿಂತಿರುಗಬೇಕಾಯಿತು. ಆದರೆ ಈ ವಿರಾಮವೇ ಅವರ ಸಂಶೋಧನೆಗೆ ಅತ್ಯಂತ ಉಪಯುಕ್ತವಾಯಿತು. ಈ ಅವಧಿಯಲ್ಲಿ ಅವರು ಯೂರೋಪಿನ ಗ್ರಂಥಾಲಯಗಳಲ್ಲಿ ಕನ್ನಡಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಿದರು, ಭಾರತೀಯ ಭಾಷೆಗಳ ವ್ಯಾಕರಣಗಳೊಂದಿಗೆ ಕನ್ನಡವನ್ನು ಹೋಲಿಕೆ ಮಾಡಿದರು. ಭಾರತೀಯ



ಭಾಷಾ ಪರಂಪರೆ ಮತ್ತು ಸಂಸ್ಕೃತಿಯ ಕುರಿತು ಪ್ರಬಂಧಗಳನ್ನು ರಚಿಸಿದರು.

1894ರಲ್ಲಿ, ಬಹುಕಾಲದ ಪರಿಶ್ರಮದೊಂದಿಗೆ, ಕಿಟ್ಟೆಲ್ ಅವರು ಕನ್ನಡಇಂಗ್ಲಿಷ್ ನಿಘಂಟನ್ನು ಪ್ರಕಟಿಸಿದರು. ಸುಮಾರು 70,000 ಕ್ಕಿಂತ ಹೆಚ್ಚು ಪದಗಳನ್ನು ಒಳಗೊಂಡ ಈ ನಿಘಂಟು , ಒಟ್ಟು 1756 ಪುಟಗಳನ್ನು ಹೊಂದಿದ್ದು , ಕನ್ನಡದ ಮೂಲ ಪದಗಳು, ಸಂಸ್ಕೃತ ಮೂಲ ಪದಗಳು, ಜನಪದ ಬಳಕೆ, ಕ್ರಿಯಾಪದ ರೂಪಗಳು,ಉಚ್ಚಾರಣೆ, ಉದಾಹರಣಾ ವಾಕ್ಯಗಳು,ಮುಂತಾದವುಗಳನ್ನು ಒಳಗೊಂಡಿದೆ. ಅನೇಕ ವರ್ಷಗಳ ಸ್ಥಳೀಯ ಜನರೊಡನೆ ಬೆರೆತು , ಸ್ಥಳೀಯ ಶಿಕ್ಷಕರು ಮತ್ತು ವಿದ್ವಾಂಸರ ಮಾರ್ಗದರ್ಶನದಿಂದ ಈ ಕೃತಿಯನ್ನು ರಚಿಸಿದರು .

ಈ ಕೃತಿ ಕನ್ನಡದ ವ್ಯಾಕರಣವನ್ನು ಯೂರೋಪಿನ ವಿಧಾನದಲ್ಲಿ ರಚಿಸಿದ ಮೊದಲ ಕೃತಿಗಳಲ್ಲೊಂದು.

ಕಿಟ್ಟೆಲ್ ಅವರು ಕನ್ನಡ ಛಂದಸ್ಸು, ವ್ಯಾಕರಣ, ಇತಿಹಾಸ, ಜನಪದ ಮತ್ತು ಮಂಗಳೋರಿಯನ್ ಸಂಸ್ಕೃತಿಗಳ ಮೇಲೆ ಅನೇಕ ಪ್ರಬಂಧಗಳನ್ನು ಬರೆದರು.

ಕಿಟೆಲ್ ಅವರು ಕೇಸಿರಾಜರ 13 ನೇ ಶತಮಾನದ ಕನ್ನಡ ವ್ಯಾಕರಣದ ಪುಸ್ತಕವಾದ ಶಬ್ದಮಣಿದರ್ಪಣದ ತಾಳೆಗರಿ ಹಸ್ತಪ್ರತಿಗಳನ್ನು ಸಂಗ್ರಹಿಸಿ, ಅದನ್ನು ವ್ಯಾಖ್ಯಾನದೊಂದಿಗೆ ಸಂಪಾದಿಸಿ, ಮುದ್ರಿಸಿದರು.

ಅವರು ಕನ್ನಡ ವ್ಯಾಕರಣಜ್ಞ 2 ನೇ ನಾಗವರ್ಮ (11–12 ನೇ ಶತಮಾನ) ರ ಕೃತಿಯನ್ನು ಅನುವಾದಿಸಿದರು ಮತ್ತು ಶಾಲಾ ಮಕ್ಕಳಿಗಾಗಿ ಒಂದು ಸಣ್ಣ ನಿಘಂಟನ್ನು ಸಂಗ್ರಹಿಸಿದರು.

1862 ರಲ್ಲಿ ಪ್ರಾರಂಭವಾದ ಅವರ ಕನ್ನಡ ಸಾಹಿತ್ಯ ಯಾನ 1903 ರವರಗೆ ಸುಮಾರು 41 ವರ್ಷಗಳ ಕಾಲ ನಿರಂತರವಾಗಿ ನಡೆಯಿತು . ಅವರು ಕನ್ನಡ ಸಾಹಿತ್ಯಕ್ಕೆ ಕೊಟ್ಟ ಅಮೂಲ್ಯ ಕೊಡುಗೆಗಳ ಪಟ್ಟಿ ಇಲ್ಲಿದೆ

1862 ಕಥಾಮಾಲೆ

ಯೇಸು ಕ್ರಿಸ್ತನ ಜೀವನವನ್ನು ಭಾರತೀಯ ಕಾವ್ಯ ಛಂದಸ್ಸಿನಲ್ಲಿ ಬರೆದ ಕೃತಿ. ಕಿಟ್ಟೆಲ್ ಅವರ ಕನ್ನಡ ಶೈಲಿಯಲ್ಲಿ ಮೂಡಿದ ಆರಂಭಿಕ ಸಾಹಿತ್ಯ ಕೃತಿ.

1868 ಅಚಿಟಚಿಡಿಋಜ ಕಿಂಜಣುಛಿಚಿಟ ಂಟಣುಛಿಟಂಠಿ

ಕನ್ನಡ ಕವಿತೆಗಳ ಸಂಗ್ರಹ ಮತ್ತು ಸಂಪಾದನೆ. ಕನ್ನಡ ಕಾವ್ಯ ಸಂಗ್ರಹಗಳನ್ನು ಶಿಸ್ತುಬದ್ಧವಾಗಿ ಸಂಗ್ರಹಿಸಲು ಇದು ಮೊದಲ ಪ್ರವೃತ್ತಿಗಳಲ್ಲೊಂದು.

1872 ಶಬ್ದಮಣಿದರ್ಪಣ (ಸಂಪಾದನೆ)

ಕೇಶಿರಾಜರ ಪ್ರಸಿದ್ಧ ಕನ್ನಡ ವ್ಯಾಕರಣ ಕೃತಿ. ಕಿಟ್ಟೆಲ್ ಇದನ್ನು ಪುನಃ ಸಂಪಾದಿಸಿ ಹಾಗೂ ಪ್ರಕಟಿಸಿದ ಮಹತ್ವದ ಕೆಲಸ.

1875 ಛಂದೋಂಬುಧಿ (ಸಂಪಾದನೆ)ನಾಗವರ್ಮ ದ್ವಿತೀಯರ ಕನ್ನಡ ಛಂದಸ್ಸು ಮತ್ತು ಕಾವ್ಯಮಾಪನ ಕುರಿತ ಕೃತಿಯನ್ನು ಸಂಪಾದಿಸಿ ಪ್ರಕಟಿಸಿದರು. ಕನ್ನಡ ಛಂದಸ್ಸು ಅಧ್ಯಯನದ ಮಹತ್ವದ ಕೃತಿ.

1876 ಅಥವಾ 1878 ಂ ಖಛಿಂಂಟ ಆಛಿಣುಂಟಚಿಡಿಥಿ: ಇಟಿರಟ್ಟುಏಚಿಟಿಟಚಿಜಚಿ

ವಿದ್ಯಾರ್ಥಿಗಳು ಮತ್ತು ಸಾಮಾನ್ಯರ ಬಳಕೆಗೆ ತಯಾರಿಸಿದ ಶಾಲಾ ಶಬ್ದಕೋಶ.

1894 ಏಚಿಟಿಟಚಿಜಚಿಇಟಿರಟ್ಟು ಆಛಿಣುಂಟಚಿಡಿಥಿ

ಕಿಟ್ಟೆಲ್ ಅವರ ಮಹಾಕೃತಿ. 70,000ಕ್ಕೂ ಅಧಿಕ ಕನ್ನಡ ಪದಗಳು, ವ್ಯುತ್ಪತ್ತಿ, ಉದಾಹರಣೆ, ಪ್ರದೇಶೀಯ ಬಳಕೆ, ಜನಪದ ಪದಗಳು ಮೊದಲಾದವುಗಳನ್ನು ಒಳಗೊಂಡ ಕನ್ನಡ–ಇಂಗ್ಲಿಷ್ ನಿಘಂಟು.

1903 ಂ ಉಡಿಚಿಟಟಚಿಡಿ ಂಜಿ ಣುಜ ಏಚಿಟಿಟಚಿಜಚಿ ಐಚಿಟಿರಣಚಿಂಜ

ಕನ್ನಡದ ಮೊದಲ ಸಮಗ್ರ ಮತ್ತು ವೈಜ್ಞಾನಿಕ ವ್ಯಾಕರಣ ಕೃತಿ. ಹಳೆಯ, ಮಧ್ಯಯುಗ ಮತ್ತು ಆಧುನಿಕ ಕನ್ನಡದ ರೂಪಗಳನ್ನು ವಿವರಿಸುತ್ತದೆ. ಕಿಟ್ಟೆಲ್ ಅವರ ಅಂತಿಮ ಮಹತ್ವದ ಕೃತಿ.

ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ನೀಡಿದ ಕೊಡುಗೆಗಳನ್ನು ಗುರುತಿಸಿ ಕಿಟೆಲ್ ಅವರಿಗೆ ಟ್ಯೂಬಿಂಗನ್ ಜರ್ಮನಿಯ ವಿಶ್ವವಿದ್ಯಾಲಯ 1896 ರಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಮಾಡಿತು.

ಕನ್ನಡ ಸಾಹಿತ್ಯಕ್ಕೆ ಅಂತರ ರಾಷ್ಟೀಯ ಮನ್ನಣೆ ದೊರಕಿದ್ದು ಕಿಟ್ಟೆಲ್ ಅವರಿಂದಲೇ . ಕನ್ನಡಕ್ಕೆ ಮೊದಲ ಗೌರವ ಡಾಕ್ಟರೇಟ್ ತಂದುಕೊಟ್ಟವರು ಕಿಟ್ಟೆಲ್ ಅವರು .

ಕಿಟ್ಟೆಲ್ ಅವರಿಂದ ಕನ್ನಡಕ್ಕೆ ಆಧುನಿಕ ಭಾಷಾಶಾಸ್ತ್ರದ ಪಾಠ ಆರಂಭವಾಯಿತು. ಪದಶಾಸ್ತ್ರ, ನಿಘಂಟುಶಾಸ್ತ್ರ, ಜನಪದ ಅಧ್ಯಯನಕ್ಕೆ ಗಂಭೀರ ರೂಪ ದೊರೆಯಿತು. ಭಾಷೆಯನ್ನು ಸಂಶೋಧನೆಗೆ ಒಳಪಡಿಸುವ ಸಂಪ್ರದಾಯ ಬಂತು.

ವರಕವಿ, ದ.ರಾ.ಬೇಂದ್ರೆಯವರು ಕಿಟ್ಟೆಲ್ ಕುರಿತು ಕನ್ನಡಕೆ ಕನ್ನಡಿಯ ಹಿಡಿದು, ದುಡಿದವ ನೀನು ಎಂದಿದ್ದಾರೆ. ಶಾಸ್ತ್ರೀಯವಾದ ಮಾರ್ಗದಲ್ಲಿ ಕನ್ನಡ ವಿದ್ವತ್ತು ಬೆಳೆಯುವುದಕ್ಕೆ ಕಿಟೆಲ್ ಶ್ರಮಿಸಿದರು. ಕನ್ನಡದ ಋಷಿಗಳಲ್ಲಿ ಅವರೂ ಒಬ್ಬರು ಎಂದಿದ್ದಾರೆ ಸಂಶೋದಕ ಮತ್ತು ಬರಹಗಾರರಾದ ಡಿ. ಎಲ್. ನರಸಿಂಹಾಚಾರ್.

ಅವರ ಗೌರವಾರ್ಥ ಬೆಂಗಳೂರಿನ ಎಂಜಿ ರಸ್ತೆಯಲ್ಲಿ ಕಿಟ್ಟೆಲ್ ಅವರ ಪ್ರತಿಮೆ ಸ್ಥಾಪಿಸಲ್ಪಟ್ಟಿದೆ .

ಧಾರವಾಡದ ಕಿಟ್ಟೆಲ್ ಕಾಲೇಜು ಕಿಟ್ಟೆಲ್ ಅವರ ಸಮಗ್ರ ಸಾಹಿತ್ಯದ ಭಂಡಾರವನ್ನು ಹೊಂದಿದ್ದು ಕಿಟ್ಟೆಲ್ ಅವರ ಸಾಹಿತ್ಯವನ್ನು ಸಂಶೋದಿಸುವವರಿಗೆ ಪ್ರಶಸ್ತ ಸ್ಥಳವಾಗಿದೆ .

18 ಡಿಸೆಂಬರ್ 1903ರಂದು ಕಿಟ್ಟೆಲ್ ಅವರು ನಿಧನರಾದರು. ಆದರೆ ಅವರ ಕೊಡುಗೆಗಳು ಕನ್ನಡ ಸಾರಸ್ವತ ಲೋಕದಲ್ಲಿ ಅಜರಾಮರವಾಗಿರುತ್ತವೆ .

ಕಿಟ್ಟೆಲ್ ಅವರು ಕನ್ನಡವನ್ನು ಜಾಗತಿಕ ಸಂಶೋಧನೆಗೆ ತಂದರು. ಪದಕೋಶ, ವ್ಯಾಕರಣ ಮತ್ತು ಸಾಹಿತ್ಯಕ್ಕೆ ಮೂಲಾಧಾರ ನಿರ್ಮಿಸಿದರು. ಭಾಷೆಯ ಅಧ್ಯಯನಕ್ಕೆ ವೈಜ್ಞಾನಿಕ ವಿಧಾನ ತಂದರು.ಹೀಗಾಗಿ ಕಿಟ್ಟೆಲ್ ಕನ್ನಡ ಸಾರಸ್ವತ ಲೋಕಕ್ಕೆ ಎಂದೂ ಸ್ಮರಣೀಯರಾಗಿರುತ್ತಾರೆ .

ಕನ್ನಡದ ಸಂಶೋಧನೆ, ಸಾಹಿತ್ಯ, ನಿಘಂಟುಶಾಸ್ತ್ರ, ಭಾಷಾಶಾಸ್ತ್ರ ಮತ್ತು ಭಾಷಾ ಅಧ್ಯಯನಗಳಲ್ಲಿ ಇಂದು ಕಾಣುವ ಪ್ರಗತಿಯ ಮೂಲದಲ್ಲಿ ಕಿಟ್ಟೆಲ್ ಕೊಡುಗೆ ಅತ್ಯಮೂಲ್ಯ .

ಕನ್ನಡದ ಜನತೆ ಕಿಟ್ಟಲ್ ಅವರನ್ನು ಶ್ರೇಷ್ಠ ಪಂಡಿತರಾಗಿ , ಕನ್ನಡ ಭಾಷಾ ಸಂರಕ್ಷಕರಾಗಿ ಮತ್ತು ಸಾಂಸ್ಕೃತಿಕ ಸೇತುವೆಯಾಗಿ ನೋಡುತ್ತಾರೆ . ಇಂತಹ ಮಹನೀಯರಿಂದಲೇ ಕನ್ನಡ ಭಾಷೆ ಸೊಂಪಾಗಿ ಬೆಳೆದು ನಳನಳಿಸುತ್ತಿರುವುದು.

ಜರ್ಮನಿಯಲ್ಲಿ ಹುಟ್ಟಿ, ಕನ್ನಡ ನಾಡಿಗೆ ಬಂದು, ಕನ್ನಡ ಸಾಹಿತ್ಯದಲ್ಲಿ 40 ವರ್ಷಕ್ಕೂ ಮಿಗಿಲಾಗಿ ಸೇವೆ ಸಲ್ಲಿಸಿ , ಕನ್ನಡ ಭಾಷೆಯನ್ನು ವಿಶ್ವದ ಭೂಪಟದಲ್ಲಿ ಶಾಶ್ವತವಾಗಿ ನೆಲೆಯೂರಿಸಿದ ಕಿಟ್ಟೆಲ್ ರವರಿಗೆ ಕೋಟಿ ಕೋಟಿ ನಮನಗಳು .



ಸ್ವಾಮಿನಾಥನ್
ಬೆಂಗಳೂರು

## ಭಾಷೆಗಳ ಸೇತುವೆ ಕನ್ನಡ ರಂಗಭೂಮಿ



ಕನ್ನಡ ರಂಗಭೂಮಿಯ ಇತಿಹಾಸ ಶತಮಾನಗಳಷ್ಟು ಆಳವಾದ ಪರಂಪರೆ, ಸಂಸ್ಕೃತಿ ಮತ್ತು ಕಲಾತ್ಮಕ ವೈವಿಧ್ಯತೆಯನ್ನು ಹೊಂದಿದೆ. ಜನಪದ ಕಲಾರೂಪಗಳಿಂದ ಆರಂಭಿಸಿ, ಆಧುನಿಕ ನವೋದಯ ನಾಟಕಗಳವರೆಗೆ ಕನ್ನಡ ರಂಗಭೂಮಿ ಹಲವು ಹಂತಗಳನ್ನು ದಾಟಿದೆ. ಈ ಬೆಳವಣಿಗೆಯಲ್ಲೇ ಅನ್ಯ ಭಾಷೆಗಳ ನಾಟಕಗಳು ಕನ್ನಡ ವೇದಿಕೆಗೆ ಪ್ರವೇಶಿಸುವುದರಿಂದ, ಹೊಸ ವಿಚಾರಧಾರೆ, ಹೊಸ ಕಥನಶೈಲಿ ಮತ್ತು ಜಾಗತಿಕ ದೃಷ್ಟಿಕೋನ ಕನ್ನಡ ರಂಗಭೂಮಿಯನ್ನು ಸಮೃದ್ಧಗೊಳಿಸಿದೆ. ಅನುವಾದ, ರೂಪಾಂತರ ಮತ್ತು ಬಹುಭಾಷಾ ನಾಟಕಗಳ ಸಂಸ್ಕೃತಿ ಕನ್ನಡ ರಂಗಭೂಮಿಗೆ ಮಹತ್ತರವಾದ ಬದಲಾವಣೆಯನ್ನು ತಂದಿದೆ.

**ಅನ್ಯಭಾಷಾ ನಾಟಕಗಳು ಕನ್ನಡಕ್ಕೆ ಆಗಮನ:** ಕನ್ನಡ ರಂಗಭೂಮಿಯ ಬಹುಭಾಷಾ ಸಂವಹನವು ಭಾರತದಲ್ಲಿ ಸುಮಾರು ಕ್ರಿ.ಪೂ 2ನೇ ಶತಮಾನದಲ್ಲಿ ಬರೆದ ನಾಟ್ಯಶಾಸ್ತ್ರವು ನಾಟಕಕ್ಕೆ ಮೊದಲ ಔಪಚಾರಿಕ ಗ್ರಂಥವಾಗಿ ಭಾರತೀಯ ರಂಗಭೂಮಿ ಸುಮಾರು 5000 ವರುಷಗಳ ಹಳೆಯದು ಎಂದು ಹೇಳಲಾಗುತ್ತದೆ ಮತ್ತು ಸಂಸ್ಕೃತ ನಾಟಕಗಳ ಮೂಲಕ ರಂಗಭೂಮಿ ಆರಂಭವಾಯಿತು ಎನ್ನಲಾಗುತ್ತದೆ. ಭಾಸ, ಭವಭೂತಿ, ಕಾಳಿದಾಸರ ಕೃತಿಗಳು ಕನ್ನಡ ರಂಗಕಲೆಗೆ ಮೊದಲ ಪ್ರೇರಣೆ. ನಂತರ ಮರಾಠಿ, ಹಿಂದಿ, ಉರ್ದು, ಇಂಗ್ಲಿಷ್, ತಮಿಳು, ತೆಲುಗು, ಮಲಯಾಳಂ ಮತ್ತು ಯುರೋಪಿನ ಹಲವು ಭಾಷೆಗಳ ನಾಟಕಗಳು ಕನ್ನಡಕ್ಕೆ ಬಂದವು. 19–20ನೇ ಶತಮಾನಗಳಲ್ಲಿ ಅನುವಾದ ಚಳುವಳಿಗಳು ಉನ್ನತ ಮಟ್ಟದಲ್ಲಿದ್ದು, ಕನ್ನಡ ರಂಗಭೂಮಿಯ ದಾರಿಯಲ್ಲಿ ಹೊಸ ಜ್ಞಾನದ ಬಾಗಿಲು ತೆರೆಯಿತು.

**ಪ್ರಮುಖ ಅನುವಾದಿತ ಹಾಗೂ ರೂಪಾಂತರಗೊಂಡ ನಾಟಕಗಳ ಪ್ರಭಾವ:** ಶೇಕ್ಸ್ಪಿಯರ್ನ ಹ್ಯಾಮ್ಲೆಟ್, ಮ್ಯಾಕ್ಬೆತ್, ಒಥೆಲ್ಲೊ ಮೊದಲಾದ ಕೃತಿಗಳ ಕನ್ನಡ ಅನುವಾದವು ರಂಗಭೂಮಿಗೆ ಹೊಸ ತೀವ್ರತೆ ಮತ್ತು ಗಾಢತೆಯನ್ನು ನೀಡಿತು. ಇಬ್ಸನ್, ಮೊಲಿಯೇರ್, ಬ್ರೆಖ್ಟ್, ಗೋಗೋಲ್, ಟಾಲ್ಸ್ಟಾಯ್ ಮುಂತಾದವರ ನಾಟಕಗಳು ಕನ್ನಡದಲ್ಲಿ ರೂಪಾಂತರಗೊಂಡು, ಮನೋವೈಜ್ಞಾನಿಕ, ರಾಜಕೀಯ ಮತ್ತು ಸಾಮಾಜಿಕ ನಾಟಕಗಳಿಗೆ ಹೊಸ ಆಳತೆಯನ್ನು ಒದಗಿಸಿತು.

- **ಹೊಸ ಕಥನಶೈಲಿ**
- **ಹೊಸ ಪಾತ್ರ ನಿರ್ಮಾಣ**
- **ಗಂಭೀರ ಮಾನವೀಯ ಚಿಂತನೆಗಳು**
- **ಜಾಗತಿಕ ಕಲಾ ನೀತಿ**
- **ಇವುಗಳನ್ನು ಪರಿಚಯಿಸಿದವು.**

**ಅನುವಾದ ಹಾಗೂ ರೂಪಾಂತರಗಳ ರಂಗಭೂಮಿಯಲ್ಲಿನ ಮಹತ್ವ**

ಅನುವಾದಿತ ನಾಟಕಗಳು ಮೂಲಕೃತಿಯ ಅರ್ಥವನ್ನು ಕನ್ನಡ ವೇದಿಕೆಗೆ ತರುತ್ತಿದ್ದರೆ, ರೂಪಾಂತರಗಳು ಕನ್ನಡ ಸಂಸ್ಕೃತಿ, ಸ್ಥಳೀಯ ಸಂಪ್ರದಾಯ, ಸಮಾಜದ ಸ್ವಭಾವಕ್ಕೆ ಅನುಗುಣವಾಗಿ ಹೊಸ ರೂಪ ನೀಡುತ್ತವೆ.

**ಉದಾಹರಣೆಗಳು:**

- **ಶೇಕ್ಸ್ಪಿಯರ್ ನಾಟಕಗಳ ಕನ್ನಡೀಕರಣ**
- **ಬ್ರೆಖ್ಟ್‌ನ ರಾಜಕೀಯ ನಾಟಕಗಳು**
- **ಇಬ್ಸನ್‌ನ ಮನೋವೈಜ್ಞಾನಿಕ ಕಥೆಗಳ ಸ್ಥಳೀಯ ರೂಪಾಂತರ**

ಇವುಗಳು ಕನ್ನಡ ರಂಗಭೂಮಿಯ ಕಲಾತ್ಮಕ ಗಾತ್ರವನ್ನು ಹೆಚ್ಚಿಸಿವೆ.

**ಕನ್ನಡ ರಂಗಭೂಮಿಗೆ ಅನ್ಯಭಾಷಾ ನಾಟಕಗಳಿಂದ ಬಂದ ಲಾಭ ಮತ್ತು ಸವಾಲುಗಳು:** ಒಂದೆಡೆ ಜಾಗತಿಕ ಚಿಂತನೆ, ಹೊಸ ಶೈಲಿ, ಹೊಸ ತಂತ್ರ ಇವೆಲ್ಲವೂ ಕನ್ನಡ ರಂಗಭೂಮಿಗೆ ಹೊಸ ರೂಪವನ್ನೇ ನೀಡಿತು. ಇನ್ನೊಂದೆಡೆ ಮೂಲ ಕನ್ನಡ ಕಥನಕ್ಕೆ ಧಕ್ಕೆಯಾಗದಂತೆ ಎಚ್ಚರಿಕೆಯನ್ನು ವಹಿಸಿತು. ಆದರೂ ಕೂಡ ಯುವ ಪ್ರೇಕ್ಷಕರನ್ನು ಆಕರ್ಷಿಸುವಲ್ಲಿ, ಕಲಾವಿದರಿಗೆ ಹೊಸ ತರಬೇತಿಯನ್ನು ನೀಡಲು, ಪ್ರಯೋಗಾತ್ಮಕ ರಂಗವನ್ನು ಬಲಪಡಿಸುವಲ್ಲಿ ಇವತ್ತಿನ ಕನ್ನಡ ರಂಗಭೂಮಿ ಸೋತಿದೆ.

**ಭಾಷಾ ವೈವಿಧ್ಯತೆ ಮತ್ತು ಕನ್ನಡ ರಂಗಭೂಮಿ:** ಕಥನಶೈಲಿ ಬದಲಾಗಿದೆ

ಪಾತ್ರ ರಚನೆಗೆ ಜಾಗತಿಕ ಆಳತೆ ಬಂದಿದೆ

ಬೆಳಕುಬಣ್ಣಸಂಗೀತ ತಂತ್ರಗಳು ಸುಧಾರಿಸಿವೆ

ಸಾಂಸ್ಕೃತಿಕ ವಿನಿಮಯ ವಿಸ್ತರಿಸಿದೆ ಮತ್ತು ಕನ್ನಡ ರಂಗಭೂಮಿಯು ಜಾಗತಿಕ ಸಂವಾದದ ವೇದಿಕೆಯಾಗಿಸಿದೆ.

**ಕನ್ನಡ ನಾಟಕ ಸಂಘಗಳ ಸ್ಥಿತಿ ಮತ್ತು ಅವಕಾಶಗಳು:**

- **ಆರ್ಥಿಕ ಮಿತಿಗಳು**
- **ಪ್ರೇಕ್ಷಕರ ಕುಸಿತ**
- **ಯುವಕರ ಆಸಕ್ತಿ ಕಡಿಮೆ**
- **ತರಬೇತಿ ಕೊರತೆ**
- **ಸರ್ಕಾರದ ಅನುದಾನದ ಕೊರತೆ**
- **ಯುವಕರಲ್ಲಿ ಡಿಜಿಟಲ್ ಮೀಡಿಯ, ಸಿನಿಮಾ ಹಾಗು ಸೀರಿಯಲ್‌ಗಳ ಹುಚ್ಚುತನದಿಂದ ಕನ್ನಡ ರಂಗಭೂಮಿಯು ಬಲು ಹೀನಾಯ ಪರಿಸ್ಥಿತಿಯನ್ನ ಎದು-ರಿಸುತ್ತಿದೆ.**

ಸಮಾಜದ ನೀತಿ ನಿಯಮಗಳು ಬದಲಾದಂತೆ ರಂಗಭೂಮಿಯ ಬರವಣಿಗೆಗಳು ಬದಲಾಗಬೇಕಿತ್ತು ಹಾಗೂ ರಂಗಭೂಮಿಯ ಸಾಂಸ್ಕೃತಿಕ ಅನ್ವೇಷಣೆಯು ಗೌರವಾನ್ವಿತ ಕಲೆಯಾಗಿ ಬೆಳೆಯಬೇಕಿತ್ತು ಆದರೇ ಅದು ಕುಂಟಿತವಾಗಿದೆ

**ಕನ್ನಡ ರಂಗಭೂಮಿಯ ಸಾಮಾಜಿಕ ಮಹತ್ವ**

- **ಜನರ ದುಃಖಸಂತೋಷ**
- **ಸಮಾಜದ ಬದಲಾವಣೆ**
- **ರಾಜಕೀಯಸಾಂಸ್ಕೃತಿಕ ಸಂವೇದನೆ**

ಇವೆಲ್ಲವನ್ನು ರಂಗಭೂಮಿ ನಾಟಕೀಯವಾಗಿ ಪ್ರಸ್ತುತಪಡಿಸುತ್ತದೆ.

**ಹೊಸ ತಲೆಮಾರಿನ ರಂಗಕಲೆಯ ಭವಿಷ್ಯ:** ಯುವಕರು ಮಿನಿಮಲಿಸ್ಟ್ ನಾಟಕ, ಬೀದಿ ನಾಟಕ, ನವೀನ ಕಥನಶೈಲಿ ಇವೆಲ್ಲವೂ ಒಂದು ಹೊಸ ಶಕ್ತಿ ತುಂಬಿದವು, ಡಿಜಿಟಲ್‌ಲೈವ್ ಹೈಬ್ರಿಡ್ ನಾಟಕಗಳು ಭವಿಷ್ಯದ ಕನ್ನಡ ರಂಗಭೂಮಿಯ ಪ್ರಮುಖ ಮಾರ್ಗವಾಗಿವೆ. ಕನ್ನಡ ರಂಗಭೂಮಿ ತನ್ನ ಅಭಿವೃದ್ಧಿಯ ಎಲ್ಲ ಹಂತಗಳಲ್ಲಿ ಅನ್ಯ ಭಾಷೆಗಳ ನಾಟಕಗಳಿಂದ ಕಲಿತು, ಅದರ ಸಾರವನ್ನು ಸ್ವೀಕರಿಸಿ, ಕನ್ನಡ ಸಂಸ್ಕೃತಿಗೆ ಹೊಂದಿಕೊಂಡಂತೆ ಮರುರೂಪಿಸಿಕೊಂಡಿದೆ. ಈ ಅನುವಾದರೂಪಾಂತರವೈವಿಧ್ಯತೆಗಳ ಕಾರಣದಿಂದಲೇ ಕನ್ನಡ ರಂಗಭೂಮಿ ಇಂದು ಜಾಗತಿಕ ರಂಗಭೂಮಿಯಾಗಿ ಪರಿವರ್ತನೆಯಾಗಿದೆ.

ಆದ್ದರಿಂದ, ಕನ್ನಡ ರಂಗಭೂಮಿಯ ಚೈತನ್ಯ, ಗಂಭೀರತೆ ಮತ್ತು ಕಲಾತ್ಮಕತೆ ಇವೆಲ್ಲವೂ ವಿವಿಧ ಭಾಷೆಗಳ ಆಳವಾದ ಪ್ರಭಾವದಿಂದ ರೂಪಿತವಾಗಿದೆ. ಕನ್ನಡ ರಂಗಭೂಮಿ ಮತ್ತಷ್ಟು ಮುನ್ನಡೆಯಬೇಕಾದರೆ ಬಹುಭಾಷಾ ವಿನಿಮಯ ಮತ್ತು ಸೃಜನಾತ್ಮಕ ಚಿಂತನೆ, ನವೀನತೆ, ಶ್ರದ್ಧೆ ಮತ್ತು ಕಲಿಯುವ ಆಸಕ್ತಿ ಇವತ್ತಿನ ಯುವಕರಲ್ಲಿ ಬೆಳೆಯಬೇಕಾಗಿದೆ. ಕನ್ನಡ ರಂಗಭೂಮಿ ಬೆಳೆಯಬೇಕಾದರೆ ಕನ್ನಡಿಗರ ಮನಸ್ಥಿತಿ ಬದಲಾಗಬೇಕು. ವರುಷಕ್ಕೆ ಒಂದು ಬಾರಿ ಕನ್ನಡ ರಾಜ್ಯೋತ್ಸವವನ್ನು ಆಚರಿಸಿ ಸುಮ್ಮನಿರುವಂತದ್ದಲ್ಲ ಈ ಕನ್ನಡ ರಂಗಭೂಮಿ. ವರುಷ ಪೂರ್ತಿ.. ಚಾಲನೆಯನ್ನ ಮಾಡುತ್ತ ಸಾಗುತ್ತಲೇ ಇರುತ್ತದೆ, ಸಾಗುತ್ತಲೇ ಇರುಬೇಕು.

ಶತ ಶತಮಾನಗಳೆ ಉರುಳಲಿ
ನಾ ಅಳಿದರೂ ನೀ ಅಳಿದರೂ
ಕೊನೆಗೊಬ್ಬ ಕನ್ನಡಿಗನೇ ಉಳಿದರೂ
ಕನ್ನಡಮಯವಾಗುವುದು ಕನ್ನಡ ನಾಡೆಲ್ಲ
ಆ ಒಬ್ಬ ಕನ್ನಡಿಗನೀನಾಗು ಬಾ
ಕನ್ನಡವೇ ಸತ್ಯ ಕನ್ನಡವೇ ನಿತ್ಯ
ಜೈ ಕರ್ನಾಟಕ ಮಾತೆ,



ಧನರಾಜು.ಎಸ್.ಹೆಚ್
ಶ್ರೀರಂಗಪುರ

## ಗಜಬೇಂಟೆಕಾರ ಪ್ರೌಢದೇವರಾಯ

**ಕರುನಾಡ ತಾಯಿ ಸದಾ ಚಿನ್ಮಯಿ**
**ಕರುನಾಡ ತಾಯಿ ಸದಾ ಚಿನ್ಮಯಿ**
**ಈ ಪುಣ್ಯ ಭೂಮಿ ನಮ್ಮ ದೇವಾಲಯ**
**ಪ್ರೇಮಲಯಾ ಈ ದೇವಾಲಯ**
**ಕರುನಾಡ ತಾಯಿ ಸದಾ ಚಿನ್ಮಯಿ**
**ಕರುನಾಡ ತಾಯಿ ಸದಾ ಚಿನ್ಮಯಿ**
**ವೀರ ಧೀರರಾಳಿದ ನಾಡು ನಿನ್ನದು**
**ಶಾಂತಿ ಮಂತ್ರ ಪಾಡಿದ ಬೀಡು ನಿನ್ನದು**
**ವರ ಸಾಧು ಸಂತರ ನೆಲೆ ನಿನ್ನದು**
**ಮಹಾಶಿಲ್ಪಕಾರರ ಕಲೆ ನಿನ್ನದು**
**ಸಂಗೀತ ಸಾಹಿತ್ಯ ಸೆಲೆ ನಿನ್ನದು**

ವಿಜಯನಗರ ಸಾಮ್ರಾಜ್ಯದ ಸಂಗಮ ವಂಶದ ಪ್ರಮುಖ ಅರಸರಲ್ಲಿ ಒಬ್ಬನಾದ ಪ್ರೌಢದೇವರಾಯ (ಎರಡನೆಯ ದೇವರಾಯ ) (ಆಳ್ವಿಕೆ: ಕ್ರಿ.ಶ. 1424–1446) ಕೆಲ ಪಂಡಿತರು 1426–1466 ಎಂದೂ ಉಲ್ಲೇಖಿಸುತ್ತಾರೆ. ಅವರ ಸಾಧನೆಗಳು ಮತ್ತು ಕನ್ನಡ ನಾಡಿಗೆ ಅವರು ನೀಡಿದ ಕೊಡುಗೆಗಳು ಅನನ್ಯ. ಇವರನ್ನು "ಗಜಬೇಂಟೆಕಾರ" ಎಂದೂ ಕರೆಯಲಾಗುತ್ತದೆ.

**ಪ್ರೌಢದೇವರಾಯನ ಪ್ರಮುಖ ಸಾಧನೆಗಳು:** ಎರಡನೆಯ ದೇವರಾಯನ ಆಳ್ವಿಕೆಯು ವಿಜಯನಗರದ ಇತಿಹಾಸದಲ್ಲಿ ಸೇನಾ ಶಕ್ತಿ ಮತ್ತು ಸಾಹಿತ್ಯಿಕ ಏಳಿಗೆಯ ದೃಷ್ಟಿಯಿಂದ ಉತ್ತುಂಗದ ಕಾಲವಾಗಿತ್ತು.

**ಕನ್ನಡದ ರಾಜ-ಮಾಹಾರಾಜರು**

- **ರಾಜಕೀಯ ಮತ್ತು ಮಿಲಿಟರಿ ಶ್ರಮ:**

ಬಹಮನಿ ಸುಲ್ತಾನರ ವಿರುದ್ಧದ ಯಶಸ್ಸು: ರಾಯಚೂರು ದೋಬ್‌ನ (ಕೃಷ್ಣಾ–ತುಂಗಭದ್ರಾ ನಡುವಿನ ಪ್ರದೇಶ) ನಿಯಂತ್ರಣಕ್ಕಾಗಿ ಇವರು ಬಹಮನಿ ಸುಲ್ತಾನರೊಂದಿಗೆ ನಿರಂತರವಾಗಿ ಹೋರಾಡಿದರು. ಹಲವು ಯಶಸ್ವಿ ಯುದ್ಧಗಳ ಮೂಲಕ ಈ ಪ್ರದೇಶದಲ್ಲಿ ವಿಜಯನಗರದ ಪ್ರಾಬಲ್ಯವನ್ನು ದೃಢಪಡಿಸಿದರು.

ದಕ್ಷಿಣದ ದಿಗ್ವಿಜಯ: ಇವರು ಆಂಧ್ರದ ಕೊಂಡವೀಡಿನ ರೆಡ್ಡಿ ರಾಜರನ್ನು ಸಂಪೂರ್ಣವಾಗಿ ಸೋಲಿಸಿದರು. ಅವರ ಸಾಮ್ರಾಜ್ಯವು ದಕ್ಷಿಣದಲ್ಲಿ ರಾಮೇಶ್ವರಂನಿಂದ ಶ್ರೀಲಂಕಾವರೆಗೆ ವಿಸ್ತರಿಸಿತ್ತು. ಇವರ ಸಾಮಂತ ರಾಜರುಗಳು ಶ್ರೀಲಂಕಾ ಮತ್ತು ಕೇರಳದ ರಾಜರಿಂದ ಕಪ್ಪ ಕಾಣಿಕೆಗಳನ್ನು ಪಡೆಯುತ್ತಿದ್ದರು.

ಮುಸ್ಲಿಂ ಸೈನಿಕರ ನೇಮಕಾತಿ (ಸೇನಾ ಸುಧಾರಣೆ): ಇದು ಇವರ ಅತ್ಯಂತ ಕ್ರಾಂತಿಕಾರಿ ನಿರ್ಧಾರ. ಬಹಮನಿ ಸುಲ್ತಾನರ ಸೈನ್ಯದ ಶಕ್ತಿ ತಿಳಿದಿದ್ದ ದೇವರಾಯನು, ತಮ್ಮ ಸೈನ್ಯಕ್ಕೆ ಬಿಲ್ಲುಗಾರಿಕೆಯಲ್ಲಿ ನಿಪುಣರಾಗಿದ್ದ 2,000 ಮುಸ್ಲಿಂ ಸೈನಿಕರನ್ನು ನೇಮಿಸಿಕೊಂಡರು. ಅವರಿಗೆ ಮಸೀದಿಗಳನ್ನು ಕಟ್ಟಲು ಅನುಮತಿ ನೀಡಿ, ಕುರಾನ್ ಅನ್ನು ಸಿಂಹಾಸನದ ಮುಂದೆ ಇರಿಸಿದ್ದರು. ಈ ಸೇನಾ ಸುಧಾರಣೆ ವಿಜಯನಗರದ ಸೈನಿಕ ಶಕ್ತಿಯನ್ನು ಇಮ್ಮಡಿಗೊಳಿಸಿತು.

"ಗಜಬೇಂಟೆಕಾರ" ಬಿರುದು: ಇವರು ಆನೆಗಳನ್ನು ಬೇಟೆಯಾಡುವುದರಲ್ಲಿ ನಿಪುಣರಾಗಿದ್ದರಿಂದ ಮತ್ತು ಯುದ್ಧಭೂಮಿಯಲ್ಲಿ ಅಸಾಧಾರಣ ಶೌರ್ಯ ತೋರುತ್ತಿದ್ದರಿಂದ "ಗಜಬೇಂಟೆಕಾರ" (ಆನೆಗಳ ಬೇಟೆಗಾರ) ಎಂಬ ಬಿರುದನ್ನು ಪಡೆದರು.

- **ಕನ್ನಡ ನಾಡಿಗೆ ಸಾಹಿತ್ಯ ಮತ್ತು ಸಾಂಸ್ಕೃತಿಕ ಕೊಡುಗೆ:**

ಎರಡನೆಯ ದೇವರಾಯನು ಕೇವಲ ವೀರ ರಾಜನಾಗಿರದೆ, ಸ್ವತಃ ಒಬ್ಬ ಕವಿ ಮತ್ತು ವಿದ್ವಾಂಸರ ಪೋಷಕನಾಗಿದ್ದರು.



ಸಾಹಿತ್ಯ ಪೋಷಣೆ: ಇವರ ಕಾಲದಲ್ಲಿ ಸಂಸ್ಕೃತ, ಕನ್ನಡ ಮತ್ತು ತೆಲುಗು ಭಾಷೆಗಳ ಸಾಹಿತ್ಯವು ಉತ್ತುಂಗಕ್ಕೇರಿತು.

ಕನ್ನಡ ಕೃತಿಗಳು: ಸ್ವತಃ ಎರಡನೆಯ ದೇವರಾಯನು 'ಸೋಮನಾಥ ಚರಿತ' ಎಂಬ ಕನ್ನಡ ಕೃತಿಯನ್ನು ರಚಿಸಿದರು ಎಂದು ಹೇಳಲಾಗುತ್ತದೆ. ಕೆಲ ವಿದ್ವಾಂಸರು ಅದನ್ನು ಸಂಸ್ಕೃತ ಕೃತಿಯೆಂದು ಪರಿಗಣಿಸುತ್ತಾರೆ;.

ಕನ್ನಡದ ಪ್ರಸಿದ್ಧ ಕವಿ ಲಕ್ಕಣ್ಣ ದಂಡೇಶ ಅವರು ಇವರ ಆಸ್ಥಾನದಲ್ಲಿದ್ದು, 'ಶಿವತತ್ತ್ವ ಚಿಂತಾಮಣಿ'ಯನ್ನು ರಚಿಸಿದರು. ಚಾಮರಸ ಕವಿಯ 'ಪ್ರಭುಲಿಂಗಲೀಲೆ' ಕೂಡ ಇವರ ಆಶ್ರಯದಲ್ಲೇ ರಚನೆಯಾಯಿತು.

ಸಂಸ್ಕೃತ ಕೃತಿಗಳು: ಸಂಸ್ಕೃತದ ಪ್ರಮುಖ ವಿದ್ವಾಂಸರಾದ ಸಾಯಣರಾಯರ ಸೋದರಳಿಯ ಡಿಂಡಿಮರು ಇವರ ಆಸ್ಥಾನದಲ್ಲಿ ಪ್ರಮುಖರಾಗಿದ್ದರು.

ದೂರದೃಷ್ಟಿಯ ರಾಜ (ವಿದೇಶಿ ಪ್ರವಾಸಿಗರ ವರದಿ): ಇವರ ಆಳ್ವಿಕೆಯ ಅವಧಿಯಲ್ಲಿ ಪರ್ಷಿಯಾದ ರಾಯಭಾರಿ ಅಬ್ದುಲ್ ರಜಾಕ್ ಮತ್ತು ಇಟಲಿಯ ಪ್ರವಾಸಿ ನಿಕೊಲೊ ಕಾಂಟಿ (ಇವರು ಮೊದಲನೆಯ ದೇವರಾಯನ ಕಾಲದಲ್ಲಿ ಭೇಟಿ ನೀಡಿದ್ದರೂ, ಆತನ ಆಳ್ವಿಕೆಯ ಸಾಮ್ರಾಜ್ಯದ ವೈಭವದ ಬಗ್ಗೆ ಬರೆದಿದ್ದಾರೆ) ವಿಜಯನಗರಕ್ಕೆ ಭೇಟಿ ನೀಡಿದರು. ಅಬ್ದುಲ್ ರಜಾಕ್, ವಿಜಯನಗರದ ರಾಜಧಾನಿ ಹಂಪಿಯ ವೈಭವ, ಆಡಳಿತದ ದಕ್ಷತೆ, ಮತ್ತು ರಾಜ್ಯದ ಅಗಾಧ ಸಂಪತ್ತಿನ ಬಗ್ಗೆ ವಿಸ್ತೃತವಾಗಿ ಬರೆದಿದ್ದಾರೆ. ಈ ವರದಿಗಳು ಕನ್ನಡ ನಾಡಿನ ವೈಭವವನ್ನು ಜಗತ್ತಿಗೆ ಪರಿಚಯಿಸಿದವು.

ಕನ್ನಡ ನಾಡಿಗೆ ಅವರು ಶ್ರಮಿಸಿದ ಕತೆ:

ಎರಡನೆಯ ದೇವರಾಯನ ಶ್ರಮ ಕೇವಲ ಸಾಮ್ರಾಜ್ಯ ವಿಸ್ತರಣೆಗೆ ಮೀಸಲಾಗಿರದೆ, ಕನ್ನಡ ನಾಡಿನ ರಾಜಕೀಯ ಏಕತೆ ಮತ್ತು ಆರ್ಥಿಕ ಭದ್ರತೆಗೆ ಬುನಾದಿಯಾಯಿತು.

ರಾಜಕೀಯ ಏಕತೆ: ಅಂದು ಉತ್ತರ ಮತ್ತು ದಕ್ಷಿಣ ಭಾರತಗಳ ನಡುವೆ ಪ್ರಾದೇಶಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಘರ್ಷಣೆಗಳು ನಡೆಯುತ್ತಿದ್ದವು. ಈ ಸಮಯದಲ್ಲಿ, ದೇವರಾಯನು ತನ್ನ ಶಕ್ತಿ ಮತ್ತು ರಾಜತಾಂತ್ರಿಕತೆಯಿಂದ ದಕ್ಷಿಣ ಭಾರತದ ಬಹುತೇಕ ಸಣ್ಣ ಸಂಸ್ಥಾನಗಳನ್ನು ಒಗ್ಗೂಡಿಸಿ, ವಿಜಯನಗರವನ್ನು ದಕ್ಷಿಣದ ಏಕೈಕ ಶಕ್ತಿ ಕೇಂದ್ರವನ್ನಾಗಿ ಮಾಡಿದರು. ಹಂಪಿಯ ವೈಭವವನ್ನು ಜಗತ್ತಿನ ಇತಿಹಾಸದ ಪುಟಗಳಲ್ಲಿ ಅಚ್ಚೊತ್ತಿಸಿದವು

ವ್ಯಾಪಾರದ ಸುರಕ್ಷತೆ: ಕರಾವಳಿ ಪ್ರದೇಶಗಳ ಮೇಲಿನ ಹಿಡಿತದಿಂದಾಗಿ, ಸಮುದ್ರ ಮಾರ್ಗದ ವ್ಯಾಪಾರವು ಸುರಕ್ಷಿತವಾಯಿತು. ಇದು ಕನ್ನಡ



ನಾಡಿಗೆ ಚಿನ್ನ, ಕುದುರೆ ಮತ್ತು ಇತರ ಅಮೂಲ್ಯ ವಸ್ತುಗಳ ಆಮದಿಗೆ ಅನುಕೂಲ ಮಾಡಿಕೊಟ್ಟಿತು, ಇದರಿಂದ ರಾಜ್ಯವು ಆರ್ಥಿಕವಾಗಿ ಬಲಶಾಲಿಯಾಯಿತು.

ಸಾಮಾಜಿಕ ಸೌಹಾರ್ದ: ಮುಸ್ಲಿಂ ಸೈನಿಕರ ನೇಮಕಾತಿ ಮತ್ತು ಅವರಿಗೆ ನೀಡಿದ ಗೌರವವು ಇವರಲ್ಲಿ ಧಾರ್ಮಿಕ ಉದಾರತೆ ಇತ್ತು ಎಂಬುದನ್ನು ತೋರಿಸುತ್ತದೆ. ಹಿಂದೂ ಸಾಮ್ರಾಜ್ಯದಲ್ಲಿ ಅನ್ಯಧರ್ಮೀಯರಿಗೆ ಸಮಾನ ಸ್ಥಾನಮಾನ ನೀಡುವ ಮೂಲಕ ಸಾಮಾಜಿಕ ಸೌಹಾರ್ದಕ್ಕೆ ಮಾದರಿಯಾದರು. ಪ್ರೌಢದೇವರಾಯನು (ಎರಡನೆಯ ದೇವರಾಯ ) ಕನ್ನಡ ನಾಡಿನ ಭದ್ರತೆ, ಸಮಗ್ರತೆ ಮತ್ತು ಸಾಂಸ್ಕೃತಿಕ ಪ್ರಚಾರಕ್ಕಾಗಿ ನಿರಂತರವಾಗಿ ಶ್ರಮಿಸಿದ ಮಹಾನ್ ಚಕ್ರವರ್ತಿಯಾಗಿದ್ದಾನೆ. ಇವರ ಕಾಲವು ವಿಜಯನಗರದ "ವೈಭವದ ಶಕೆ" ಎಂದು ಇತಿಹಾಸದಲ್ಲಿ ದಾಖಲಾಗಿದೆ. ಇವರ ಆಳ್ವಿಕೆ ವಿಜಯನಗರದ ಸ್ವರ್ಣಯುಗವೆಂದು ಇತಿಹಾಸಕಾರರು ಕರೆಯುತ್ತಾರೆ. ಸೇನಾ ಶಕ್ತಿ, ರಾಜತಾಂತ್ರಿಕ ಕೌಶಲ್ಯ ಮತ್ತು ಸಾಹಿತ್ಯಪೋಷಣೆಯ ಈ ತ್ರಿವೇಣಿ ಪ್ರೌಢದೇವರಾಯನ ಆಳ್ವಿಕೆಗೆ ಅಮರತ್ವವನ್ನು ನೀಡಿದೆ.ಜಯ ಹೇ ಕರ್ನಾಟಕ ಮಾತೆ. ವಂದನೆಗಳು.



ರೂಪ ಮಂಜುನಾಥ
ಹೊಳೆನರಸೀಪುರ

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,